# ಹೊಸ ಮನುಷ್ಯ

ಸಮಾಜವಾದಿ ಮಾಸಿಕ

ಜನವರಿ, ೨೦೨೦ | ಸಂಪಾದಕ : ಡಿ.ಎಸ್. ನಾಗಭೂಷಣ | ಸಂಪುಟ: ೮ ಸಂಚಿಕೆ: ೧೨

ಚಂದಾ ರೂ. ೨೦೦/- (೨೦೧೯ರ ಅಕ್ಟೋ.ನಿಂದ ಸೆಪ್ಟಂ. ೨೦೨೦ರವರೆಗೆ) ಸಂಸ್ಥೆಗಳಿಗೆ ರೂ. ೩೦೦/- ಪುಟ: ೨೦ ಬೆಲೆ: ರೂ. ೨೫/-

ವಿಳಾಸ: ಎಚ್.ಐ.ಜಿ-೫, ‘ನುಡಿ’, ಕಲ್ಲಳ್ಳಿ ಬಡಾವಣೆ, ವಿನೋಬ ನಗರ, ಶಿವಮೊಗ್ಗ-೫೭೭ ೨೦೪


## ಸಂಪಾದಕರ ಟಿಪ್ಪಣಿಗಳು

ಪ್ರಿಯ ಓದುಗರೆ,

ಹೋದ ವಾರ ನಡೆದ ಸೂರ್ಯಗ್ರಹಣದ ದಿನ ಇಡೀ ದೇಶ ನಡೆದುಕೊಂಡ ರೀತಿ ಗಾಬರಿ ಹುಟ್ಟಿಸುವಂತಿತ್ತು. ನಮ್ಮ ಶಿವಮೊಗ್ಗವಂತೂ ಮಧ್ಯಾಹ್ನದವರೆಗೆ ಸ್ತಬ್ಧಗೊಂಡಿತ್ತು. ಜನ ಮನೆ ಕಿಟಕಿ ಬಾಗಿಲುಗಳನ್ನು ಭದ್ರಮಾಡಿಕೊಂಡು ಯಾವುದಕ್ಕೋ ಬೆದರಿ ಅವಿತುಕೂತಂತಿದ್ದರು. ನಮ್ಮ ಮನೆಯ ಹಿಂದಿನ ದೇವಾಲಯದಲ್ಲಿ ಹೋಮ-ಹವನಗಳ ಮಂತ್ರಘೋಷ ಮೊಳಗಿಬರುತ್ತಿತ್ತು. ಬಹುತೇಕ ಎಲ್ಲ ಶಾಲೆಗಳಿಗೆ ಅರ್ಧ ದಿನ ಅನಧಿಕೃತ ರಜೆ ಘೋಷಿಸಲಾಗಿತ್ತು. ಜಿಲ್ಲೆಯ ಒಂದೆರಡು ಶಾಲೆಗಳ ಹೊರತಾಗಿ ಅವು ಮಾಡಿದ್ದ ಗ್ರಹಣ ದರ್ಶನದ ವಿಶೇಷ ವ್ಯವಸ್ಥೆಗೆ ಮಕ್ಕಳೇ ಬರಲಿಲ್ಲ. ಅವರ ಪೋಷಕರು ಅವರನ್ನು ತಡೆದಿದ್ದರು.

ಇದನ್ನು ಮೌಢ್ಯವೆಂದು ಸುಲಭವಾಗಿ ಕರೆದುಬಿಡಬಹುದು. ಆದರೆ ನಾವು ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲಿ ದಾಪುಗಾಲಿಡುತ್ತಾ ಚಂದ್ರಯಾನ ಮತ್ತು ಗುರುಯಾನಗಳ ಸಾಹಸಕ್ಕೆ ತೊಡಗಿದ್ದೇವೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ. ಬಲಿಷ್ಠ ರಾಷ್ಟ್ರದ ಕನಸು ಕಾಣುತ್ತೇವೆ. ಆದರೆ ಇಂತಹ ಸಂದರ್ಭದಲ್ಲಿ ನಾವು ಜಗತ್ತಿನ ಅತ್ಯಂತ ಪುಕ್ಕಲು ಜನ ಎಂದು ನಮಗೆ ನಾವೇ ತೋರಿಸಿಕೊಳ್ಳುತ್ತಿದ್ದೇವೆ. ಖಭೌತ ವಿಜ್ಞಾನಿಗಳು ಯಾವುದೇ ಗ್ರಹಣ ಮನುಷ್ಯನಿಗೆ ಮಾರಕವಾದ ಯಾವ ಪರಿಣಾಮವನ್ನೂ ಮಾಡುವುದಿಲ್ಲ ಎಂದು ವರ್ಷಗಳಿಂದಲೂ ಹೇಳುತ್ತಿದ್ದರೂ ಅವರ ಕಿವಿಗೆ ಬೀಳದಿರುವ ರಹಸ್ಯವೇನು? ಜನರ ಭಯ ಯಾವ ಮೂಲದಿಂದ ಬಂದದ್ದು ಎಂದು ಯೋಚನೆ ಮಾಡಬೇಕಾಗುತ್ತದೆ. ಅದು ಮೂಲಭೂತ ಪುಕ್ಕಲುತನ. ವಿಜ್ಞಾನದ ತಿಳುವಳಿಕೆಗೂ ನಿತ್ಯ ಜೀವನದ ಮಾದರಿಗೂ ಸಂಬಂಧವೇ ಇಲ್ಲದ ಇದು ನಿಜವಾಗಿಯೂ ಒಡಕು ಮನಸ್ಸಿನ ರಾಷ್ಟ್ರ. ತನ್ನ ಪುಕ್ಕಲುತನವನ್ನು ಮರೆಮಾಚಿಕೊಳ್ಳಲಷ್ಟೇ ಬಲಿಷ್ಠತೆಯ ಕನಸು ಕಾಣುವ ವಾಂಛೆಗೆ ಇದು ಸಿಕ್ಕಂತಿದೆ. ಬಲಿಷ್ಠವಾಗುವುದು ಎಂದರೇನು., ಅದರ ದಿಕ್ಕು ದಾರಿ ಯಾವುದೆಂದೂ ಗೊತ್ತಿರದ ಜನಸಮೂಹವಿದು.

ಇದು ಮೊನ್ನೆಯ ನಮ್ಮ ರಾಜ್ಯದ ಉಪಚುವಾವಣೆಗಳಲ್ಲೂ ಸಾಬೀತಾಗಿದೆ. ನಮ್ಮ ಜನ ಹದಿಮೂರರಲ್ಲಿ ಹನ್ನೊಂದು ಜನ ಪಕ್ಷಾಂತರಿಗಳನ್ನು ಭರ್ಜರಿಯಾಗಿ ಗೆಲ್ಲಿಸಿ ಕಳಿಸಿದ್ದಾರೆ. ಇವರೆಲ್ಲ, ಇವರಿಂದಲೇ ಕೆಲವೇ ತಿಂಗಳುಗಳ ಹಿಂದೆ ಯಾವ ಪಕ್ಷವನ್ನು, ಅದರ ಉಮೇದುವಾರರನ್ನು ಹೀಯಾಳಿಸಿ ಗೆದ್ದು ಬಂದಿದ್ದರೋ ಈಗ ಅದೇ ಪಕ್ಷದ ಉಮೇದುವಾರರಾಗಿ ಗೆದ್ದುಬಂದಿದ್ದಾರೆ. ಈ ಉಪಚುನಾವಣೆಗಳು ಏಕೆ ಅನಿವಾರ್ಯವಾದವು ಎಂಬುದರಲ್ಲೇ ಈ ದುರಂತದ ಮೂಲ ಇದೆ. ಇದನ್ನು ವಿವರಿಸಿ ಹೇಳುವ ಅಗತ್ಯವಿಲ್ಲ. ಯಾರು ಸರ್ಕಾರ ರಚಿಸಲು ಈ ಶಾಸಕರು ಪಕ್ಷಾಂತರ ಮಾಡಿದರೋ ಆ ಮುಖ್ಯಮಂತ್ರಿ ಯಡಿಯೂರಪ್ಪ, ಅವರೆಲ್ಲರಿಗೂ ಮಂತ್ರಿ ಅಥವಾ ಅದಕ್ಕೆ ಸಮಾನವಾದ ಹುದ್ದೆ ನೀಡುವುದು ತಮ್ಮ ‘ಧರ್ಮ’ವೆಂದು ಬಹಿರಂಗವಾಗಿಯೇ ಹೇಳಿ ‘ಧರ್ಮ’ದ ಅರ್ಥವನ್ನೇ ಮರುರಚಿಸಿದ್ದಾರೆ!. ಅಷ್ಟೇ ಅಲ್ಲ, ಈ ಪಕ್ಷಾಂತರವೆಲ್ಲ ಎಷ್ಟು ಖರ್ಚಿನಲ್ಲಿ ಯಾರ ನಿಗಾದಲ್ಲಿ ನಡೆಯಿತೆಂಬುದನ್ನೂ ಬಹಿರಂಗವಾದ ಅವರ ಮಾತಿನ ಧ್ವನಿಮುದ್ರಣ ಹೇಳಿದೆ. ಆದರೆ ಈ ದುರಂತಕ್ಕಿಂತ ದೊಡ್ಡ ದುರಂತವೆಂದರೆ ಈ ಸಂಗತಿ ನಮ್ಮ ನ್ಯಾಯಾಲಯಗಳ ಪರಿಶೀಲನೆಗೆ ಬಾರದಷ್ಟು ನಮ್ಮ ಕಾನೂನುಗಳು ‘ತಾಂತ್ರಿಕ’ವಾಗಿ ಇಕ್ಕಟ್ಟಿನಲ್ಲಿ ಬಂಧಿಸಲ್ಪಟ್ಟಿವೆ. ಇತ್ತೀಚೆಗೆ ಈ ಪಕ್ಷಾಂತರಿ ಶಾಸಕರ ಅರ್ಹತೆಯ ಬಗ್ಗೆ ಸರ್ವೋನ್ನತ ನ್ಯಾಯಾಲಯದಲ್ಲಿ ವಿಚಾರಣೆ ಮುಗಿದ ಕೆಲವೇ ದಿನಗಳ ನಂತರ ಮತ್ತು ತೀರ್ಪು ಬರುವ ಮುನ್ನ ಯಡಿಯೂರಪ್ಪನವರ ಬಾಯಿಂದಲೇ ಹೊರಬಿದ್ದ ಈ ಪಕ್ಷಾಂತರದ ಹಿಂದಿನ ನಾಟಕದ ವಿವರದ ಧ್ವನಿಮುದ್ರಣವನ್ನು ನಮ್ಮ ಸರ್ವೋನ್ನತ ನ್ಯಾಯಾಲಯ ಪರಿಗಣಿಸಲು ನಿರಾಕರಿಸಿದ್ದನ್ನು ಹೇಗೆ ವಿವರಿಸುವುದು?

ಇದಕ್ಕಾಗಿ ಒಂದು ಪಕ್ಷವನ್ನಷ್ಟೇ ದೂರಿ ಉಪಯೋಗವಿಲ್ಲ. ಇದಕ್ಕಿಂತ ಹಿಂದೆಯೇ ಈ ಪಕ್ಷಾಂತರ ವ್ಯವಹಾರ ಸಂಬಂಧವಾದ ಯಡಿಯೂರಪ್ಪನವರ ವಶೀಲಿಬಾಜಿ ಮಾತುಗಳ ಧ್ವನಿಮುದ್ರಣ ಕುಮಾರಸ್ವಾಮಿಯವರ ಸರ್ಕಾರದ ಕೈಗೆ ಸಿಕ್ಕಿತ್ತು. ಆಗ ಕುಮಾರಸ್ವಾಮಿಯವರೂ, ನಿರ್ದಿಷ್ಟಬಾಗು ಆ ಧ್ವನಿಮುದ್ರಣದಲ್ಲಿ ವ್ಯವಹಾರದ ಭಾಗವಾಗಿ ಪ್ರಸ್ತಾಪವಾಗಿದ್ದ ವಿಧಾನ ಸಭಾಧ್ಯಕ್ಷ ರಮೇಶ್‌ಕುಮಾರ್ ಅವರೂ ರಾಜಕೀಯ ಮಾನ ಮರ್ಯಾದೆಗಳ ಮಾತನ್ನಾಡುತ್ತಾ ಹಾರಾಡಿದ್ದರು. ಈ ಧ್ವನಿಮುದ್ರಣದಿಂದ ಸಂದೇಹಾಸ್ಪದರಾದ ತಾವು ಜನರ ಮುಂದೆ ಹೇಗೆ ತಲೆಯೆತ್ತಿ ಎತ್ತಿಕೊಂಡು ಓಡಾಡುವುದು ಎಂದು ಹಲುಬುತ್ತಾ ಇದರ ವಿಚಾರಣೆಗಾಗಿ ವಿಶೇಷ ತನಿಖಾ ತಂಡದ ರಚನೆಯ ಮಾತಾಡಿದ್ದರು. ಆದರೆ ಯಾವ ದೌರ್ಬಲ್ಯವೋ, ಯಾವ ರಾಜಿಯೋ ಏನೋ ಯಾವ ತನಿಖಾ ತಂಡವೂ ರಚಿತವಾಗಲಿಲ್ಲ. ರಮೇಶ್‌ಕುಮಾರ್ ಅವರಿಗೂ ಈ ಬಗ್ಗೆ ಜನರಿಗೆ ಒಂದು ವಿವರಣೆ ನೀಡಬೇಕಾಗಿದೆ ಎಂದೂ ಅನಿಸಲಿಲ್ಲ. ವಿಪರ್ಯಾಸವೆಂದರೆ ಸರ್ಕಾರವನ್ನು ಉರುಳಿಸಿದಾಗ ಇದು ಅಕ್ರಮವೆಂದು ತಮ್ಮ ಆದೇಶಗಳಲ್ಲಿ ಘೋಷಿಸುವ ಸಾಂವಿಧಾನಿಕ ಅಧಿಕಾರ ಚಲಾಯಿಸಬೇಕಾಗಿ ಬಂದವರೂ ಇವರೇ! ಆದರೆ ಈ ಅಕ್ರಮಕ್ಕೆ ತಮ್ಮ ಪಾಲೂ ಇಲ್ಲವೆ ಎಂಬುದನ್ನು ರಮೇಶ್‌ಕುಮಾರ್ ಒಮ್ಮೆ ಎದೆ ಮುಟ್ಟಿ ನೋಡಿಕೊಂಡು ಹೇಳಬೇಕು. ಹಾಗಾಗಿ ಇಂದಿನ ಖೂಳ ರಾಜಕಾರಣದ ಮೂಲ ಎಲ್ಲಿದೆ ಎಂದು ಯೋಚಿಸುವ ತುರ್ತು ಈಗ ನಮ್ಮೆದುರಿಗೆ ಇದೆ.

ಈಗ ಬಹುಪಾಲು ಜನ ಸಾರ್ವತ್ರಿಕವಾಗಿ ಯೋಚಿಸುವುದನ್ನು ನಿಲ್ಲಿಸಿದ್ದಾರೆ. ಅವರಿಗೆ ವ್ಯವಸ್ಥೆಯಲ್ಲಿ ನಂಬಿಕೆ ಹೋಗಿ ಚುನಾವಣೆಗಳನ್ನು ರಾಜಕೀಯ ನೆಲೆಯಿಂದ ನೋಡುವುದನ್ನು ನಿಲ್ಲಿಸಿದ್ದಾರೆ ವೈಯಕ್ತಿಕ ಮತ್ತು ಹೆಚ್ಚೆಂದರೆ ಜಾತಿಗೆ ದೊರಕುವ ಲಾಭಗಳ ಕಡೆ ಅದು ನೋಡುತ್ತಿದೆ. ಈ ಉಪಚುನಾವಣೆಗಳಲ್ಲಿ ಹರಿದ ಹಣದ ವರದಿಗಳು ನಮ್ಮ ಪ್ರಜಾಪ್ರಭುತ್ವದ ಮರಣ ಶಾಸನದಂತೆಯೇ ಕಂಡಿದೆ.. ಮುಖ್ಯಮಂತ್ರಿ ಮತ್ತು ಅವರ ಹಿರಿಯ ಸಹೋದ್ಯೋಗಿಯೊಬ್ಬರು ಬಹಿರಂಗವಾಗಿ ಒಂದು ಜಾತಿ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ರೀತಿ ಮತ್ತು ಅದಕ್ಕೆ ಜನರಿರಲಿ, ಚುನಾವಣಾ ಆಯೋಗವೂ ಕಿಮಕ್ ಅನ್ನಲಿಲ್ಲ ಎಂದ ಮೇಲೆ ಯಾರಿಗೆ ಯಾವ ವ್ಯವಸ್ಥೆಯಲ್ಲಿ ನಂಬಿಕೆ ಇದ್ದೀತು?

ಆದರೆ ಈ ನಿರಾಶೆ-ಹತಾಶೆಗಳ ಮದ್ಯೆಯೂ ಆಸೆ ಕಳೆದುಕೊಳ್ಳುವ ಅಗತ್ಯವಿಲ್ಲವೆಂಬ ಒಳ್ಳೆಯ ಸುದ್ದಿ ಜಾರ್ಖಂಡ್ ಮತ್ತು ಮಹಾರಾಷ್ಟ್ರದಿಂದ ಬಂದಿದೆ. ಅಲ್ಲಿ ಬಿಜೆಪಿಯ ಅಟ್ಟಹಾಸದ ಓಟವನ್ನು ತಡೆದು ನಿಲ್ಲಿಸಲಾಗಿದೆ. ಮಹಾರಾಷ್ಟ್ರದ ಸುದ್ದಿಯಂತೂ ರೋಮಾಂಚನಕಾರಿಯಾಗಿದೆ, ಎರಡು ಕಾರಣಗಳಿಂದಾಗಿ. ಒಂದು ಅಲ್ಲಿ ಇಂದಿಗೆ ಬಹು ಅಗತ್ಯವಾಗಿದ್ದ ಹೊಸ ರಾಜಕೀಯ ಅನುಸಂಧಾನದ ಮೊದಲ ದೃಢ ಹೆಜ್ಜೆ ಇಡಲಾಗಿದೆ. ಎರಡು,: ಅಜಿತ್ ಪವಾರ್ ಪ್ರಹಸನದಲ್ಲಿ ಕೇಂದ್ರ ಸಚಿವ ಸಂಪುಟದ ಸಭೆಯೇ ಇಲ್ಲದೆ ಮಹಾರಾಷ್ಟ್ರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಕೊನೆಗೊಳಿಸುವಂತೆ ಮೋದಿಯವರು ಬೆಳ್ಳಂಬೆಳಿಗ್ಗೆ ಐದೂವರೆಯಲ್ಲಿ ರಾಷ್ಟ್ರಪತಿಗಳನ್ನು ಎಬ್ಬಿಸಿ, ಕೊನೆಗೆ ನಿರರ್ಥಕವಾದ, ತರಾತುರಿಯ ಆಜ್ಞೆಗೆ ಕಾರಣವಾಗಿ ತಮ್ಮ ನಿಜರೂಪವನ್ನು ಜನರಿಗೆ ಪ್ರದರ್ಶಿಸಿದ್ದಾರೆ. ಇನ್ನು ದೇಶದ ಆರ್ಥಿಕ ದುಃಸ್ಥಿತಿಯನ್ನು ಮರೆಮಾಚಲೆಂಬಂತೆ ತಂದಿರುವ ಪೌರತ್ವ ಕಾಯಿದೆಗಳ ವಿರುದ್ಧ ಜನ ದನಿ ಎತ್ತಿರುವುದಂತೂ ಪ್ರಜಾಪೃಭುತ್ವದ ಹಿತದೃಷ್ಟಿಯಿಂದ ಪ್ರೋತ್ಸಾಹಕ ಸುದ್ದಿ ಈ ಬಗ್ಗೆ ಮುಂದಿನ ಪುಟಗಳಲ್ಲಿ ಒಂದು ವಿವರವಾದ ಲೇಖನವಿದೆ, ಓದಿರಿ.

ಎಲ್ಲರಿಗೂ ಹೊಸ ವರ್ಷದ ಶುಭಾಶಯಗಳು.

**-ಸಂಪಾದಕ**

--

ಪ್ರಚಲಿತ

# ಪೌರತ್ವ ತಿದ್ದುಪಡಿ ಮತ್ತು ನೋಂದಣಿ ಕಾಯಿದೆಗಳ ಸುತ್ತಮುತ್ತ

-ಡಿ.ಎಸ್. ನಾಗಭೂಷಣ

**ನಮ್ಮ ರಾಷ್ಟ್ರದ ಪೌರತ್ವಕ್ಕೆ ಸಂಬಂಧಿಸಿದಂತೆ ಸರ್ಕಾರ ನಡೆಸಿರುವ ಶಾಸನಾತ್ಮಕ ಕಾರ್ಯಾಚರಣೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಸರ್ಕಾರ ನೀಡುತ್ತಿರುವ ಹೇಳಿಕೆಗಳುಮತ್ತು ಕೆಲ ಸ್ಪಷ್ಟೀಕರಣಗಳ ಹೊರತಾಗಿಯೂ ಹಲವರಲ್ಲಿ ಹಲವು ಸಂಶಯ ಮತ್ತು ಭೀತಿಗಳನ್ನು ಹುಟ್ಟಿಸಿ ದೇಶಾದ್ಯಂತ ಪ್ರತಿಭಟನೆಗಳು ನಡೆದಿವೆ. ಈ ಹಿನ್ನೆಯಲ್ಲೊಂದು ವಿವರವಾದ ಒಂದು ಲೇಖನ ಇಲ್ಲಿದೆ-ಸಂ**

ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ಅದು ಸಂಸತ್ತಿನಿಂದ ಅಂಗೀಕಾರವಾದ ದಿನದಿಂದ ಅರಂಭವಾದಂತೆ ದೇಶಾದ್ಯಂತ ಪ್ರತಿಭಟನೆಗಳು ನಡೆದಿವೆ. ಪೌರತ್ವ ಒಂದು ಸಮಸ್ಯೆಯಾಗಿ ಬಹು ವರ್ಷಗಳಿಂದ ಇತ್ಯರ್ಥವಾಗದೆ ನೆನೆಗುದಿಗೆ ಬಿದ್ದಿರುವ ಅಸ್ಸಾಂನಿಂದ ಆರಂಭವಾಗಿ ಈ ಪ್ರತಿಭಟನೆಗಳು ಕೆಲವಡೆ ಹಿಂಸಾಚಾರಕ್ಕೂ ತಿರುಗಿವೆ. ಬಿಜೆಪಿ ಆಳ್ವಿಕೆಯ ಎರಡು ರಾಜ್ಯಗಳಲ್ಲಿ ಪೋಲೀಸರಿಂದ ಗೋಲೀಬಾರ್ ಕೂಡ ನಡೆದು ಸಾಕಷ್ಟು ಜೀವಹಾನಿಯೂ ಆಗಿದೆ. ಪೌರತ್ವ ತಿದ್ದುಪಡಿ ಮಸೂದೆಯ ಬೆನ್ನಲ್ಲೇ ರಾಷ್ಟ್ರೀಯ ಪೌರತ್ವ ನೋಂದಣಿ ಕಾರ್ಯಾಚರಣೆಯೂ ಆರಂಭವಾಗಲಿದೆ ಎಂದು ಸಂಸತ್ತಿನಲ್ಲಿ ಈ ತಿದ್ದುಪಡಿ ಮಸೂದೆಯ ಪ್ರಮುಖ ರೂವಾರಿಯೂ ಆದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹೇಳಿದ್ದರಿಂದಾಗಿ ಈ ಪ್ರತಿಭಟನೆಗಳು ಹೆಚ್ಚಿನ ಜನರ ಬೆಂಬಲ ಗಳಿಸಿ ತೀವ್ರವಾದವು. ಈ ಮಧ್ಯೆ ಜಾರ್ಖಂಡ್ ರಾಜ್ಯದ ವಿಧಾನ ಸಭಾ ಚುನಾವಣೆಗಳು ನಡೆದು ಅಲ್ಲಿ ಬಿಜೆಪಿ ಅಧಿಕಾರ ಕಳೆದುಕೊಂಡಿದೆ. ಈ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಪ್ರಧಾನ ಮಂತ್ರಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರೂ ಈ ಕಾಯಿದೆಯ ಪರ ಮಾತನಾಡಿ ಜನ ಬೆಂಬಲ ಕೋರಿದ್ದರು ಎಂಬುದು ಇಲ್ಲಿ ಗಮನಾರ್ಹ. ಆದರೆ ಈಗ ಜಾರ್ಕಂಡ್ ಸೋಲಿನ ನಂತರ ಮತ್ತು ತಿದ್ದುಪಡಿ ಮಸೂದೆ ಮತ್ತು ಪೌರತ್ವ ನೋಂದಣಿ ಕಾರ್ಯಾಚರಣೆಯ ಪ್ರಕಟಣೆಯ ವಿರುದ್ಧ ಪ್ರತಿಭಟನೆಗಳು ನಿಲ್ಲದೆ ಮುಂದುವರೆದಿರುವುದನ್ನು ಗಮನಿಸಿಯೋ ಏನೋ ಇತ್ತೀಚೆಗೆ ಮೋದಿಯವರು ರಾಗ ಬದಲಿಸಿ ತಿದ್ದಪಡಿ ಮಸೂದೆಯ ಬಗ್ಗೆ ಏನೂ ಮಾತನಾಡದೆ, ಪೌರತ್ವ ನೋಂದಣಿಯ ಪ್ರಸ್ತಾಪ ಸರ್ಕಾರದ ಮುಂದಿಲ್ಲ ಎಂದಿದ್ದಾರೆ. ನಂತರ ಅಮಿತ್ ಶಾ ಅವರೂ ಇದನ್ನು ಅನುಮೋದಿಸಿದ್ದಾರೆ.

ಆದರೆ ಇದು ದೇಶದಲ್ಲಿ ನಡೆದಿರುವ ಪ್ರತಿಭಟನೆಗಳನ್ನು ನಿಲ್ಲಿಸಲು ಮತ್ತು ಜಾರ್ಕಂಡ್ ಚುನಾವಣೆಗಳು ಸೂಚಿಸಿರುವಂತೆ ಆಡಳಿತಾರೂಢ ಬಿಜೆಪಿಗೆ ಜನ ಬೆಂಬಲ ಕಡಿಮೆಯಾಗುತ್ತಿರುವುದನ್ನು ಗಮನಿಸಿದ ಗಾಬರಿಯಲ್ಲಿ ಬಂದಿರುವ ಸ್ಪಷ್ಟೀಕರಣವೋ ಅಥವಾ ನಿಜವಾಗಿ ದೇಶದ ಜನರ ವಿರೋಧಕ್ಕೆ ತಲೆಬಾಗಿ ನೀಡಿರುವ ಹೇಳಿಕೆಯೋ ಎಂಬುದು ಇನ್ನೂ ಖಚಿತವಾಗಿಲ್ಲ.. ಏಕೆಂದರೆ ಪೌರತ್ವ ತಿದ್ದುಪಡಿ ಮಸೂದೆಯನ್ನು ಮಂಡಿಸುತ್ತಾ ಮಾತನಾಡಿದ ಶಾ ಅವರು ಅದರ ಪರವಾಗಿ ಮುಂದೊಡ್ಡಿದ್ದ ವಾದಗಳು ಮತ್ತು ರಾಷ್ಟ್ರೀಯ ಪೌರತ್ವ ನೋಂದಣಿ ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ಸೇರಿರುವ ಒಂದು ಬದ್ಧತೆ ಎಂದು ಹೇಳಿದ್ದನ್ನು ಗಮನಿಸಿದಾಗ ರಾಷ್ಟ್ರೀಯ ಪೌರತ್ವ ನೋಂದಣಿಯ ವಿಷಯ ಕೇಂದ್ರ ಸಚಿವ ಸಂಪುಟದಲ್ಲಿ ಪ್ರಸ್ತಾಪಕ್ಕೇ ಬಂದಿಲ್ಲ ಮತ್ತು ಅದರ ಕರಡೇ ಸಿದ್ಧಗೊಂಡಿಲ್ಲ ಎಂಬ ಪ್ರಧಾನ ಮಂತ್ರಿಯವರ ಮಾತನ್ನು ಅದರ ಮುಖಬೆಲೆಯಲ್ಲಿ ನಂಬುವುದು ಕಷ್ಟ. ಜೊತೆಗೆ, ೨೦೨೦ ಕ್ಕೆ ನಿಗದಿಯಾಗಿರುವ ರಾಷ್ಟ್ರೀಯ ಜನಸಂಖ್ಯಾ ಕಾರ್ಯಚರಣೆಯನ್ನು ರಾಷ್ಟ್ರೀಯ ಪೌರತ್ವ ನೋಂದಣಿಗೆ ಸಿದ್ಧತೆಯ ರೂಪದಲ್ಲಿ ನಡೆಸುವುದಾಗಿ ಸರ್ಕಾರ ಈ ಹಿಂದೆ ಹೇಳಿದ್ದು ಅದಕ್ಕಾಗಿ ೨೦೧೮-೧೯ರ ವರ್ಷದಲ್ಲೇ ಹಣ ನಿಗದಿ ಮಾಡಿರುವುದೂ ಹೆಚ್ಚಿನ ಸಂಶಯಕ್ಕೆ ಎಡೆ ಮಾಡಿದೆ. ಒಂದೇ ವಿಷಯದ ಬಗ್ಗೆ ಹಲವು ನಾಲಗೆಗಳಲ್ಲಿ ಮಾತನಾಡುವುದನ್ನು ಒಂದು ಕಲೆಯಾಗಿ ರೂಢಿಸಿಕೊಂಡಿರುವ ಬಿಜೆಪಿ ಪಕ್ಷದ ಮಾತುಗಳ ವಿಶ್ವಾಸಾರ್ಹತೆಯೂ ಜನಮನದಲ್ಲಿ ಕುಂದಿದೆ.

ಅದೇನೇ ಇರಲಿ, ಈ ಎಲ್ಲ ವಿಷಯಗಳ ಬಗ್ಗೆ ಒಂದಿಷ್ಟು ಸ್ಪಷ್ಟತೆ ಪಡೆಯಲು ಮೊದಲು ನಾವು ಕೆಲವು ಅಂಶಗಳ ಪ್ರಾಥಮಿಕ ಪರಿಚಯ ಮಾಡಿಕೊಳ್ಳುವುದು ಸೂಕ್ತ. ರಾಷ್ಟ್ರೀಯ ಪೌರತ್ವ ನೋಂದಣಿ ಕಾಯಿದೆ ಮೋದಿ-ಶಾ ಅವರ ಹೊಸ ಕಾಯಿದೆಯೇನಲ್ಲ. ಅದು ೧೯೫೫ ರಿಂದಲೂ ಸಂಬಂಧಿತ ವಿದೇಶೀಯರ ಕಾಯಿದೆ ಮತ್ತು ಪಾಸ್‌ಪೋರ್ಟ್ ಕಾಯಿದೆಗಳೊಂದಿಗೆ ಸಂವಿಧಾನದ ಭಾಗವಾಗಿದೆ. ಅದರ ಪ್ರಕಾರವೇ ಈವರೆಗೆ ಮತೀಯ ಕಿರುಕುಳ, ರಾಜಕೀಯ ಕಿರುಕುಳ, ಯುದ್ಧ, ಪ್ರಾಕೃತಿಕ ವಿಕೋಪ, ಅಂತರ್ದೇಶೀಯ ವಿವಾಹ ಇತ್ಯಾದಿ ಬೇರೆ ಬೇರೆ ಕಾರಣಗಳಿಗಾಗಿ ವಿದೇಶಿಯರಿಗೆ ನಮ್ಮ ದೇಶದಲ್ಲಿ ಪೌರತ್ವ ನೀಡಲಾಗುತ್ತಾ ಬರಲಾಗಿದೆ. ಇನ್ನೂ ಸಾವಿರಾರು ಜನರ ಪೌರತ್ವದ ಅರ್ಜಿಗಳು ದಾಖಲೆಗಳ ಪರಿಶೀಲನೆಯ ವಿವಿಧ ಹಂತಗಳಲ್ಲಿವೆ. ಇನ್ನು ರಾಷ್ಟ್ರೀಯ ಜನಗಣತಿ ಕಾಯಿದೆ ಪೌರತ್ವದ ಪರಿಗಣನೆ ಇಲ್ಲದೆ ದೇಶದಲ್ಲಿರುವ ಒಟ್ಟು ಜನಸಂಖ್ಯೆ ಮತ್ತವರ ಸ್ಥಿತಿ ಗತಿಗಳ ಬಗೆಗಿನ ಮಾಹಿತಿ ಸಂಗ್ರಹಕ್ಕೆ ಸಂಬಂಧಿಸಿದ್ದು. ಇದಕ್ಕೆ ಭಾರತದಲ್ಲಿನ ವಾಸ ಮಾತ್ರ ಆಧಾರ. ಇದಕ್ಕಾಗಿ ಯಾವ ದಾಖಲೆಗಳ ಅವಶ್ಯಕತೆಯೂ ಇಲ್ಲ. ಆದರೆ ಈಗ ಮೋದಿ-ಶಾ ಆಡಳಿತ ಜನಸಂಖ್ಯಾ ಕಾರ್ಯಾಚರಣೆಗೂ ರಾಷ್ಟ್ರೀಯ ಪೌರತ್ವ ಕಾಯಿದೆಗೂ ಸಂಬಂಧ ಕಲ್ಪಿಸಿದ್ದಲ್ಲದೆ, ಪೌರತ್ವ ಕಾಯಿದೆಗೆ ತಿದ್ದುಪಡಿ ತಂದಿದೆ. ಸಮಸ್ಯೆ-ಸಂದಿಗ್ಧ-ಸಂಶಯಗಳು ಆರಂಭವಾಗುವುದು ಇಲ್ಲಿ.



## ಅಸ್ಸಾಂ ಒಪ್ಪಂದದ ಪರಿಣಾಮಗಳು

ಹಾಗಾಗಿ ಮೊದಲ ಪ್ರಶ್ನೆ ಈ ಸರ್ಕಾರ ಈ ತಿದ್ದುಪಡಿ ತರುವ ಅವಶ್ಯಕತೆ ಏನಿತ್ತು ಎಂಬುದು. ರಾಷ್ಟ್ರ ವಿಭಜನೆಯ ಕಾಲದಿಂದಲೂ ಈಗ ಬಂಗ್ಲಾದೇಶವೆನ್ನಿಸಿರುವ ಪೂರ್ವ ಪಾಕಿಸ್ತಾನದಿಂದ ಅದರ ಭಾರತದ ಗಡಿಯಲ್ಲಿರುವ ರಾಜ್ಯ-ಕೇಂದ್ರಾಡಳಿತ ಪ್ರದೇಶಗಳಿಗೆ ನಿರಂತರ ಅಕ್ರಮ ವಲಸೆ ನಡೆದೇ ಇದೆ. ಅಂತಾರಾಷ್ಟ್ರೀಯ ಭೂ ಗಡಿಗಳನ್ನು ಹೊಂದಿರುವ, ವಿಶೇಷವಾಗಿ ಈ ಮುನ್ನ ಒಂದೇ ದೇಶದ ಭಾಗಗಳಾಗಿದ್ದ ರಾಷ್ಟ್ರಗಳಲ್ಲಿ ಇದು ಸಾಮಾನ್ಯ. ಹೀಗಾಗಿ ಈಶಾನ್ಯ ರಾಜ್ಯಗಳಲ್ಲಿ, ವಿಶೇಷವಾಗಿ ಅಸ್ಸಾಂನಲ್ಲಿ ಕ್ರಮೇಣ ಬಂಗಾಳಿ ಭಾಷಿಕರ ಸಂಖ್ಯೆ ಹೆಚ್ಚುತ್ತಾ ಹೋಗಿ ಕೆಲವೆಡೆ ರಾಜ್ಯದ ಮೂಲ ನಿವಾಸಿಗಳಿಗೆ ತಮ್ಮ ಲೌಕಿಕ ಮತ್ತು ಸಾಂಸ್ಕೃತಿಕ ಅಸ್ತಿತ್ವ ಅಪಾಯದಲ್ಲಿದೆ ಎಂಬ ಆತಂಕ ಶುರುವಾಯಿತು. ಇನ್ನು ಇತರ ಈಶಾನ್ಯ ಬುಡಕಟ್ಟು ಪ್ರಧಾನ ರಾಜ್ಯಗಳಲ್ಲಿ ಬುಡಕಟ್ಟುಗಳೂ ಇದೇ ಆತಂಕಕ್ಕೀಡಾದವು. ಇದರ ಪರಿಣಾಮವಾಗಿ ಎಪ್ಪತ್ತರ ದಶಕದ ಮಧ್ಯ ಭಾಗದಲ್ಲಿ ಅಸ್ಸಾಂನಲ್ಲಿ ಆರಂಭವಾದ ವಿದ್ಯಾರ್ಥಿ ಚಳುವಳಿ ೧೯೮೫ರಲ್ಲಿ ರಾಜೀವ್ ಗಾಂಧಿ ಪ್ರಧಾನ ಮಂತ್ರಿಯಾಗಿದ್ದಾಗ ಅವರ ಮಧ್ಯಸ್ಥಿಕೆಯಲ್ಲಿ ರೂಪಿತವಾದ ಅಸ್ಸಾಂ ಒಪ್ಪಂದದೊಂದಿಗೆ ಕೊನೆಗೊಂಡಿತು. ಇದರ ಪ್ರಕಾರ ೧೯೬೬ ಜನವರಿ ೧ಕ್ಕಿಂತ ಮುಂಚೆ ಅಸ್ಸಾಂ ಪ್ರವೇಶಿಸಿದ ಎಲ್ಲ ವಲಸೆಗಾರರಿಗೂ ಭಾರತದ ಪ್ರಜೆತನ ನೀಡಲಾಗವುದು ಮತ್ತು ನಂತರದ ದಿನಾಂಕದಿಂದ ೧೯೭೧ರ ಮಾರ್ಚ್ ೨೪ರ ನಡುವೆ ಬಂದ ವಲಸಿಗರನ್ನು ೧೯೪೬ರ ವಿದೇಶೀಯರ ಕಾಯಿದೆ ಪ್ರಕಾರ ಗುರುತಿಸಿ ಇದಕ್ಕಾಗಿ ರಚಿಸಲ್ಪಡುವ ನ್ಯಾಯಮಂಡಳಿಗಳ ಪರಿಶೀಲನೆಯ ನಂತರ ಅವರಿಗೆ ಹತ್ತು ವರ್ಷಗಳ ಕಾಲ ಮತದಾನದ ಹಕ್ಕು ನಿರಾಕರಿಸಿ ದೇಶಲ್ಲೇ ಉಳಿಯಲು ಅವಕಾಶ ನೀಡಲಾಗಲಾಗುವುದು. ನಂತರ ಬಂದ ಎಲ್ಲರನ್ನೂ ಹೊರ ಹಾಕಲಾಗುವುದು. ಈ ಒಪ್ಪಂದದ ಅನುಷ್ಠಾನಕ್ಕಾಗಿ ಮೊದಲ ಬಾರಿಗೆ ರಾಷ್ಟ್ರೀಯ ಪೌರತ್ವ ನೋಂದಣಿ ಕಾಯಿದೆ ವ್ಯಾಪಕವಾಗಿ ರಾಷ್ಟ್ರೀಯ ಚರ್ಚೆಗೆ ಒಳಗಾಯಿತೆನ್ನಬಹುದು. ಈ ಚರ್ಚೆಯಲ್ಲಿ ಬಿಜೆಪಿ ಒಪ್ಪಂದದ ಪರವಾಗಿತ್ತು.

## ಹಿಂದೂಗಳ ರಕ್ಷಣೆಯ ಪುಣ್ಯದ ಕೆಲಸಕ್ಕಾಗಿ...

ಅಸ್ಸಾಂ ಒಪ್ಪಂದ ಅನುಷ್ಠಾನದ ಪ್ರಕ್ರಿಯೆ ಅಸ್ಸಾಂನ ಪಕ್ಷರಾಜಕಾರಣದ ಏಳುಬೀಳುಗಳಿಗೆ ಸಿಕ್ಕಿ ತಡವಾಗುತ್ತಾ ಅಂತೂ ಕೊನೆಗೆ ಸರ್ವೋಚ್ಚ ನ್ಯಾಯಾಲಯದ ಸುಪರ್ದಿಯಲ್ಲಿ ಒಂದು ಅಂತಿಮ ಹಂತಕ್ಕೆ ಬಂದು ಕಳೆದ ವರ್ಷ ಒಟ್ಟು ೧೯ ಲಕ್ಷ ಜನರನ್ನು ರಾಜ್ಯದದಿಂದ ಹೊರಹಾಕಬೇಕಾದ ಜನರೆಂದು ಗುರುತಿಸಲಾಯಿತು. ಆದರೆ ಯಾವಾಗ ಈ ೧೯ ಲಕ್ಷ ಜನರಲ್ಲಿ ೧೩ ಲಕ್ಷ ಜನ ಹಿಂದೂಗಳೆಂದು ಗೊತ್ತಾಯಿತೋ ಆಗ ಬಿಜೆಪಿ ಈ ಒಪ್ಪಂದದ ಬಗ್ಗೆ ಚಿಂತಿತವಾಯಿತು ಹಾಗೂ ಆ ಬಗ್ಗೆ ಮರು ಆಲೋಚನೆ ಶುರುಮಾಡಿತು. ಅದರ ಕೂಸೇ ಈ ರಾಷ್ಟ್ರೀಯ ಪೌರತ್ವ ತಿದ್ದುಪಡಿ ಕಾಯಿದೆ. ಅಸ್ಸಾಂನ ಹಿಂದೂ ವಲಸಿಗರ ರಕ್ಷಣೆಗೆಂದೇ ಕಾನೂನು ಬದಲಾವಣೆ ಮಾಡಲು ನಮ್ಮ ಧರ್ಮ ನಿರಪೇಕ್ಷ ಸಂವಿಧಾನದಲ್ಲಿ ಅವಕಾಶವಿಲ್ಲವಾದ್ದರಿಂದ ಅದು ರಾಷ್ಟ್ರೀಯ ಮಟ್ಟದ ತಿದ್ದಪಡಿಯೊಂದನ್ನು ರೂಪಿಸಿ ಅದರಲ್ಲಿ

ಹಿಂದೂಗಳೊಂದಿಗೆ ನಾಮಕಾವಸ್ತೆಯಾಗಿ ಸಿಖ್, ಜೈನ, ಬೌದ್ಧ ಪಾರ್ಸಿ. ಕ್ರೈಸ್ತರನ್ನೂ ಸೇರಿಸಿ, ಇಸ್ಲಾಮಿ ರಾಷ್ಟ್ರಗಳೆನಿಸಿದ ಬಂಗ್ಲಾದೇಶ, ಪಾಕಿಸ್ತಾನ ಮತ್ತು ಆಫ್ಘನಿಸ್ತಾನಗಳಿಂದ ಧಾರ್ಮಿಕ ದೌರ್ಜನ್ಯಗಳ ಕಾರಣದಿಂದ ಈ ದೇಶಗಳಿದಾಂದ ೨೦೧೪ರ ಡಿಸೆಂಬರ್ ೩೧ರ ಮುನ್ನ ಬಂದು ೫ ವರ್ಷ ಪೂರೈಸಿರುವ ಎಲ್ಲ (ಅಕ್ರಮ) ವಲಸೆಗಾರರಿಗೆ ನೇರವಾಗಿ ಪೌರತ್ವ ನೀಡುವ ಕಾನೂನನ್ನು ಜಾರಿಗೆ ತಂದಿದೆ. ತನ್ನನ್ನು ಮತೀಯತೆಯ ಆರೋಪದಿಂದ ರಕ್ಷಿಸಿಕೊಳ್ಳಲು ಈ ಕಾನೂನಿನಲ್ಲಿ ಹಿಯದೂಗಳ ಜೊತೆಗೆ ಇತರ ಐದು ಧರ್ಮೀಯರನ್ನೂ ಸೇರಿಸಿಕೊಳ್ಳಲಾಗಿದೆ ಮತ್ತು ಬಹುಸಂಖ್ಯಾತರ ಧಾರ್ಮಿಕ ಭಾವನಾತ್ಮಕತೆಯ ಪ್ರಚೋದನೆಯ ಮೂಲಕ ಜನಬೆಂಬಲ ಗಳಿಸಲು ಮೂರು ರಾಷ್ಟ್ರಗಳನ್ನು ಇಸ್ಲಾಮಿಕ್ ರಾಷ್ಟ್ರಗಳೆಂದು ಗುರುತಿಸಿ ಅವನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಧಾರ್ಮಿಕ ಕಿರುಕುಳದ ಕಾರಣವನ್ನು ಕಾನೂನಿಗೆ ಆಧಾರವನ್ನಾಗಿ ಮಾಡಲಾಗಿದೆ.

ಈ ನಡೆಯ ಹಿಂದೆ ಇನ್ನೂ ಒಂದು ಸೀಮಿತ ಮತ್ತು ಮತ್ತೊಂದು ರಾಷ್ಟ್ರೀಯ ಮಟ್ಟದ ರಾಜಕೀಯ ಉದ್ದೇಶವೂ ಎದ್ದು ಕಾಣುವಂತಿದೆ. ಸೀಮಿತ ರಾಜಕೀಯ ಉದ್ದೇಶವೆಂದರೆ, ಈ ಕಾನೂನಿನ ಪ್ರಕಾರ ಹಿಂದೂ ವಲಸಿಗರಿಗೆ ನೇರ ಪೌರತ್ವ ನೀಡಲಾಗುವುದರಿಂದ ಈ ವರ್ಷ ನಡೆಯಲಿರುವ ಪ. ಬಂಗಾಳ ವಿಧಾನ ಸಭಾ ಚುನಾವಣೆಯಲ್ಲಿ ಹಿಂದೂ ಮತದಾರ ಸಮುದಾಯದ ಮತ್ತು ಹೊಸ ಮತದಾರರಾಗುವ ಹಿಂದೂ ವಲಸಿಗರ ಬೆಂಬಲ ಪಡೆಯಬಹುದು  ಹಾಗೂ ಅಲ್ಲಿ ಈಗ ಸೃಷ್ಟಿಸಲಾಗಿರುವ ಹಿಂದೂ–ಮುಸ್ಲಿಂ ಭಾವನಾತ್ಮಕ ವಿಭಜನೆಯನ್ನು ಚುನಾವಣಾ ಲಾಭಕ್ಕಾಗಿ ಬಳಸಿಕೊಳ್ಳಬಹುದು. ಇನ್ನು ರಾಷ್ಟ್ರೀಯ ಮಟ್ಟದ ರಾಜಕೀಯ ಉದ್ದೇಶವೆಂದರೆ, ಮೂರು ಇಸ್ಲಾಮಿ ರಾಷ್ಟ್ರಗಳ ಹೆಸರಿನಲ್ಲಿ ಧಾರ್ಮಿಕ ದೌರ್ಜನ್ಯದ ಮಾತನಾಡಿ ಹಿಂದೂ ವಲಸಿಗರನ್ನು ತ್ರಿಶಂಕು ಸ್ಥಿತಿಯಿಂದ ಪಾರುಮಾಡಿದ 'ಪುಣ್ಯ'ದ ಕೆಲಸಕ್ಕಾಗಿ ಹಿಂದೂ ಸಮುದಾಯದ ಭಾವನಾತ್ಮಕ ಮೆಚ್ಚುಗೆ ಗಳಿಸಿ ಬಿಜೆಪಿ ತನ್ನ 'ಹಿಂದೂ ರಾಷ್ಟ್ರ'ದ ಕಲ್ಪನೆಯ ಸಾಕಾರಕ್ಕಾಗಿ ಒಂದು ದೃಢ ಹೆಜ್ಜೆಗೆ ಜಾಗ ಮಾಡಿಕೊಳ್ಳುವುದು.

## ಸಾಂವಿಧಾನಿಕ ಸಮರ್ಪಕತೆ ಮತ್ತು ಸಾಂವಿಧಾನಿಕ ನೈತಿಕತೆ

ಈ ತಿದ್ದುಪಡಿಯಾದ ಕಾನೂನಿನ ಬಗ್ಗೆ ವಿರೋಧ, ಪ್ರತಿಭಟನೆ ವ್ಯಕ್ತಪಡಿಸುತ್ತಿರುವ ಹೆಚ್ಚಿನ ಜನ ಎತ್ತಿ ಹೇಳುತ್ತಿರುವುದು ಅದರ ಕೋಮುವಾದಿ ಆಯಾಮವನ್ನು. ಇದು ನಮ್ಮ ಸಂವಿಧಾನದ, ಹಾಗಾಗಿ ನಮ್ಮ ರಾಷ್ಟ್ರದ ಅಡಿಪಾಯ ತತ್ವಗಳಲ್ಲಿ ಒಂದಾದ ಧರ್ಮ ನಿರಪೇಕ್ಷ ತತ್ವದ ಉಲ್ಲಂಘನೆಯಾಗಿದೆ ಎಂಬುದನ್ನು. ಈ ಸಂಬಂಧವಾಗಿ ಅವರು  ಎಲ್ಲ ಪ್ರಜೆಗಳಿಗೆ ಎಲ್ಲ ನೆಲೆಗಳ ಸಮಾನತೆ ಒದಗಿಸುವ ಸಂವಿಧಾನದ ೧೪, ೧೫, ೧೬ ಹಾಗೂ ೨೧ನೇ ಪರಿಚ್ಛೇದಗಳಳನ್ನು ಉಲ್ಲೇಖಿಸುತ್ತಾರೆ. ಆದರೆ ಸರ್ಕಾರ ಇದನ್ನು ಗಮನಿಸಿಲ್ಲವೆ? ಗಮನಿಸಿದೆ. ಅದು ಸಮಾನತೆಯ ತತ್ವಕ್ಕೆ ವಿಶೇಷ ಸಂದರ್ಭದಲ್ಲಿ–ಅದು ಸಂವಿಧಾನದ ಆಧಾರ ತತ್ವಗಳಿಗೆ ವಿರುದ್ಧವಾಗಿಲ್ಲದಿದ್ದರೆ–ರಿಯಾಯ್ತಿಗೂ ಸಂವಿಧಾನದಲ್ಲಿ ಅವಕಾಶವಿರುವುದರಿಂದ ಈ ರಿಯಾತಿಗೆ ಧರ್ಮ ಆಧಾರವಾಗಿಲ್ಲವೆಂದು ಸೂಚಿಸಲು ಧಾರ್ಮಿಕ ಕಿರುಕುಳಕ್ಕೆ ಒಳಗಾದ 'ವರ್ಗ'ವೆಂಬ ಧರ್ಮ ನಿರಪೇಕ್ಷ ಸಮುದಾಯದ ಪರಿಭಾಷೆಯನ್ನು ಈ ಕಾನೂನಿನಲ್ಲಿ ಅಳವಡಿಸಿದೆ! ಇದೆಲ್ಲ ಎಷ್ಟರಮಟ್ಟಿಗೆ ನಮ್ಮ ಸರ್ವೋನ್ನತ ನ್ಯಾಯಾಲಯದಿಂದ ಸಾಂವಿಧಾನಿಕ ಪರಿಶೀಲನೆಯ ಪ್ರಕ್ರಿಯೆಯಲ್ಲಿ ಹಾದು ಗೆದ್ದುಬರುವುದೋ ಕಾದು ನೋಡಬೇಕಾಗಿದೆ.

ಆದರೆ ಪ್ರಶ್ನೆ ಈ ಕಾನೂನಿನ ಸಾಂವಿಧಾನಿಕತೆಗಿಂತ ದೊಡ್ಡದು. ಏಕೆಂದರೆ ಈ ಸರ್ಕಾರದ ನಂತರ ಇನ್ನೊಂದು ಸರ್ಕಾರ ಬಂದು ಮತ್ತೊಂದು ತಿದ್ದುಪಡಿ ತಂದು ಈ ಕಾನೂನನ್ನು ಬದಲಾಯಿಸಬಹುದು. ಅಥವಾ ಮುಂದೊಂದು ದಿನ ನ್ಯಾಯಾಲಯವೇ ತನ್ನ ತೀರ್ಪನ್ನು ಹೊಸ ಸಂದರ್ಭಗಳು ಹುಟ್ಟಿಸುವ ವಿಷಯದ ಹೊಸ ಆಯಾಮಗಳ ಹಿನ್ನೆಲೆಯಲ್ಲಿ ಅದನ್ನು  ಪರಿಷ್ಕರಿಸಲೂಬಹುದು. ಇತ್ತೀಚೆಗೆ ನ್ಯಾಯಾಂಗ ಲೋಕದಲ್ಲಿ ಸಾಂವಿಧಾನಿಕ (ಪಠ್ಯೀಯ)ಸಮರ್ಪಕತೆಯ ಜೊತೆಗೇ ಸಾಂವಿಧಾನಿಕ ನೈತಿಕತೆಯ ಕಲ್ಪನೆಯೂ ಪ್ರಚಲಿತಕ್ಕೆ ಬಂದಿದೆ. ಆದ್ದರಿಂದ ಈ ತಿದ್ದಿದ ಕಾಯಿದೆಯೊಂದಿಗೆ ರಾಷ್ಟ್ರೀಯ ಪೌರತ್ವ ಕಾಯಿದೆಯನ್ನೂ ಜೋಡಿಸಿ ನೋಡಿದಾಗ ಈ ಸರ್ಕಾರ ಮಾಡಹೊರಟಿರುವ ಒಂದು ದೊಡ್ಡ ಅನೈತಿಕ ಕಾರ್ಯಾಚರಣೆಯ ಸುಳಿವು ಸಿಗುತ್ತದೆ. ಹಾಗಾಗಿ, ಇದೊಂದು ರಾಷ್ಟ್ರೀಯ ಬುಡಮೇಲು ಕೃತ್ಯದ ಪ್ರಯತ್ನವೇ ಸರಿ.

## ರಾಷ್ಟ್ರ ವಿಭಜನೆ ಕಾಂಗ್ರೆಸ್ ಮತ್ತು ಸಾವರ್ಕರ್

ಈ ಕಾಯಿದೆಗೆ ಸರ್ಕಾರ ಆಧಾರವಾಗಿ ಹೇಳಿದ ಮಾತೆಂದರೆ, ರಾಷ್ಟ್ರ ವಿಭಜನೆಯಾಗಿರದಿದ್ದರೆ ಈ ಕಾಯಿದೆಯ ಅಗತ್ಯವಿರಲಿಲ್ಲ. ನಂತರ ಇದಕ್ಕೆ ರಾಜಕೀಯ ಉದ್ದೇಶದಿಂದ ಜೋಡಿಸಿದ ಮಾತೆಂದರೆ, ಈ ರಾಷ್ಟ್ರ ವಿಭಜನೆಗೆ ಕಾಂಗ್ರೆಸ್ ಕಾರಣ ಅಥವಾ ಕಾಂಗ್ರೆಸ್ ಒಪ್ಪಿಗೆಯಿಂದ ಈ ವಿಭಜನೆ ನಡೆಯಿತು ಎಂಬುದು. ಆದರೆ ಈ ಎಲ್ಲವೂ ಅರ್ಧ ಸತ್ಯಗಳು. ಈ ಅರ್ಧ ಸತ್ಯದ ಮಾತಿರಲಿ, ಪೂರ್ಣ ಸತ್ಯವೆಂದರೆ,



ಈ ಮಾತುಗಳನ್ನಾಡಲು ಬಿಜೆಪಿಗೆ ಯಾವುದೇ ನೈತಿಕ ಹಕ್ಕಿಲ್ಲ. ಮೊದಲು ಅದಕ್ಕೆ ಮನಸ್ಸಾಕ್ಷಿ ಎಂಬುದೊಂದಿದ್ದರೆ, ಅದಕ್ಕೆ ತಿಳಿದಿರಬೇಕು, ತಾನು ಈಗ ಆಳುತ್ತಿರುವ ರಾಷ್ಟ್ರ ಅದರೆಲ್ಲ ಧಾರಣ ಶಕ್ತಿಗಳೊಂದಿಗೆ ಹುಟ್ಟಿದ್ದು ಕಾಂಗ್ರೆಸ್ ಒಂದು ಪಕ್ಷವಾಗಿ ಅಲ್ಲದಿದ್ದರೂ, ಒಂದು ಸಂಘಟನೆಯಾಗಿ ಮುನ್ನಡೆಸಿದ ರಾಷ್ಟ್ರೀಯ ಆಂದೋಲನವೆಂದೂ ಕರೆಯಲಾಗುವ ಸ್ವಾತಂತ್ರ್ಯ ಆಂದೋಲನದ ಫಲವಾಗಿ. ಆಗ ನಿಮ್ಮ ಸೈದ್ಧಾಂತಿಕ ಪಿತೃ ಮಹಾಶಯರು ಆ ಆಂದೋಲನದ ವಿರುದ್ಧವಿದ್ದರಷ್ಟೇ ಅಲ್ಲ, ಬ್ರಿಟಿಷ್ ವಸಾಹತುಶಾಹಿ ಪ್ರಭುತ್ವದ ಚರಣದಾಸರಾಗಿದ್ದರು. ನಿಮ್ಮ ವೀರ ಸಾವರ್ಕರ್ ಅವರು ತಾವು ದೇಶ ಭಕ್ತಿಯ ಹೆಸರಿನಲ್ಲಿ ಮಾಡಿದ ಗಂಭೀರ ಅಪರಾಧಕ್ಕಾಗಿ ಗುರಿಯಾದ ಕರಿನೀರಿನ ಶಿಕ್ಷೆ ತಾಳಲಾರದೆ ಬ್ರಿಟಿಷ್ ಪ್ರಭುತ್ವಕ್ಕೆ ಪದೇ ಪದೇ ಕ್ಷಮಾಪಣಾ ಪತ್ರಗಳನ್ನು ಬರೆದು ಆ ವಿದೇಶಿ ಪ್ರಭುತ್ವದೊಂದಿಗೆ ಸಹಕರಿಸುವುದಾಗಿ ಮುಚ್ಚಳಿಕೆ ಬರೆದುಕೊಟ್ಟು ಹೊರ ಬಂದು ಸ್ವಾತಂತ್ರ್ಯ ಆಂದೋಲನಕ್ಕೆ ಅಡ್ಡಿಯಾಗಿ ಹಿಂದೂ ಮಹಾಸಭಾವನ್ನು ಪೋಷಿಸಿದರು. ನಿಜ, ಕರಿನೀರಿನ ಶಿಕ್ಷೆ ಭಯಂಕರವಾದದ್ದು. ಆದನ್ನು ಸಾಮಾನ್ಯರು ಎದುರಿಸಲಾರರು. ಆದರೆ ಅಂತಹ ಶಿಕ್ಷೆಗೆ ಗುರಿಯಾಗುವಂತಹ ಅಪರಾಧಗ:ಳನ್ನು ಮಾಡುವ ಮುನ್ನ ಅದರ ಎಚ್ಚರವಿರಬೇಕಲ್ಲವೆ? ಭಗತ್‌ಸಿಂಗ್ ಕೂಡ ಹತ್ಯೆಯ ರಾಜಕಾರಣ ಮಾಡಿದ. ಅದಕ್ಕಾಗಿ ಕ್ಷಮೆ ಕೇಳಲು ನಿರಾಕರಿಸಿ ಗಲ್ಲಿಗೇರಿದ. ಅದು ದೇಶಕ್ಕಾಗಿ ಪ್ರದರ್ಶಿಸಿದ ನಿಜವಾದ ವೀರತ್ವವಲ್ಲವೆ?

ಆಯಿತು, ಸಾವರ್ಕರ್ ಮಾಡಿದ್ದು ಕಾನೂನಿನ ಪ್ರಕಾರ ಸರಿಯೋ ತಪ್ಪೋ, ಅದು ದೇಶಪ್ರೇಮದಿಂದ ಮಾಡಿದ್ದು ಎಂದು ವಾದಕ್ಕಾದರೂ ಒಪ್ಪಿಕೊಳ್ಳೋಣ. ಆದರೆ ದೇಶ ವಿಭಜನೆಯ ವಿಚಾರದ ಮೊದಲ ಬೀಜ ಬಿತ್ತಿದವರಾರು? ಜಿನ್ನಾಗೆ ಬಹುಮುನ್ನವೇ ಸಾವರ್ಕರ್–೧೯೩೭ರಲ್ಲಿ ಹಿಂದೂ ಮಹಾಸಭಾ ಸಮ್ಮೇಳನವೊಂದರಲ್ಲಿ ಒಂದೇ ದೇಶದಲ್ಲಿನ ಎರಡು ರಾಷ್ಟ್ರೀಯತೆಗಳಿವೆ ಎಂಬ ಮಾತಾಡಿದ್ದರು.. ಹಾಗೆ ನೋಡಿದರೆ ಭರತ ಖಂಡದಲ್ಲಿ ಎಂದೂ ಹಿಂಧೂ ಮುಸ್ಲಿಂ ಐಕ್ಯತೆ ಎಂಬ ಕಲ್ಪನೆಯೇ ಇರಲಿಲ್ಲ. ಏಕೆಂದರೆ ಆ ಐಕ್ಯತೆಯ ಪ್ರಸ್ತುತತೆಯನ್ನು ಒತ್ತಾಯಿಸುವ ರಾಷ್ಟದ ಕಲ್ಪನೆಯೇ ಇರಲಿಲ್ಲ. ರಾಷ್ಟ್ರ ಎಂಬ ಕಲ್ಪನೆಯ ಉದಯವಾದದ್ದೇ ಸ್ವಾತಂತ್ರ್ಯ ಮತ್ತು ಅದಕ್ಕಾಗಿ ನಡೆಸಬೇಕಾದ ಹೋರಾಟದ ಕಲ್ಪನೆಯ ಜೊತೆಗೇ. ಈ ಹೋರಾಟದಲ್ಲಿ ಮತನಿಷ್ಠೆ ಮೀರಿ ತೊಡಗಿಕೊಂಡಿದ್ದ ಜನಸಮುದಾಯದಿಂದ ಬೆದರಿದ ಬ್ರಿಟಿಷ್ ಪ್ರಭುತ್ವ ತನ್ನ ಆಧುನಿಕತೆಯ ಯೋಜನೆಯ ಭಾಗವಾಗಿ ಮತವಾರು ಜನಗಣತಿ ಆರಂಭಿಸಿ ೧೯೧೦ರ ಹೊತ್ತಿಗೆ ಮುಸ್ಲಿಮರನ್ನು ಒಂದು ವಿಶಿಷ್ಟ ರಾಜಕೀಯ ಗುಂಪಾಗಿ ಗುರುತಿಸಿ ಅವರಿಗೆ ಪ್ರತ್ಯೇಕ ಮತ ಕ್ಷೇತ್ರಗಳ ಅವಕಾಶಮಾಡಿಕೊಟ್ಟಾಗ. ಸುಮಾರು ಆ ಹೊತ್ತಿಗೇ ಬಂಗಾಳದ ಹಿಂದೂ ಸಂಪ್ರದಾಯವಾದಿಗಳಿಂದಲೂ ಹಿಂದೂ ರಾಷ್ಟ್ರ ಮತ್ತು ಮುಸ್ಲಿಂ ರಾಷ್ಟ್ರಗಳ ಗಡಿ ಗುರುತಿಸುವಿಕೆ ನಡೆದಿತ್ತು.

## ಜಿನ್ನಾರ ಜೊತೆಗೆ ಕೈಜೋಡಿಸಿದ ಸಾವರ್ಕರ್

ಆದರೆ ೧೯೧೫ರ ಹೊತ್ತಿಗೆ ಭಾರತಕ್ಕೆ ಬಂದ ಗಾಂಧಿ ಸ್ವಾತಂತ್ರ್ಯ ಹೋರಾಟವನ್ನು ಹಿಂದೂ–ಮುಸ್ಲಿಂ ವಿಭಜನೆಯಿಂದ ಪಾರು ಮಾಡಲು 'ಖಿಲಾಫತ್' ಚಳುವಳಿಗೆ ತಮ್ಮ ಬೆಂಬಲ ಘೋಷಿಸಿ ಒಂದು ದೊಡ್ಡ ಪ್ರಯತ್ನ ಮಾಡಿ ಕೊನೆಗೆ ಸೋತರು. ಆದರೆ ಕೊನೆಗೆ ಈ ವಿಭಜನೆಯನ್ನು ಒಂದು ಸಿದ್ಧಾಂತವಾಗಿ ರೂಢಿಸಿ ಅದಕ್ಕಾಗಿ ಹಠ ಹಿಡಿದು ಅದನ್ನು ಆಗು ಮಾಡಿದ ಮಹಮ್ಮದಾಲಿ ಜಿನ್ನಾರನ್ನು ಪೋಷಿಸಿದವರಾರು? ಕಾಂಗ್ರೆಸ್ ಅಂತೂ ಅಲ್ಲ. ಗಾಂಧಿಯವರ ಪ್ರಬಲ ವಿರೋಧದ ಮಧ್ಯೆಯೂ ಅಂದಿನ ರಾಜಕೀಯ ಅನಿವಾರ್ಯತೆಗೆ ಮಣಿದು ಕಾಂಗ್ರೆಸ್ ನಾಯಕರು ವಿಭಜನೆಗೆ ಒಪ್ಪಿಗೆ ನೀಡಿದರು. ಅವರಲ್ಲಿ ಈಗ ಬಿಜೆಪಿಯ ಆರಾಧನಾ ದೈವವಾಗಿರುವ ಸರ್ದಾರ್ ಪಟೇಲರು ಮುಖ್ಯರು. ಆದರೆ ಇದರ ಹಿನ್ನೆಲೆಯಲ್ಲಿನ ಜಿನ್ನಾರ ಮುಸ್ಲಿಂ ಲೀಗ್– ಸಾವರ್ಕರ್‌ರ ಹಿಂದೂ ಮಹಾಸಭಾದ ಸಂಬಂಧ ಎಷ್ಟು ಜನಕ್ಕೆ ಗೊತ್ತು? ಆರೆಸ್ಸೆಸ್ಸಿನ ಎಳೆಯರಿಗೂ ಗೊತ್ತಿದ್ದಂತಿಲ್ಲ. ೧೯೩೭ರ ಪ್ರಾಂತೀಯ ಚುನಾವಣೆಗಳಲ್ಲಿ ಎಲ್ಲ ಕಡೆ ಜಯಭೇರಿ ಬಾರಿಸಿ ಅಧಿಕಾರಕ್ಕೆ ಬಂದಿದ್ದ ಕಾಂಗ್ರೆಸ್ ೧೯೩೯ರಲ್ಲಿ ಎರಡನೆಯ ಮಹಾಯುದ್ಧದ ಸಂಬಂಧದ ನೀತಿ ನಿರ್ಧಾರದ ವಿಷಯದಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಪ್ರತಿಭಟನೆಯಾಗಿ ಆ ಸರ್ಕಾರಗಳಿಗೆ ರಾಜೀನಾಮೆ ನೀಡಿದಾಗ

ಸಾವರ್ಕರ್ ಅವರೇ ಅಧ್ಯಕ್ಷರಾಗಿದ್ದ ಹಿಂದೂ ಮಹಾ ಸಭಾ ಏನು ಮಾಡಿತು? ಅದು ಗಾಂಧಿ ಕುರಿತ ಕುರುಡು ದ್ವೇಷದಲ್ಲಿ, ಆಗ ಜಿನ್ನಾರು ಅಂಬೇಡ್ಕರ್ ಮತ್ತು ರಾಮಸ್ವಾಮಿ ನಾಯ್ಕರರರೊಡಗೂಡಿ ರಚಿಸಿದ ಕಾಂಗ್ರೆಸ್ ವಿರೋಧಿ ರಂಗ ಸೇರಿ ಸಿಂಧ್, ವಾಯುವ್ಯ ಗಡಿ ಪ್ರಾಂತ್ಯ ಮತ್ತು ಬಂಗಾಳ ಪ್ರಾಂತ್ಯಗಳಲ್ಲಿ ಜಿನ್ನಾರ ಮುಸ್ಲಿಂ ಲೀಗ್ ಜೊತೆ ಸರ್ಕಾರ ರಚನೆಯಲ್ಲಿ ಪಾಲ್ಗೊಂಡಿತು! ಇದು ಸಮಾನ ಮನಸ್ಕರ ಮಿಲನವೇ ಆಗಿತ್ತೆನ್ನಬಹುದೇನೋ. ಆದರೆ ಸಾವರ್ಕರ್‌ಗೆ ಏಕೆ ಜಿನ್ನಾ ಜೊತೆ ಕೈ ಜೋಡಿಸುವಷ್ಟು ಗಾಂಧಿ ಕುರಿತ ಕುರುಡು ದ್ವೇಷ? ಹಿಂದೂ ಧರ್ಮವನ್ನು ಋಷಿ–ಮುನಿಗಳ ಧರ್ಮದ ನೆಲೆಯಿಂದ ಸಾಧು ಸಂತರ ನೆಲೆಗೆ ಒಯ್ಯುತ್ತಿದ್ದ, ಸಂಸ್ಕೃತ ಗ್ರಂಥದಲ್ಲಿರುವ ಕಾರಣಕ್ಕೇ ಎಲ್ಲವನ್ನೂ ಒಪ್ಪಬೇಡಿ ಎಂದು ಹೇಳುತ್ತಾ ಹಿಂದೂ ಧರ್ಮವನ್ನು ಜನಪದೀಯಗೊಳಿಸುತ್ತಿದ್ದ ಗಾಂಧಿಯ ಪ್ರಯತ್ನ ಅವರ ಅಪ್ಪಟ ಹಿಂದೂ–ಹಿಂದುತ್ವಗಳ ಸಂಘಟನೆಗೆ ಮರ್ಮಘಾತಕವಾಗಿತ್ತು.

## ಚರಿತ್ರೆಯ ತಪ್ಪುಗಳನ್ನು ಸರಿಪಡಸಲು ಅದೇನೂ ಯಂತ್ರವಲ್ಲ!

ಇದನ್ನೆಲ್ಲ ಇಲ್ಲಿ ಏಕೆ ಹೇಳಬೇಕಾಯಿತೆಂದರೆ ಇವರು ಎಳೆಯರಿಗೆ ಉಣಿಸಿರುವಂತೆ ಚರಿತ್ರೆ ನೇರ, ಸರಳ, ಕಪ್ಪು–ಬಿಳುಪು ಬಣ್ಣಗಳಿಂದಷ್ಟೇ ಕೂಡಿಲ್ಲ ಎಂದು ಹೇಳುವುದಕ್ಕಾಗಿ. ಹಾಗಾಗಿ ಚುನಾವಣೆಗಳಲ್ಲಿ ಹುಟ್ಟಿದ ಪ್ರಭುತ್ವದ ಕಾನೂನಿಂದ ಚರಿತ್ರೆಯ ತಪ್ಪುಗಳನ್ನು ಸರಿಪಡಿಸುವ ಮಾತೇ ಅಸಂಬದ್ಧವೆಂದು ತಿಳಿಸಲು. ಚರಿತ್ರೆಗೆ ಬಿಡಿ ಭಾಗಗಳಿಲ್ಲ, ಯಂತ್ರದಂತೆ; ಸರಿ ಮಾಡಲು. ಅದು ಕಾಲದ ಸಂಕಲ್ಪಗಳು ಒಂದರಲ್ಲೊಂದರಂತೆ ಹಾಸು ಹೊಕ್ಕಾಗಿ ಕಾಲದ ಪ್ರತಿ ಹೆಜ್ಜೆಯಲ್ಲೂ ಹೊಸದಾಗಿ ಬೆಳೆಯುತ್ತಾ ಹೋಗುತ್ತದೆ. ಆದರೆ ಬಿಜೆಪಿಯವರಿಗೆ ಒಂದು ನೆನಪಿರಬೇಕು. ಈ ಭಾರತ ಆಧುನಿಕ ಯುಗದ ಒಂದು ದೊಡ್ಡ ಜನಾಂದೋಲನದ ಮೂಸೆಯಲ್ಲಿ, ಅದು ಜನಮಾನಸದಲ್ಲಿ ಕಟ್ಟಿಕೊಟ್ಟ ಒಂದು ಮೌಲ್ಯ ವ್ಯವಸ್ಥೆಯೊಂದಿಗೆ ಮೂಡಿದ ರಾಷ್ಟ್ರ. ಅದರೊಂದಿಗೆ ಕಾನೂನಿನ ಆಟ ಆಡಲು ನಿಮಗೆ ಯಾವ ನೈತಿಕ ಅಧಿಕಾರವೂ ಇಲ್ಲ. ಇದು ನಾನು ಹೆಮ್ಮೆಯ ಸನಾತನ ಹಿಂದೂ ಎಂದು ಘೋಷಿಸಿಕೊಂಡಿದ್ದ ಮಹಾತ್ಮ ಗಾಂಧಿ ಎಂಬ ಕ್ರಾಂತಿಕಾರಿ ದಾರ್ಶನಿಕ ತನ್ನ ಜನರ ಒಡನಾಟದಲ್ಲಿ ತನ್ನ ಹೊಸ ದೇಶಕ್ಕಾಗಿ ಕಂಡುಕೊಂಡ ಮೌಲ್ಯಗಳನ್ನು ಆಳದಲ್ಲಿ ನಂಬಿದ ರಾಷ್ಟ್ರ. ಹಾಗಾಗಿ ನಿಜವಾದ ಹಿಂದೂ ಮೌಲ್ಯಗಳು ಇಲ್ಲಿನ ಎಲ್ಲ ಪ್ರಜೆಗಳಲ್ಲಿ ಅಂತರ್ಗತವಾಗಿವೆ. ಅವು ಇತರ ಧರ್ಮಗಳೊಂದಿಗೆ ಅನುಸಂಧಾನ ಮಾಡಿಕೊಂಡು ಸಹಬಾಳ್ವೆ ಮಾಡಲೆಂದೇ ಕಾಲಕ್ಕೆ ತಕ್ಕಂತೆ ಮರು ರೂಪಿತವಾಗಿವೆ. ಆದ್ದರಿಂದ ಹಿಂದೂ ಧರ್ಮ ಮತ್ತು ಹಿಂದೂಗಳ ಬಗ್ಗೆ ನಿಮ್ಮಿಂದ ಕನಿಕರದ ಅಥವಾ ಸಹಾನುಭೂತಿಯ ಪಾಠ ಕಲಿಯುವ ಅಗತ್ಯವಿಲ್ಲ. ನಿಮಗೆ ಜನ ಆಧಿಕಾರ ಕೊಟ್ಟಿರುವುದು ಕಾಂಗ್ರೆಸ್ ಮತ್ತು ಅದರ ಸೋದರ ಪಕ್ಷಗಳ ಪೂರ್ಣ ದಾರಿತಪ್ಪಿದ ವರ್ತನೆಯಿಂದ ಬೇಸತ್ತು; ಬೇರೆ ಯಾವುದೇ ಪರ್ಯಾಯವಿಲ್ಲದ್ದರಿಂದ. ಈ ಅವಕಾಶವನ್ನು ಚರಿತ್ರೆಯ ಮೇಲೆ ನಿಮ್ಮ ಹಳೆಯ ಸೇಡನ್ನು ತೀರಿಸಿಕೊಳ್ಳಲು ಬಳಸಲು ಹೋಗಬೇಡಿ. ಈ ದೃಷ್ಟಿಯಿಂದ ನಿಮ್ಮ 'ಕಾಂಗ್ರೆಸ್ ಮುಕ್ತ ಭಾರತ' ಘೋಷಣೆಯ ಹಿಂದಿನ ದನಿ ಬೇರೆಯಗಿಯೇ ಕೇಳುತ್ತದೆ. ಕಾಂಗ್ರೆಸ್ಸನ್ನು ಒಂದು ರಾಜಕೀಯ ಪಕ್ಷವಾಗಿ ಇಲ್ಲವಾಗಿಸುವುದು ನಿಮ್ಮ ಗುರಿಯಾಗಿದ್ದರೆ, ಅದು ನಿಮ್ಮ ಪ್ರಜಾಸತ್ತಾತ್ಮಕ ಹಕ್ಕಿನ ಚಲಾವಣೆ ಎಂದು ಒಪ್ಪಬಹುದು. ಅದನ್ನು ಅದರ ಮಹಾಪೋಷಕರಾಗಿದ್ದ ಗಾಂಧಿಯವರೇ ತಮ್ಮ ಹತ್ಯೆಯ ಮುನ್ನ ಚಲಾಯಿಸಬಯಸಿದ್ದರು. ಆದರೆ ಕಾಂಗ್ರೆಸ್ ಎಂಬುದು ಒಂದು ಇತಿಹಾಸ ಮತ್ತು ಪರಂಪರೆ ಕೂಡ. ಅದನ್ನು ಹಾಳು ಮಾಡುವ, ಇಲ್ಲವಾಗಿಸುವ ಅಧಿಕಾರ ನಿಮಗಿಲ್ಲ. ಅದರಿಂದ ಹೊಮ್ಮಿದ ಆದರ್ಶಗಳಿಂದಲೇ ನೀವಿಂದು ಅಧಿಕಾರ ಪಡೆದಿರುವುದು ಎಂಬುದು ನೆನಪಿರಲಿ. ಕೊಂಬೆಯ ಮೇಲೆ ಕೂತು ಮರದ ಬುಡಕ್ಕೇ ಕೊಡಲಿ ಹಾಕುವ ಮೂರ್ಖತನ ಬೇಡ. ಜನ ಅದನ್ನು ಸಹಿಸುವುದಿಲ್ಲ. ಸದ್ಯದ ಪ್ರತಿಭಟನೆಗಳೇ ಇದಕ್ಕೆ ಸಾಕ್ಷಿ

## ರಾಷ್ಟ್ರವೇ ಎಲ್ಲವೂ ಅಲ್ಲ

ಗಾಂಧಿಯಿಂದ ನಾವು ಕಲಿತ ಪ್ರಾಥಮಿಕ ಪಾಠವೆಂದರೆ, ನಾವೆಲ್ಲ ಮೂಲತಃ ಭಗವಂತನ ಮಕ್ಕಳು. ಅದರ ಅರಿವಿನಲ್ಲೇ ನಾವು ಹಿಂದೂ, ಮುಸ್ಲಿಂ. ಇಸಾಯಿ ಇತ್ಯಾದಿ ಹಣೆಪಟ್ಟಿಗಳಲ್ಲಿರುವವರು. ರಾಷ್ಟ್ರವೆಂಬುದನ್ನು ನಾವು ಮಾಡಿಕೊಂಡಿರುವುದು ಲೌಕಿಕ ಅಭ್ಯುದಯಕ್ಕಾಗಿ. ಹಾಗಾಗಿ ಇದನ್ನು ಧಾರ್ಮಿಕ ವಿದ್ಯಮಾನ ಮಾಡುವುದು ಬೇಡ. ಹಾಗಾಗಿ ಎಲ್ಲ ಅಕ್ರಮ ವಲಸಿಗರಿಗೆ ಒಂದೇ ಕಾನೂನು ಇರಲಿ. ಈ ವಲಸೆ ಆಧುನಿಕ ಕಾಲದ ಶಾಪ. ಜನ ಜೀವನೋಪಾಯವನ್ನು, ಬದುಕಿನಲ್ಲಿ ಇನ್ನಷ್ಟು ಅನುಕೂಲಕರವಾದ ಪರಿಸರವನ್ನು ಹುಡುಕಿಕೊಂಡು ಗಡಿ ದಾಟಿ ಬಂದಿರುತ್ತಾರೆ. ಅವರಲ್ಲಿ ಭೇದ ಭಾವ ಮಾಡುವುದು ಹಿಂದೂ ಧರ್ಮದ ಸನಾತನತೆಗೆ–ಅದರ ಧಾರಣ ಸಾಮರ್ಥ್ಯಕ್ಕೆ–ಮಾಡುವ ಅಪಚಾರ. ಆ ಮೂರು ಇಸ್ಲಾಮಿ ದೇಶಗಳಿಂದ ನಮ್ಮಲ್ಲಿ ಬಂದಿರುವ ಎಲ್ಲ ಹಿಂದೂಗಳೂ ಮತೀಯ ಕಿರುಕುಳಗಳಿಂದಲೇ ಓಡಿ ಬಂದಿದ್ದಾರೆ ಎಂದು ಯಾವ ಆಧಾರದ ಮೇಲೆ ಹೇಳುವಿರಿ? ಆ ದೇಶಗಳ ಹಿಂದೂ ಜನಸಂಂಖ್ಯಾ ಪ್ರಮಾಣ ಕುಸಿದು ಹೋಗಿದೆ ಎಂದೇ? ಇದಕ್ಕೆ ಕಾರಣ, ಮತೀಯ ಕಿರುಕುಳವೂ ಸೇರಿದಂತೆ ಅನೇಕ ಕಾರಣಳಿರುತ್ತವೆ. ಯಾವುದೇ ದೇಶದಲ್ಲಿ, ಮಾನವ ಹಕ್ಕುಗಳ ಜಾಗೃತಿಯ ಹಲವು ಜಾಗತಿಕ ನಿಗಾ ಸಂಸ್ಥೆಗಳಿರುವ ಇಂದಿನ ಆಧುನಿಕ ಕಾಲದಲ್ಲಿ ಕೋಟ್ಯಾಂತರ ಅಥವಾ ಲಕ್ಷಾಂತರ ಜನರ ಹತ್ಯೆ ಸಾಧ್ಯವಾಗದ ಮಾತು. ಅವರಲ್ಲಿ ಬಹಳ ಜನ ಮತಾಂತರವಾಗಿರಬೇಕು ಅಥವಾ ನಮ್ಮ ದೇಶವೂ ಸೇರಿದಂತೆ ಇತರ ದೇಶಗಳತ್ತ ಜೀವನೋಪಾಯ ಹುಡುಕಿಕೊಂಡು ವಲಸೆ ಹೋಗಿರಬೇಕು. ಸ್ವಾತಂತ್ರ್ಯಾನಂತರ ಭಾರತೀಯರೇ ಎಷ್ಟು ಲಕ್ಷ ಜನ ಹೀಗೆ ಬೇರೆ ದೇಶಗಳಿಗೆ ವಲಸೆ ಹೋಗಿಲ್ಲ? ನಿಮಗೊಂದು ಮಾಹಿತಿ: ಇದೇ ಸರ್ಕಾರ ೨೦೧೫ರಲ್ಲಿ ದೀರ್ಘ ಕಾಲದ ವೀಸಾ ಮಂಜೂರಾತಿಗಾಗಿ ಆಹ್ವಾನಿಸಿದ ಅರ್ಜಿಗಳಲ್ಲಿ ಮತೀಯ ಕಿರುಕುಳದ ಕಾರಣ ನೀಡಿದ ಮುಸ್ಲಿಮೇತರರ ಸಂಖ್ಯೆ ಕೇವಲ ೩೧, ೩೧೩ ಎಂದು ಗುಪ್ತಚರ ಇಲಾಖೆಯ ದಾಖಲೆ ತಿಳಿಸುತ್ತದೆ.

ನಿಜ, ಮುಸ್ಕಿಂ ಭಯೋತ್ಪಾದನೆ ಎಂಬುದೊಂದಿದೆ. ಆದರೆ ವಲಸೆಯನ್ನು ಮತೀಯವಾಗಿ ನೋಡಿ ಅದನ್ನು ಕೆರಳಿಸಬಹುದೇ ಹೊರತು ನಿಗ್ರಹಿಸಲಾಗದು. ನಮ್ಮ ಅಪರಾಧ ದಂಡ ಸಂಹಿತೆಯ ಕಠಿಣ ಕಾಯ್ದೆ–ಕಾನೂನುಗಳ ಮತ್ತು ದಕ್ಷ ಹಾಗೂ ನಿಷ್ಪಕ್ಷಪಾತ ಆಡಳಿತದ ಮೂಲಕ ಮಾತ್ರ ಇದನ್ನು ಎದುರಿಸಬಹುದು.

## ಇಸ್ಲಾಂನ ಮೂಲಭೂತವಾದದ ಪ್ರಶ್ನೆ

ಪಾಕಿಸ್ತಾನ, ಆಫ್ಘನಿಸ್ತಾನಗಳೇನೂ ಹುಟ್ಟಿನಿಂದ ಇಸ್ಲಾಮೀ ರಾಷ್ಟ್ರಗಳಾಗಿರಲಿಲ್ಲ. ನಮಗೆ ಸ್ವಾತಂತ್ರ್ಯ ಬಂದಾಗ ನಮ್ಮಿಂದ ಬೇರೆಯಾದ ಪಾಕಿಸ್ತಾನ ಇಸ್ಲಾಮಿ ಸಂವಿಧಾನವನ್ನು ಅಂಗೀಕರಿಸಿದ್ದು ೧೯೭೩ರಲ್ಲಿ, ಅದರಿಂದ ಪೂರ್ವ ಪಾಕಿಸ್ತಾನ ಬಂಗ್ಲಾದೇಶವಾಗಿ ಬೇರ್ಪಟ್ಟ ನಂತರ. ಈ ಎರಡೂ ದೇಶಗಳು ನಂತರವೂ ಅಲ್ಲಿ ಉದಾರವಾದಿ ಪಕ್ಷಗಳು–ಉದಾ: ಪಾಕಿಸ್ತಾನದಲ್ಲಿ ಭುಟ್ಟೋ ಮತ್ತು ಅವರ ಮಗಳು, ಈಗ ಇಮ್ರಾನ್ ಖಾನ್ ಹಾಗೂ ಬಂಗ್ಲಾದೇಶದಲ್ಕಿ ಮುಜೀಬುರ್ ರೆಹಮಾನ್ ಮತ್ತು ಅವರ ಮಗಳು ಅಧಿಕಾರಕ್ಕೆ ಬಂದಾಗಲೆಲ್ಲ ಅವು ಧರ್ಮ ನಿರಪೇಕ್ಷ ರಾಷ್ಟ್ರಗಳಾಗಲು ಪ್ರಯತ್ನ ನಡೆಸಿಯೇ ಇವೆ. ಸದ್ಯದ ನಮ್ಮ ಕಾನೂನು ಇಂತಹ ಪ್ರಯತ್ನಗಳನ್ನು ಚಿವುಟಿ ಹಾಕುವಂತಿದೆ. ಅಲ್ಲಿ ಈಗ ಧಾರ್ಮಿಕ ಅಲ್ಪಸಂಖ್ಯಾತರಿಗೆ ಉಳಿಗಾಲವೇ ಇಲ್ಲ ಎಂದು ಹೇಳಲಾಗದು. ಅವರ ಹಕ್ಕುಗಳ ರಕ್ಷಣೆಗೆಂದೇ ವಿಶೇಷ ಕಾನೂನುಗಳಿವೆ. ಹಾಗಾಗಿಯೇ ಇನ್ನೂ ಸಾಕಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಪಸಂಖ್ಯಾತ ಧರ್ಮೀಯರು ಅಲ್ಲಿದ್ದಾರೆ. ರಾಜಕಾರಣ, ಸಂಸ್ಕೃತಿ, ಕ್ರೀಡೆ ಇತ್ಯಾದಿ ರಂಗಗಳಲ್ಲಿ ಅವರು ಸಾಧನೆ ಮಾಡುತ್ತಿದ್ದಾರೆ. ಆದರೆ ಮತೀಯ ರಾಷ್ಟ್ರ ಎಂಬುದು ಖಂಡಿತ ಒಂದು ಆದರ್ಶ ಸ್ಥಿತಿಯಲ್ಲ. ಇನ್ನು ಆಫ್ಘನಿಸ್ತಾನ ತಾಲಿಬಾನ್ ಉದಯದ ನಂತರವಷ್ಟೇ ಮೂಲಭೂತವಾದಿ ಮತೀಯ ರಾಷ್ಟ್ರವಾದದ್ದು. ಆದರೆ ಈಗ ಅಲ್ಲಿ ಕೂಡ ಬದಲಾವಣೆಗಳು ನಡೆಯುತ್ತಿವೆ. ಆದರೆ ನಾವೇನು ಮಾಡುತ್ತಿದ್ದೇವೆ? ಅವರ ಹಾಗೆ ಆಗಲು ಹೊರಟಿದ್ದೇವೆ! ನಿಜ, ಇಸ್ಲಾಂನಲ್ಲಿ ಸುಲಭವಾಗಿ ಮೂಲಭೂತವಾದಿಯಾಗಬಲ್ಲ ಒಂದು ಗುಣವಿದ್ದಂತಿದೆ. ಅದು ಹುಟ್ಟಿ ಬೆಳೆದ ಕಾಲ ದೇಶದ ಗುಣ. ಗಾಂಧಿ ಹೇಳುತ್ತಿದ್ದಂತೆ ಅದೊಂದು ಗಡುಸು ಧರ್ಮ. ಆದರೆ ಇಂದಿನ ಸಂಕೀರ್ಣ ಜಾಗತಿಕ ರಾಜಕೀಯ ವಾತಾವರಣದಲ್ಲಿ ಅದು ಹೊಸ ಸವಾಲುಗಳನ್ನು ಎದುರಿಸುತ್ತಾ ಅದರ ಫಲಗಳನ್ನು ಅನುಭವಿಸಿಯೇ ಅದು ಪಳಗಬೇಕು. ಹಾಗಾಗಿ ಅದನ್ನು ಪ್ರೀತಿಯಿಂದ ಗೆಲ್ಲ ಹೋದ ಗಾಂಧಿಗೆ ಕಾಂಗ್ರೆಸ್‌ನ ಮೂಲಕವೇ ಪರಿಸ್ಥಿತಿಯನ್ನು ಹದಗೆಡಿಸಿ ಅಡ್ಡಿಯಾದವರು ಇಂದಿನ ಈ ಕಾನೂನನ್ನು ತರಹೊರಟಿರುವ ಮಾನಸಿಕತೆಯವರೇ. ಇಸ್ಲಾಂನ ಖಡ್ಗವನ್ನು ಇಳಿಸಲು ಹೋದ ಗಾಂಧಿ ಬಲಿಯಾದದ್ದು ಆ ಖಡ್ಗದ ವಿರುದ್ಧ ಕೂಗಾಡುತ್ತಿದ್ದವರ ಪಿಸ್ತೂಲಿನ ಗುಂಡಿಗೆ ಎಂಬುದು ವಿಪರ್ಯಾಸವಷ್ಟೆ. ಇಂದು ಈ ಕಾನೂನು ಸೃಷ್ಟಿಸಿರುವ ಪರಿಸ್ಥಿತಿಗೆ ಇದೊಂದು ರೂಪಕವಾಗಿ ನಮ್ಮನ್ನು ಎಚ್ಚರಿಸಬೇಕು.

ಪೌರತ್ವ ಕಾನೂನಿನ ತಿದ್ದುಪಡಿಯ ಮೂಲಕ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಭಾರತದ ಘನತೆ ಏನಾಗಬಹುದು ಎಂಬ ಕಲ್ಪನೆ ಈ ಕಾನೂನು ನಿರ್ಮಾಪಕರಿಗೆ ಇದ್ದಂತಿಲ್ಲ. ಏಕೆಂದರೆ ಪಾಕಿಸ್ತಾನವೂ ಸೇರಿದಂತೆ ಜಗತ್ತಿನ ಪ್ರತಿಯೊಂದು ದೇಶವೂ ಇಂದು ವಲಸೆಗಾರರ/ನಿರ್ವಸಿತರ ಸಮಸ್ಯೆಯನ್ನು ಎದುರಿಸುತ್ತಿದೆ. ಅದಕ್ಕಾಗಿ ಅಂತಾರಾಷ್ಟ್ರೀಯ ಕಾನೂನುಗಳು ರೂಪಿತವಾಗಿವೆ. ನಮ್ಮ ಈ ಹೊಸ ಕಾನೂನಿನಲ್ಲಿ ಎದ್ದು ಕಾಣುವ ತಾರತಮ್ಯ ಜಾಗತಿಕ ಮಟ್ಟದಲ್ಲಿ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುವುದೋ ತಿಳಿಯದು. ಈಗಾಗಲೇ ಇಂಡೋನೇಷ್ಯಾದ ಅಧ್ಯಕ್ಷರೂ ಸೇರಿದಂತೆ ಅಂತಾರಾಷ್ಟ್ರೀಯ ವೇದಿಕೆಗಳ ವಕ್ತಾರರು ಈ ಕಾನೂನಿನ ಬಗ್ಗೆ ಆತಂಕ–ಅಸಮಧಾನ–ಪ್ರತಿಭಟನೆಗಳನ್ನು ವ್ಯಕ್ತಪಡಿಸತೊಡಗಿದ್ದಾರೆ.

## ಅಸ್ಸಾಂ ಕಾರ್ಯಚರಣೆಯ ಪಾಠಗಳು

ಇನ್ನು ರಾಷ್ಟ್ರೀಯ ಪೌರತ್ವ ನೋಂದಣಿಯ ವ್ಯಾವಹಾರಿಕತೆಯನ್ನು ನೋಡೋಣ. ಅಸ್ಸಾಂನಲ್ಲಿ ಹತ್ತು ವರ್ಷಗಳ ಕಾಲ ನಡೆದ ಈ ಕಾರ್ಯಾಚರಣೆಗೆ ಸರ್ಕಾರ ೫೦

ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ಬಳಸಿ ಮಾಡಿದ ವೆಚ್ಚ ಸುಮಾರ ೧೩೩೦ ಕೋಟಿ ರೂಪಾಯಿಗಳು. ಈ ಕಾರ್ಯಾಚರಣೆಯಲ್ಲಿ ಪ್ರಜೆತನಕ್ಕೆ ಅನರ್ಹರೆಂದು ಘೋಷಿತರಾದ ಜನ ತಮ್ಮ ನಿವಾಸಿತನದ ದಾಖಲೆ ಪತ್ರಗಳ ಸಂಗ್ರಹ ಮತ್ತು ನ್ಯಾಯ ಮಂಡಳಿಗಳಿಗೆ ಮಾಡಿದ ಅಲೆದಾಟಗಳಿಗಾಗಿ ಮಾಡಿದ ವೆಚ್ಚ ಸುಮಾರು ೭೫೦ ಕೋಟಿ ರೂಪಾಯಿಗಳೆಂದು ಒಂದು ಸಮೀಕ್ಷಾ ಸಂಸ್ಥೆ ಅಂದಾಜು ಮಾಡಿದೆ. ಇಷ್ಟಾದರೂ ಈ ಕಾರ್ಯಾಚರಣೆಯ ಪರಿಣಾಮವೇನು? ರಾಜ್ಯದ ಬಡವರು ಮತ್ತಷ್ಟು ಬಡವರಾಗಿದ್ದು ಎಂದು ಈ ಸಂಸ್ಥೆ ಹೇಳುತ್ತದೆ. ಭಾರತೀಯ ಸೇನೆಯಲ್ಲಿ ಸೇವೆ ಮಾಡಿ ನಿವೃತ್ತರಾದ ಅಧಿಕಾರಿಗೂ ಅಲ್ಲೀಗ ಪ್ರಜೆತನ ನಿರಾಕರಿಸಿದ ಪ್ರಸಂಗವೂ ನಡೆದಿದೆ. ಇದೊಂದು ಉದಾಹರಣೆಯಷ್ಟೆ. ಜನ ಇನ್ನೂ ಮನವಿ-ಮೇಲ್ಮನವಿಗಳನ್ನು ಹಿಡಿದುಕೊಂಡು ಪ್ರಜೆತನಕ್ಕಾಗಿ ನ್ಯಾಯಮಂಡಳಿಗಳಿಗೆ ಅಲೆದಾಡುತ್ತಲೇ ಇದ್ದಾರೆ. ಇದೆಲ್ಲವೂ ಇತ್ಯರ್ಥವಾಯಿತೆಂದೇ ಇಟ್ಟುಕೊಳ್ಳೋಣ. ಹೊಸ ಕಾನೂನಿನ ಪ್ರಕಾರ ಹಿಂದೂ ಮತ್ತೈದು ಮತಗಳ ಜನರಿಗೆ ಪ್ರಜೆತನವನ್ನು ದಯಪಾಲಿಸಿದರೂ ಅವರನ್ನು ಅಲ್ಲಿಯೇ ಬಿಟ್ಟರೆ ಇದರ ವಿರುದ್ಧ ನಾಲ್ಕು ದಶಕಗಳಿಂದ ಚಳುವಳಿ ಮಾಡುತ್ತಿರುವ ಅಸ್ಸಾಮೀಯರು ಸುಮ್ಮನಿದ್ದಾರೆಯೇ? ಇನ್ನು ಪ್ರಜೆತನದಿಂದ ಅನರ್ಹರಾದವರನ್ನು ಏನು ಮಾಡುವಿರಿ? ಮತೀಯ ಕಿರುಕುಳವನ್ನು ಸಾಬೀತುಪಡಿಸಬಲ್ಲವರ ಹೊರತಾಗಿ ಇನ್ನಾರಿಗೂ ತಮ್ಮಲ್ಲಿ ಪ್ರವೇಶವಿಲ್ಲವೆಂದು ಬಂಗ್ಲಾದೇಶ ಈಗಾಗಲೇ ಹೇಳಿದೆ. ಹಾಗಾಗಿ ಅವರನ್ನು ಸ್ಥಾನಬಬದ್ಧತೆಯಲ್ಲಿಟ್ಟು ಸರ್ಕಾರ ಸಾಕುವುದೆ? ಅದರ ಖರ್ಚು ವೆಚ್ಚ?

ಇದಕ್ಕಿಂತ ಮುಖ್ಯವಾಗಿ ಈ ಕಾರ್ಯಚರಣೆಯಲ್ಲಿ ಸಾಮಾನ್ಯ ಪ್ರಜೆಗಳು ತಮ್ಮ ಪ್ರಜೆತನವನ್ನು ಸಾಬೀತುಪಡಿಸಲು ಪಟ್ಟ ಪಾಡನ್ನು-ನ್ಯಾಯ ಮಂಡಳಿಗಳ ವಿಚಾರಣೆಗಳಿಗಾಗಿ ಕೇಳಿದ ದಾಖಲೆಗಳನ್ನು ಸಂಗ್ರಹಿಸುತ್ತಾ ನಡೆಸಿದ ಅಲೆದಾಟಗಳ ಕಥೆಗಳನ್ನು-ಕೇಳಿದರೆ ಈ ರಾಷ್ಟ್ರ ಕಲ್ಪನೆಯು ನಾಗರೀಕತೆಯ ಎಂತಹ ಒಂದು ದೊಡ್ಡ ಶಾಪ ಎಂಬುದು ಅರ್ಥವಾದೀತು. ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿ ಕಾರ್ಯಾಚರಣೆಯನ್ನು ಆರಂಭಿಸಿದಾಗ ಖರ್ಚಿನ ಮಾತಿರಲಿ ಆಗುವ ಮಾನವ ದುರಂತದ ಪ್ರಮಾಣ ಎಷ್ಟಿರಬಹುದು ಯೋಚಿಸಿ. ಒಂದು ಅಂದಾಜಿನ ಪ್ರಕಾರ ಈ ಕಾರ್ಯಾಚರಣೆಗೆ ಆಗುವ ವೆಚ್ಚ ಸುಮಾರು ೫೦ ಸಾವಿರ ಕೋಟಿ ರೂಪಾಯಿಗಳು. ಇದರಿಂದ ೨ ಕೋಟಿ ಜನ ಪ್ರಜೆತನಕ್ಕೆ ಅನರ್ಹರಾದಾರು ಎಂಬ ಊಹೆಯ ಮೇಲೆ ಲೆಕ್ಕ ಹಾಕಿದರೆ ಅವರಿಗಾಗಿ ಸ್ಥಾನಬದ್ಧತಾ ಕೇಂದ್ರಗಳನ್ನು ನಿರ್ಮಿಸಲು ಕನಿಷ್ಠ ಎರಡು ಲಕ್ಷ ಕೋಟಿ ರೂಪಾಯಿಗು ಮತ್ತು ಅವನ್ನು ನಿರ್ವಹಿಸಲು ವಾರ್ಷಿಕ ೩೫ ಸಾವಿರ ಕೋಟಿ ರೂಪಾಯಿಗಳು ಎಂಬುದು ಒಂದು ಅಂದಾಜು. ಪ್ರಧಾನ ಮಂತ್ರಿ ಅಮಾಯಕರಂತೆ ಏನೇ ಹೇಳಲಿ, ಅಸ್ಸಾಂನಲ್ಲಿ ಈಗಾಗಲೇ ಆರು ಸ್ಥಾನಬದ್ಧತಾ ಕೇಂದ್ರಗಳಿದ್ದು ಅವುಗಳಲ್ಲಿನ ಜನರ ಸ್ಥಿತಿ ಚಿಂತಾಜನಕವಾಗಿದ್ದು ಕೆಲವರು ಮಾನಸಿಕ ರೋಗಿಗಳಾಗಿದ್ದಾರೆಂಬ ವರದಿಗಳಿವೆ. ಯಾವ ಪುರುಷಾರ್ಥಕ್ಕಾಗಿ ಜನರನ್ನು ಸುಮ್ಮಸುಮ್ಮನೆ ಗೋಳು ಹುಯ್ದುಕೊಳ್ಳುವ ಈ ಕರ್ಮಕಾಂಡ? ಇದು ಪರಿಶುದ್ಧ, ಪರಿಪೂರ್ಣ ಏಕರೂಪದ ಬಲಿಷ್ಠರಾಷ್ಟ್ರ ನಿರ್ಮಾಣಕ್ಕಾಗಿ? ಚರಿತ್ರೆಯಲ್ಲಿ ಇಂತಹ ಪ್ರಯತ್ನಗಳು ಎಂತಹ ಮಾನವ ದುರಂತಗಳಲ್ಲಿ ಕೊನೆಗೊಂಡಿವೆ ಎಂಬುದು ಚರಿತ್ರೆ ಬಲ್ಲವರಿಗೆ ಗೊತ್ತಿದೆ.

**ಬಿಜೆಪಿ ಹೇಳುವ ಅರ್ಧ ಸತ್ಯಗಳು**

ಬಿಜೆಪಿಯವರು ಹೇಳುವ ಹಾಗೆ ಇದು ಸರ್ವೋಚ್ಚ ನ್ಯಾಯಾಲಯದ ನಿರ್ದೆಶನದ ಮೇಲೆ ನಡೆಯುತ್ತಿಲ್ಲ. ನ್ಯಾಯಾಲಯದ ನಿರ್ದೇಶನವಿರುವುದು ಅಸ್ಸಾಂಗೆ ಸಂಬಂಧಪಟ್ಟಂತೆ ಮಾತ್ರ, ಈಗ ಅಸ್ಸಾಂನಲ್ಲಿ ಆಗಿರುವುದನ್ನು ಕಂಡು ನ್ಯಾಯಾಲಯ ತನ್ನ ನಿರ್ದೇಶನದ ಬಗ್ಗೆ ಏನು ಹೇಳುವುದೋ ತಿಳಿಯದು. ಜೊತೆಗೆ ಇನ್ನೊಂದು ಮಾತು ಕಾಂಗ್ರೆಸ್ ಸರ್ಕಾರದ ಕಾಲದಲ್ಲೂ ಹಿಂದೂ ನಿರಾಶ್ರಿತರ ಪೌರತ್ವಕ್ಕಾಗಿ ಕ್ರಮ ಕೈಗೊಳ್ಳಲಾಗಿತ್ತು ಎಂಬ ಮಾತನ್ನು ಬಿಜೆಪಿ ವಕ್ತಾರರು ಆಡುತ್ತಿದ್ದಾರೆ. ಆದರೆ ಅದು ರಾಜಸ್ಥಾನದಲ್ಲಿ ಸೃಷ್ಟಿಯಾಗಿದ್ದ ಒಂದು ನಿರ್ದಿಷ್ಟ ಸಂದರ್ಭಕ್ಕೆ ಸೀಮಿತವಾಗಿದ್ದ ಒಂದು ಅಧಿಸೂಚನೆಯಾಗಿತ್ತೇ ಹೊರತು ಯಾವುದೇ ನಿರ್ದಿಷ್ಟ ದೇಶಗಳ ನಿರ್ದಿಷ್ಟ ಧರ್ಮದವರನ್ನು ಹೊರಗಿಡುವ ಸಂವಿಧಾನದ ಭಾಗವಾದ ಕಾಯಿದೆಯಾಗಿರಲಿಲ್ಲ. ಹಲವು ಪಶ್ಚಿಮದ ದೇಶಗಳಲ್ಲಿ ರಾಷ್ಟ್ರೀಯ ಪೌರತ್ವ ನೋಂದಣಿಯ ಸಂಪ್ರದಾಯವಿದೆ ಎನ್ನುವುದು ನಿಜ. ಆದರೆ ಯಾವುದೇ ತಾರತಮ್ಯದ ಸಂಗತಿಯನ್ನು ಅವು ಒಳಗೊಂಡಿಲ್ಲ ಮತ್ತು ಅವು ಸಾಮಾನ್ಯ ಜನಗಣತಿಯ ಸರಳ ವಿಸ್ತರಣೆಯಾಗಿವೆಯಷ್ಟೆ. ಈಗ ಭಾರತದ ಕಾನೂನೇ ಆ ದೇಶಗಳಿಗೆ ಮಾದರಿ ಅಥವಾ ಪ್ರಚೋದನೆಯಾದರೆ ಎಷ್ಟು ಜನ ಭಾರತೀಯರು ಜಗತ್ತಿನ ವಿವಿಧ ದೇಶಗಳಲ್ಲಿ ಪ್ರಜೆತನ ಕಳೆದುಕೊಂಡು ಎಂತಹ ಸ್ಥಿತಿ ನಿರ್ಮಾಣವಾಗಬಹುದು ಊಹಿಸಿ.

ಮೋದಿ ಮತ್ತು ಅವರ ಸರ್ಕಾರದ ವಕ್ತಾರರೇನೋ ಈ ತಿದ್ದುಪಡಿ ಕಾನೂನಿಂದ ಭಾರತದ ಮುಸ್ಲಿಂ ಪ್ರಜೆಗಳಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂದು ಹೇಳುತ್ತಿದ್ದಾರೆ. ನಿಜ, ಈಗಿರುವ ರೂಪದ ಕಾಯಿದೆಯಿಂದ ಇವರಿಗೆ ತೊಂದರೆಯಾಗುವುದಿಲ್ಲ. ಆದರೆ ಈ ಕಾಯಿದೆ ಪೌರತ್ವ ನೋಂದಣಿ ಕಾಯಿದೆ ಜೊತೆ ಸೇರಿದರೆ ಅದರ ಪರಿಣಾಮ ಕೇವಲ ಮುಸ್ಲಿಮರಿಗಷ್ಟೇ ಅಲ್ಲ ಇಡೀ ಭಾರತದ ಪ್ರಜಾ ಸಮುದಾಯದ ಮೇಲೆ ಹೇಗೆ ಆಗುತ್ತದೆಂದು ಅಸ್ಸಾಂ ಪ್ರಯೋಗದ ಸಂದರ್ಭದಲ್ಲಿ ವಿವರಿಸಲಾಗಿದೆ. ಜೊತೆಗೆ ಈ ಕಾಯಿದೆಗಳು ಹೀಗೇ ಇರುತ್ತವೆ ಎಂಬುದನ್ನು ಮೋದಿ ಮತ್ತು ಅವರ ಸಹಚರರ ವರ್ತನೆಯನ್ನು ಕಂಡವರಾರೂ ನಂಬಲು ಸಿದ್ಧರಿಲ್ಲ. ೩೭೦ನೇ ವಿಧಿಯನ್ನು ರದ್ದು ಮಾಡಿ ಆ ಮಾಜಿ ರಾಜ್ಯವನ್ನು ಕಳೆದೈದು ತಿಂಗಳುಗಳಿಂದ ನಿರ್ಮಮವಾಗಿ ನಿರ್ವಹಿಸುತ್ತಿರುವ ರೀತಿಯನ್ನು ನೋಡಿದರೆ, ಪೌರತ್ವ ತಿದ್ದುಪಡಿ ಕಾನೂನಿನ ವಿರುದ್ಧ ನಡೆದಿರುವ ಪ್ರತಿಭಟನೆಗಳನ್ನು ನಡೆಸುತ್ತಿರುವವರು ಯಾರು ಎಂಬುದನ್ನು ಅವರ ಉಡುಪಿನಿಂದಲೇ ಗುರುತಿಸಬಹುದು ಎಂಬ ಮೋದಿಯವರ ಪ್ರಚೋದಕ ಮಾತು, ನಮ್ಮ ಸಂಸತ್ ಸದಸ್ಯರೊಬ್ಬರು ಇದೇ ರೀತಿ, ಎದೆಸೀಳಿದರೆ ಒಂದಕ್ಷರ ಬರದ ಪಂಕ್ಚರ್ ಹಾಕುವವರೆಂಬ ಹೀನಾಯಕರ ವರ್ಣನೆ ಮತ್ತು ಹಿಂದೂ ರಾಷ್ಟ್ರ ಏಕೆ ಬೇಡ? ಎಂಬ ಕೇಂದ್ರ ಮಂತ್ರಿ ಅಂಗಡಿಯವರ ಅಮಾಯಕ ಪ್ರಶ್ನೆ, ಉತ್ತರ ಪ್ರದೇಶದ ಮುಖ್ಯಮಂತ್ರಿ ಶಾಂತಿಯುತ ಪ್ರತಿಭಟನೆಗಳೂ ನಡೆಯದಂತೆ ಅವನ್ನು ಹತ್ತಿಕುತ್ತಿರುವ ರೀತಿ, ಈ ಪ್ರತಿಭಟನೆಗಳ ವಿರುದ್ಧ ಸೇಡು ('ಬದಲಿ') ತೀರಿಸಿಕೊಳ್ಳುವ ಮಾತನಾಡಿರುವುದು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಸೇನೆಯ ಮುಖ್ಯಸ್ಥರು ನಿವೃತ್ತರಾಗುವ ಮುನ್ನ ಈ ಪ್ರತಿಭಟನೆಗಳ ಬಗ್ಗೆ ಆಡಿರುವ ಅಪ್ಪಟ ರಾಜಕೀಯ ಬಣ್ಣದ ಮಾತುಗಳು ಈ ದೇಶವನ್ನು ಎತ್ತ ಕೊಂಡೊಯ್ಯಲಾಗುತ್ತಿದೆ ಮತ್ತು ಏನು ಮಾಡುವ ಯೋಜನೆ ನಡೆದಿದೆ ಎಂಬ ತೀವ್ರ ಆತಂಕ ಉಂಟಾಗುತ್ತದೆ. ರಾಷ್ಟ್ರೀಯ ಪೌರತ್ವ ನೋಂದಣಿಗೆ ಸಿದ್ಧತೆಯೆಂದು ಸರ್ಕಾರವೇ ಸಂಸತ್‌ನಲ್ಲಿ ಹೇಳಿರುವ ರಾಷ್ಟ್ರೀಯ ಜನಗಣತಿಯ ಅರ್ಜಿ ನಮೂನೆಯಲ್ಲಿ ವ್ಯಕ್ತಿಯ ತಂದೆ ತಾಯಿಗಳ ಹುಟ್ಟೂರು ಮತ್ತು ಈ ಹಿಂದಿನ ವಾಸ ಸ್ಥಳದ ವಿವರಗಳ ಪ್ರಶ್ನೆಗಳನ್ನು ಈಗ ಹೊಸದಾಗಿ ಸೇರಿಸಿರುವುದು ಸಹಜವಾಗಿಯೇ ಆತಂಕಗಳನ್ನು ನಿಜ ಮಾಡುವಂತಿದೆ. ಆಗಿದೆ. ಇನ್ನು ಮೋದಿ ಸರ್ಕಾರ ಬಂದಾಗಿನಿಂದ ಒಂದು ನಿರ್ದಿಷ್ಟ ಸಮುದಾಯದ ಮೇಲೆ ನಡೆದಿರುವ ವಾರೆ ಮಾತುಗಳ ಮತ್ತು ಅವುಗಳ ಪರಿಣಾಮವಾಗಿ ನಡೆದಿರುವ ಗುಂಪು ಹಲ್ಲೆಗಳು ಇದಕ್ಕೆ ಹಿನ್ನೆಯನ್ನೂ ಒದಗಿಸಿವೆ.

**ಹಿಂದೂ ರಾಷ್ಟ್ರ ಎಂದರೆ...**

ಕೊನೆಯಲ್ಲಿ ಒಂದು ಮಾತು: ಹಿಂದೂ ರಾಷ್ಟ್ರವಾದರೆ ಒಳ್ಳೆಯದೇ ಆಗುವುದೆಂದು ಭಾವಿಸಿರುವ ಸಾಕಷ್ಟು ಜನ ಮುಗ್ಧರಿದ್ದಾರೆ. ಅವರಲ್ಲಿ ಬಹಳಷ್ಟು ಜನ ಇಸ್ಲಾಮಿ ರಾಷ್ಟ್ರ ರಚನೆಯಿಂದ ಕ್ರೋಧಗೊಂಡು ಸೇಡಿನ ರೂಪದಲ್ಲಿ ಅದನ್ನು ಕಲ್ಪಿಸಿಕೊಂಡು ಸ್ವಾಗತಿಸುವವರಿದ್ದಾರೆ ಆದರೆ ಸರ್ಕಾರ ಹಿಂದೂ ಧರ್ಮವೆಂದು ಯಾವುದಾವುದನ್ನು ಪರಿಗಣಿಸುತ್ತದೆ ಮತ್ತು ಅದರ ರಾಜಕೀಯ ಸ್ವರೂಪ ಹೇಗಿದ್ದೀತು ಎಂಬ ಕಲ್ಪನೆ ಅವರಿಗಿರಲಾರದು. ಅದು ಪ್ರಭುತ್ವ ನಿರೂಪಿಸುವಂತಹ ಹಿಂದೂ ಧರ್ಮವಾಗಿರುತ್ತದೆ ಮತ್ತು ಅದಕ್ಕೆ ಕಾನೂನಿನ ಬಲವಿರುತ್ತದೆ ಅಂದರೆ ಧರ್ಮ ಅಧಿಕಾರಶಾಹಿ ರೂಪ ಪಡೆಯುತ್ತದೆ ಮತ್ತು ನಮ್ಮಲ್ಲಿ ಅಧಿಕಾರಶಾಹಿ ಎಂದರೆ ಏನು ಎಂಬುದೂ ಎಂಬುದು ನೆನಪಿರಲಿ

ಹಾಗಾಗಿ ರಾಷ್ಟ್ರೀಯ ಪೌರತ್ವ ನೋಂದಣಿಯ ಬಗ್ಗೆ ಪ್ರಧಾನಿ ಮತ್ತು ಗೃಹ ಸಚಿವರು ಅನೌಪಚಾರಿಕ ಹೇಳಿಕೆಗಳನ್ನು ಕೊಟ್ಟರೆ ಸಾಲದು. ಒಂದು ಅಧಿಕೃತ ಪ್ರಕಟಣೆಯನ್ನು ಹೊರಡಿಸಿ ರಾಷ್ಟ್ರೀಯ ಪೌರತ್ತವ ನೋದಣೆಉಯಾವಉದ್ದೇಶವೂ ಇಲ್ಲ ಎಂದು ಸ್ಪಷ್ಟಪಡಿಸಬೇಕು. ಆನಂತರ ಪೌರತ್ವ ತಿದ್ದುಪಡಿ ಕಾಯಿದೆಯ ಸಾಂವಿಧಾನಿಕತೆ ಕುರಿತ ನ್ಯಾಯಾಲಯದ ತೀರ್ಪಿನವರೆಗೆ ಕಾಯಬಹುದು.

**'ಹೊಸ ಮನುಷ್ಯ'ದ ಒಂಬತ್ತನೆಯ ಹುಟ್ಟುಹಬ್ಬ**

'ಹೊಸ ಮನುಷ್ಯ'ದ ಮುಂದಿನ, ಅಂದರೆ ಫೆಬ್ರುವರಿ ಸಂಚಿಕೆ ನಮ್ಮ ಒಂಬತ್ತನೇ ವರ್ಷದ ಹುಟ್ಟು ಹಬ್ಬದ ಸಂಚಿಕೆಯಾಗಿರುತ್ತದೆ. ಈ ಸಂದರ್ಭಕ್ಕಾಗಿ ಓದುಗರು ಪತ್ರಿಕೆ ಕುರಿತ ತಮ್ಮ ನಾಲ್ಕು ಸಾಲುಗಳ ಒಟ್ಟಭಿಪ್ರಾಯವನ್ನು ಬರೆದು ಕಳಿಸಬೇಕೆಂದು ಕೋರುತ್ತೇವೆ.-ಸಂ.

**ನಿಮ್ಮ ಚಂದಾ ಸಂಖ್ಯೆ ಗಮನಿಸಿ**

ಈ ಸಂಚಿಕೆಯಿಂದ ಪತ್ರಿಕೆಯ ಮೇಲಿನ ನಿಮ್ಮ ವಿಳಾಸ ಚೀಟಿಯಲ್ಲಿ ನಿಮ್ಮ ಹೆಸರಿನ ಮುಂದೆ ನಿಮ್ಮ ಹೊಸ ಚಂದಾ ಸಂಖ್ಯೆ ನೀಡಲಾಗಿದೆ. ಪತ್ರಿಕೆ ತಲುಪದಿರುವ ಬಗ್ಗೆ ಅಥವಾ ಚಂದಾ ಸಂಬಂಧವಾಗಿ ನಮ್ಮೊಡನೆ ವ್ಯವಹರಿಸುವಾಗ ಈ ಸಂಖ್ಯೆಯನ್ನು ಉಲ್ಲೇಖಿಸಲು ಕೋರುತ್ತೇವೆ.-ಸಂ

ಇತಿಹಾಸ

# ನಾವು ಇಂದು ನೆಹರೂ ಅವರನ್ನು ಏಕೆ ನೆನೆಯಬೇಕು?

–ಸುಶೀಲ್ ಆರೂಣ್



ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಮತ್ತು ದೇಶದ ಮೊದಲ ಪ್ರಧಾನ ಮಂತ್ರಿ ಜವಹರಲಾಲ ನೆಹರೂ ಅವರನ್ನು ಹೀಗಳೆಯುವ, ದೇಶದ ಇಂದಿನ ಎಲ್ಲ ಸಮಸ್ಯೆಗಳಿಗೆ ಅವರೇ ಕಾರಣವೆಂಬ ವ್ಯವಸ್ಥಿತ ಪ್ರಚಾರ ಕಾರ್ಯಕ್ರಮವೊಂದು ಈಗ ದೇಶದಲ್ಲಿ ನಡೆದಿದೆ. ಆದರೆ ಇಂದು ಹಾಗೆ ಪ್ರಚಾರ ಮಾಡುತ್ತಿರುವವರು ತಾವು ಅಧಿಕಾರಕ್ಕೆ ಬರುವ ಮುಕ್ತ ಮತ್ತು ಸುಭದ್ರ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಗತ್ಯವಾದ ಎಲ್ಲ ತತ್ವ ಮತ್ತು ಸಂಸ್ಥೆಗಳಿಗೆ ಅಸ್ತಿಭಾರ ಹಾಕಿದವರು ಎಂಬುದನ್ನೇ ಮರೆತು ಒಂದು ಕೃತಘ್ನ ಮತ್ತು ಅಸತ್ಯದ ರಾಜಕಾರಣದಲ್ಲಿ ತೊಡಗಿದ್ದಾರೆ.

ನೆಹರೂ ದೇಶಕ್ಕಾಗಿ ಮಾಡಿದ ತ್ಯಾಗ, ಅನುಭವಿಸಿದ ಕಷ್ಟನಷ್ಟಗಳು ಮತ್ತು ನೀಡಿದ ಅಮೂಲ್ಯ ಐತಿಹಾಸಿಕ ಕೊಡುಗೆಗಳನ್ನು ಸ್ಮರಿಸುವ ಮೂಲಕ ದೇಶ ಇತಿಹಾಸಕ್ಕೆ ಮಾಡಲಾಗುತ್ತಿರುವ ಅಪಚಾರದತ್ತ ಜನಸಾಮಾನ್ಯರ ಗಮನ ಸೆಳೆಯಬೇಕಿದೆ.-ಸಂ.

**ನ**ರೇಂದ್ರ ಮೋದಿಯವರು ಒಪ್ಪದಿರಬಹುದು. ಆದರೆ ಭಾರತದ, ಹಾಗೆಯೇ ಜಗತ್ತಿನ ಮೇಲೆ ತಮ್ಮ ಪ್ರಭಾವವನ್ನು ಉಳಿಸಿ ಹೋಗಿರುವ ಐತಿಹಾಸಿಕ ವ್ಯಕ್ತಿತ್ವ ನೆಹರೂ ಅವರದ್ದು ಎಂಬುದನ್ನು ಜಗತ್ತು ಯಾವ ಹಿಂಜರಿಕೆಯೂ ಇಲ್ಲದೆ ಒಪ್ಪುತ್ತದೆ.

೧೯೬೪ ರಲ್ಲಿ ನೆಹರೂ ಅವರು ಮರಣ ಹೊಂದಿದಾಗ 'ನ್ಯೂಯಾರ್ಕ್ ಟೈಂಸ್' ಪತ್ರಿಕೆಯು ಸರಳವಾಗಿ ಅವರನ್ನು 'ಆಧುನಿಕ ಭಾರತದ ನಿರ್ಮಾತೃ' ಎಂದು ಕರೆಯಿತು, "ನೆಹರೂ ಇಲ್ಲದ ಜಗತ್ತು" ಎಂಬ ಮುಖಪುಟದ ಲೇಖನವೊಂದನ್ನು 'ದಿ ಎಕನಾಮಿಸ್ಟ್' ಪತ್ರಿಕೆಯು ಪ್ರಕಟಿಸಿತು. ಜನರ ಮೇಲೆ ಅವರಿಗಿದ್ದ ಮಾಂತ್ರಿಕ ಹಿಡಿತವನ್ನು ಸ್ಮರಿಸಿಕೊಂಡ ಪತ್ರಿಕೆಯು ಆ ಮಹಾನ್ ವ್ಯಕ್ತಿ ಇಲ್ಲದ ಜಾಗತಿಕ ವೇದಿಕೆಗಳನ್ನು ಕುರಿತು ಸಂತಾಪ ವ್ಯಕ್ತಪಡಿಸಿತು.

ಈಗ ಭಾರತದಲ್ಲಿ ನೆಹರೂ ಅವರ ಬಗೆಗಿನ ಅಭಿಪ್ರಾಯದಲ್ಲಿ ಒಂದು ಬದಲಾವಣೆ ಇದೆ. ಅವರು ಬದುಕಿದ್ದಾಗ ಜನರು ಅವರನ್ನು ಆರಾಧಿಸುತ್ತಿದ್ದರು, ಇತ್ತೀಚಿನ ದಿನಗಳಲ್ಲಿ ಅವರನ್ನು ಮರೆಸುವ ಅಥವಾ ಅವರ ಪಾತ್ರವನ್ನು ಕುಗ್ಗಿಸುವ ಒಂದು ಪ್ರವೃತ್ತಿ ಕಂಡುಬರುತ್ತಿದೆ. ಕಾಂಗ್ರೆಸ್ ಜನರನ್ನು ನಂಬಿಸಲು ಪ್ರಯತ್ನಿಸುವಂತೆ ಭಾರತವು ಪಂಡಿತ್ ನೆಹರೂ ಅವರಿಂದ ಪ್ರಜಾಪ್ರಭುತ್ವವನ್ನು ಪಡೆಯಲಿಲ್ಲ ಎಂದು ಮೋದಿಯವರು ಈಗ ಸಂಸತ್ತಿಗೆ ತಿಳಿಸಿದ್ದಾರೆ. ಕ್ವಿಟ್ ಇಂಡಿಯಾ ಚಳುವಳಿಯ ಬಗೆಗಿನ ರಾಷ್ಟ್ರೀಯ ದಾಖಲೆಗಳ (Archive) ಪ್ರದರ್ಶನದಲ್ಲಿ ನೆಹರೂ ಅವರ ಬಗ್ಗೆ ಪ್ರಸ್ತಾಪವೇ ಇರದಂತೆ ನೋಡಿಕೊಳ್ಳಲಾಯಿತು. ಸಂಸ್ಕೃತಿ ಮಂತ್ರಾಲಯವು ನೆಹರೂ ಅವರ ಅಧಿಕೃತ ನಿವಾಸದ ನೆಹರೂ ಸ್ಮಾರಕ ವಸ್ತು ಸಂಗ್ರಹಾಲಯವನ್ನು ಎಲ್ಲ ಪ್ರಧಾನಮಂತ್ರಿಗಳ ಜೀವನವನ್ನು ಪ್ರದರ್ಶಿಸುವ ಒಂದು ಸಂಕೀರ್ಣವನ್ನಾಗಿ ಪರಿವರ್ತಿಸಲು ನಿರ್ಧರಿಸಿದೆ. ಇದು ಎಲ್ಲರನ್ನೂ ಸಮಾನವಾಗಿ ಕಾಣುವ ತತ್ವದ ಸೋಗಿನಲ್ಲಿ ನಡೆಸುತ್ತಿರುವ ಹೀನ ಕೃತ್ಯವಾಗಿದೆ. ಬಹುಶಃ ಇಂತಹ ಬೇರೆ ಉದಾಹರಣೆಗಳು ಇರಲಾರವು. ಲಿಂಕನ್ನರ ಸ್ಮಾರಕದಲ್ಲಿ ಇದ್ದಕ್ಕಿದ್ದಂತೆ ಇತರ ನಾಯಕರ ಪ್ರತಿಮೆಗಳು ನಿಲ್ಲುವುದನ್ನು ಕಲ್ಪಿಸಿಕೊಳ್ಳಿ.

ನೆಹರೂ ಅವರನ್ನು ಗುರಿ ಮಾಡುತ್ತಿರುವುದಕ್ಕೆ ಹಲವು ಕಾರಣಗಳಿವೆ. ಮಹಾತ್ಮಾ ಗಾಂಧಿಯವರ ಹತ್ಯೆಯ ನಂತರ ಆರ್‌ಎಸ್‌ಎಸ್ ಅನ್ನು ನಿಷೇಧಿಸಿದ್ದಕ್ಕಾಗಿ ಅದಕ್ಕೆ ನೆಹರೂ ಅವರ ಬಗ್ಗೆ ತಿರಸ್ಕಾರವಿದೆ. ಮತ್ತು ನೆಹರೂ ಅವರು ದೇಶದಲ್ಲಿ ಜಾರಿಗೆ ತಂದ ಜಾತ್ಯತೀತೆಯ ಮಾದರಿಯ ಬಗ್ಗೆ ಆರ್‌ಎಸ್‌ಎಸ್‌ಗೆ ತೀವ್ರ ವಿರೋಧವಿದೆ. ೧೯೬೨ ರ ಯುದ್ಧದಲ್ಲಿ ಚೀನಾದ ವಿರುದ್ಧ ನಾವು ಹೀನಾಯವಾಗಿ ಸೋತಿದ್ದನ್ನು ಬಳಸಿಕೊಂಡು ಜನರ ಮನಸ್ಸನ್ನು ನೆಹರೂ ಅವರ ವಿರುದ್ಧ ತಿರುಗಿಸುವುದು ಬಹು ಸುಲಭ. ನೆಹರೂ ಅವರ ಅಲಿಪ್ತ ನೀತಿ ಮತ್ತು ದೇಶದ ಯೋಜನೆಯ ಬಗ್ಗೆ ಅವರಿಗಿದ್ದ ನಂಬಿಕೆಯನ್ನೂ ಪ್ರಶ್ನಿಸಲಾಗುತ್ತಿದೆ. ಸಾರ್ವಜನಿಕ ಜೀವನದಲ್ಲಿ ಅವರಿಗಿದ್ದ ಪ್ರಾಮುಖ್ಯತೆಯ ಬಗೆಗೂ ಹಲವರಿಗೆ ಅಸಮಾಧಾನವಿದೆ – ನೆಹರೂ ಅವರ ಪ್ರತಿಮೆಗಳನ್ನು ನಿಲ್ಲಿಸುವ ಮೂಲಕ ರಸ್ತೆಗಳಿಗೆ, ಸರ್ಕಾರೀ ಕಾರ್ಯಕ್ರಮಗಳಿಗೆ ಅವರ ಹೆಸರನ್ನು ಇಡುವ ಮೂಲಕ, ಅವರ ಚಿತ್ರಗಳಿರುವ ಜಾಹೀರಾತುಗಳನ್ನು ನೀಡುವ ಮೂಲಕ, ಕಾಂಗ್ರೆಸ್ ಅವರನ್ನು ರಾಜಕೀಯವಾಗಿ ಬಳಸಿಕೊಂಡದ್ದರ ಬಗ್ಗೆ ಹಲವರಿಗೆ ಅಸಮಾಧಾನವಿದೆ. ಆದರೆ ನಹರೂ ಅವರ ಹಿರಿಮೆಯನ್ನು ಅವರ ಈ ಬಗೆಯ ಸರ್ವವ್ಯಾಪಕತೆ ಮಸುಕುಗೊಳಿಸಿಬಿಟ್ಟಿದೆ ಎಂಬುದೂ ನಿಜವೇ.

## ನೆಹರೂ ಅವರ ಹಿರಿಮೆಯ ಮೈಲಿಗಲ್ಲುಗಳು

ಭಾರತ ದೇಶಕ್ಕೆ ನೆಹರೂ ಏನಾಗಿದ್ದರು ಮತ್ತು ಇಂದು ಅವರು ದೇಶಕ್ಕೆ ನೀಡಬಹುದಾದದ್ದು ಏನು ಎಂಬ ವಿಚಾರದಲ್ಲಿ ನೆಹರೂ ಅವರ ಬದುಕು ಸ್ಮರಣಾರ್ಹ. ನೆಹರೂ ಅವರ ಅರ್ಹತೆಗೆ ಹೋಲಿಸಿದಲ್ಲಿ ಲಭ್ಯವಿರುವ ಅವರ ಜೀವನ ಚರಿತ್ರೆಗಳ ಸಂಖ್ಯೆ ಕಡಿಮೆ ಎಂದೇ ಹೇಳಬೇಕು. ಅವರ ಸಮಗ್ರ ಕೃತಿಗಳು, ಬರಹಗಳು, ಮಾತುಗಳು, ಲೇಖನಗಳು ಖಾಸಗಿ ಪತ್ರವ್ಯವಹಾರಗಳು ಮತ್ತು ಭಾಷಣಗಳ ವಿಪುಲತೆ ಎಷ್ಟಿದೆ ಎಂದರೆ ಅವನ್ನು ಸಮಗ್ರವಾಗಿ ನೋಡುವುದೇ ಒಂದು ಸವಾಲು. ನೆಹರೂ ಅವರ ಜೀವನ ಚರಿತ್ರೆಗಳ ಸಂಖ್ಯೆ ಕಡಿಮೆ ಇರುವುದಕ್ಕೆ ಅಂಶಿಕವಾಗಿ ಇದೂ ಕೂಡ ಕಾರಣವಿರಬಹುದು. ಇತಿಹಾಸಕಾರ ಜೂಡಿತ್ ಎಂ ಬ್ರೌನ್ ಅವರ 'ನೆಹರೂ ; ಒಂದು ರಾಜಕೀಯ ಜೀವನ' ಎಂಬ ಕೃತಿಯು ಈ ದಿಸೆಯಲ್ಲಿ ಬಹಳ ಉಪಯುಕ್ತವಾಗಬಲ್ಲ ಕೃತಿ. ಈಗ ಲಭ್ಯವಿರುವ ಮಾಹಿತಿ ಮತ್ತು ಸೋನಿಯಾ ಗಾಂಧಿಯವರು ದೊರಕಿಸಿಕೊಟ್ಟ ೧೯೪೭ ರ ನಂತರದ ಕಾಗದ ಪತ್ರಗಳನ್ನು ಆಧರಿಸಿ ಬ್ರೌನ್ ಅವರು ನೆಹರೂ ಅವರ ವೃತ್ತಿಜೀವನದ ಒಂದು ಆಕರ್ಷಕ ಸಮತೂಕದ ಚಿತ್ರಣ ನೀಡಿದ್ದಾರೆ.

ಒಬ್ಬ ಶ್ರೀಮಂತ ವಕೀಲರಾಗಿದ್ದ ರಾಜಕಾರಣಿ ಮೋತಿಲಾಲ ನೆಹರೂ ಅವರ ಮಗನಾಗಿ ಭಾಗ್ಯವಂತ ಕುಟುಂಬವೊಂದರಲ್ಲಿ ಜನಿಸಿದ ಜವಹರಲಾಲರು ಬೆಳೆದದ್ದು, ಬ್ರೌನ್ ಅವರ ಮಾತುಗಳಲ್ಲಿ ಹೇಳಬೇಕೆಂದರೆ, ಭಾರತದ ಸಾಮಾಜಿಕ ಮತ್ತು ಧಾರ್ಮಿಕ ಸಂಪ್ರದಾಯಗಳಿಗೆ ಸವಾಲು ಒಡ್ಡುತ್ತಿದ್ದ ಮತ್ತು ಶಿಕ್ಷಿತ ಭಾರತೀಯರಿಗೆ ವಿಚಾರಗಳನ್ನೂ ಹಾಗೂ ರಾಜಕೀಯ ಅವಕಾಶಗಳನ್ನೂ ದೊರಕಿಸುತ್ತಿದ್ದ ಕಾಲಘಟ್ಟದಲ್ಲಿ. ನೆಹರೂ ಅವರು ಬೆಳೆಸಿಕೊಂಡ ಸಾಮ್ರಾಜ್ಯಶಾಹಿಯ ವಿರುದ್ಧದ ಅಭಿಪ್ರಾಯವು ರೂಪುಗೊಂಡಿದ್ದು ಹ್ಯಾರೋ ಮತ್ತು ಕೇಂಬ್ರಿಡ್ಜ್ ವಿಶ್ವವಿದ್ಯಾಲಯಗಳಲ್ಲಿ ಅವರ ಶಿಕ್ಷಣದ ಕಾಲದಲ್ಲಿ. ಭಾರತಕ್ಕೆ ಹಿಂದಿರುಗಿದ ನಂತರ, ಕೆಲವು ಗುರಿಯಿಲ್ಲದೆ ಕಳೆದ ವರ್ಷಗಳ ನಂತರ ಗಾಂಧಿಯವರಿಂದ ಮತ್ತು ೧೯೧೯–೨೦ ರ ಆಚೀಚಿನ ವರ್ಷಗಳಲ್ಲಿ ನಡೆಯುತ್ತಿದ್ದ ಚಳುವಳಿಗಳಿಂದ ನೆಹರೂ ರಾಜಕೀಯದ ಕಡೆಗೆ ಸೆಳೆಯಲ್ಪಟ್ಟರು. ಅಂದಿನ ರಾಷ್ಟ್ರೀಯ ಚಳುವಳಿಯು ಅಸಹಕಾರದ ಬಗೆಗೆ, ಪೂರ್ಣ ಸ್ವಾತಂತ್ರ್ಯಕ್ಕಾಗಿ ಒತ್ತಾಯಿಸಬೇಕೆ ಅಥವಾ ಕ್ರಮೇಣವಾದಿ ವಿಧಾನವನ್ನು ಅನುಸರಿಸಬೇಕೆ? ಎಂಬ ಬಗೆಗಿನ ಚರ್ಚೆಗಳಿಂದ ತುಂಬಿಹೋಗಿತ್ತು.

ಈ ಕೃತಕ ವಾತಾವರಣದಲ್ಲಿ ಗಾಂಧಿಯವರ ರಾಜಕೀಯ ವಿಧಾನಗಳು, ಮತ್ತು ನೈತಿಕ ಪರಿವರ್ತನೆಗೆ ಅವರು ನೀಡುತ್ತಿದ್ದ ಪ್ರಾಮುಖ್ಯತೆಯು ನೆಹರೂ ಅವರಿಗೆ ಹತಾಶೆಯನ್ನುಂಟು ಮಾಡಿದರೂ ಕೂಡ ಭಾರತದ ಸ್ವಾತಂತ್ರ್ಯಗಳಿಕೆಗೆ ಗಾಂಧೀಜಿಯವರು ಬಹುಮುಖ್ಯ ಎಂದು ಭಾವಿಸಿ ಅವರೊಡನೆ ನಿಂತರು. ನೆಹರೂ ಅವರ ದೃಷ್ಟಿಯು ರೂಪುಗೊಳ್ಳುವಲ್ಲಿ ಇತರ ಅಂಶಗಳ ಪಾತ್ರ ಕೂಡ ಇವೆ. ಹಿಂದು ಮುಸ್ಲಿಂ ಸಾಂಸ್ಕೃತಿಕ ಸೌಹಾರ್ದದ ವಾತಾವರಣದಲ್ಲಿ ಅವರು ಬೆಳೆದದ್ದು ಅದರಲ್ಲೊಂದು. ಮೋತಿಲಾಲರಿಗೆ ಪ್ರಾರಂಭದಲ್ಲಿ ಒಬ್ಬ ಮುಸ್ಲಿಂ ಬೋಧಕರಿಂದ ದೊರೆತುದು ಅರೇಬಿಕ್ ಮತ್ತು ಪರ್ಶಿಯನ್ ವಿದ್ಯಾಭ್ಯಾಸ ಮತ್ತು ಅಲಹಾಬಾದ್‌ನಲ್ಲಿದ್ದ ಕಾಶ್ಮೀರಿ ಮೂಲದ ಕುಟುಂಬ ಅವರದ್ದಾಗಿದ್ದರಿಂದ ಅವರನ್ನು ಸ್ಥಳೀಯರೆಂದು ಪರಿಗಣಿಸುವಂತಿರಲಿಲ್ಲ. ಸಂಕುಚಿತ ಪ್ರಾಂತೀಯ ನಿಷ್ಠೆಯೇನೂ ಅವರಿಗಿರಲಿಲ್ಲ. ಕೆಲವು ರೀತಿಯಲ್ಲಿ ನೆಹರೂ ಅವರು ಯಾವಾಗಲೂ ಸದಾ ಹೊರಗಿನವರಾಗಿಯೇ ಇದ್ದರು – ಬ್ರಿಟನ್‌ಅನ್ನು ಸಾಂಸ್ಕೃತಿಕವಾಗಿ ಮೆಚ್ಚುತ್ತಿದ್ದ ತೀವ್ರ ರಾಷ್ಟ್ರವಾದಿ ಅವರಾಗಿದ್ದರು. ವಿದೇಶೀ ಆಳ್ವಿಕೆಗೆ ಭಾರತವು ಅಡಿಯಾಳಾಗಿದ್ದರ ಬಗ್ಗೆ ಅವರಿಗೆ ತೀವ್ರ ಖೇದವಿತ್ತು, ಆದರೆ ಕೆಲವು ಭಾರತೀಯ ನಂಬಿಕೆಗಳು ಮತ್ತು ಸಂಪ್ರದಾಯಗಳ(customs) ಬಗ್ಗೆ ಅವರಿಗೆ ಸಮ್ಮತಿಯಿರಲಿಲ್ಲ.

ಬಹಳ ಬೇಗನೆ ನೆಹರೂ ಅವರು ರಾಜಕೀಯ ಚಟುವಟಿಕೆ ಮತ್ತು ಕಾಂಗ್ರೆಸ್‌ಪಕ್ಷದ ಕೆಲಸಗಳಲ್ಲಿ ತೊಡಗಿಕೊಂಡರು. ಅಪಾರವಾದ ಓದಿನಲ್ಲೂ ಅವರು ತೊಡಗಿದರು, ಆಗಾಗ ಜೈಲಿನಲ್ಲಿರುತ್ತಿದ್ದುದು ಅವರ ಓದಿಗೆ ಸಹಕಾರಿಯಾಗಿತ್ತು. ೧೯೨೧ ರಿಂದ ೧೯೪೫ ರ ವರೆಗಿನ ೨೫ ವರ್ಷಗಳಲ್ಲಿ ೧೨ ದಿನಗಳಿಂದ ೧೧೪೧ ದಿನಗಳವರೆಗೆ

ವಿವಿಧ ಅವಧಿಗಳಲ್ಲಿ ಒಟ್ಟು ಒಂಭತ್ತು ಸಲ ಅವರು ಜೈಲುವಾಸ ಅನುಭವಿಸಿದರು. ತಮ್ಮ ಜೀವಿತಾವಧಿಯಲ್ಲಿ ನೆಹರೂ ಒಟ್ಟು ೩೨೫೯ ದಿನಗಳನ್ನು ಅಂದರೆ ಸುಮಾರು ಒಂಭತ್ತು ವರ್ಷಗಳನ್ನು ಜೈಲಿನಲ್ಲಿ ಕಳೆದಿದ್ದರು. ಅವರು ಜೈಲು ಜೀವನಕ್ಕೆ ಹೊಂದಿಕೊಂಡು ಅಲ್ಲಿ ಗಳಿಸಿದ ಸ್ನೇಹದ ಬಗ್ಗೆ, ಬೆಳೆಸಿಕೊಂಡ ಹವ್ಯಾಸಗಳ ಬಗ್ಗೆ, ಅಲ್ಲಿ ಏಕಾಂತದ ಕೊರತೆಯಿಂದ ಉಂಟಾದ ಕಿರಿಕಿರಿಯ ಬಗ್ಗೆ ಬರೆದರು. 'ಅವರಿಗಿದ್ದ ದೊಡ್ಡ ಸಮಾಧಾನವೆಂದರೆ ಓದು' ಎಂದು ಬ್ರೌನ್ ಬರೆಯುತ್ತಾರೆ. ಅವರು ರಾಜಕೀಯ, ವಿಜ್ಞಾನ, ಅರ್ಥಶಾಸ್ತ್ರ, ಸಾಹಿತ್ಯ ಸಮಕಾಲೀನ, ಹೀಗೆ ಅನೇಕ ವಿಚಾರಗಳ ಬಗ್ಗೆ ಓದುತ್ತಿದ್ದರು. ಘನವಾದ ಓದು ಜೈಲು ಜೀವನಕ್ಕೆ ಅನಿವಾರ್ಯ ಅದಿಲ್ಲದಿದ್ದರೆ ಮನಸ್ಸು ನಿಂತ ನೀರಾಗಿ ಕೊಳೆಯತೊಡಗುತ್ತದೆ ಎಂದು ಅವರು ಹೇಳುತ್ತಿದ್ದರು. ೧೯೩೪ ರ ಫೆಬ್ರವರಿ ಯಿಂದ ೧೯೩೫ರ ಸೆಪ್ಟೆಂಬರ್ ವರೆಗಿನ ಒಂದು ಹಂತದಲ್ಲಿ ಅವರು ೧೮೮ ಪುಸ್ತಕಗಳನ್ನು ಅಂದರೆ ತಿಂಗಳಿಗೆ ೧೫ – ೨೦ ಪುಸ್ತಕಗಳನ್ನು ಓದಿ ಮುಗಿಸಿದ್ದರು.

ಅವರ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿನ ಬಹಳ ತೀವ್ರ ಭಾವೋದ್ದೀಪಕ ಪತ್ರಗಳು ಮತ್ತು ಅವರ ಲಿಖಿತ ಭಾಷಣಗಳು ಮುಂತಾದ ಬರಹಗಳಲ್ಲಿ ಕಾಣುವ ಮಾಂತ್ರಿಕ ಗದ್ಯವನ್ನು ಸೃಷ್ಟಿಸುವ ಅವರ ಶಕ್ತಿಯನ್ನು ರೂಪಿಸಿದ್ದು ಅವರ ಈ ಓದು ಎನ್ನಬಹುದು. ಭಾರತ ಮತ್ತು ಬ್ರಿಟನ್ ದೇಶಗಳಲ್ಲಿ ಅವರ ಜೀವನ, ಯೂರೋಪ್‌ನಲ್ಲಿ ಅವರ ಸಂಚಾರ, ಇತರ ದೇಶಗಳ ನಾಯಕರೊಂದಿಗಿನ ಅವರ ಚರ್ಚೆಗಳು, ಮುಂತಾದುವುಗಳ ಮೂಲಕ ನೆಹರೂ ವಸಾಹತುಶಾಹಿ ಆಳ್ವಿಕೆ, ದೇಶಗಳ ಒಳಗೆ ಮತ್ತು ಬೇರೆ ಬೇರೆ ದೇಶಗಳ ನಡುವಿನ ಸಮಾನತೆ, ಭೂಸುಧಾರಣೆಯ ಅಗತ್ಯ, ಆರ್ಥಿಕ ಮತ್ತು ಸಾಮಾಜಿಕ ವಿಚಾರಗಳಲ್ಲಿ ಸರ್ಕಾರದ ಮಧ್ಯಪ್ರವೇಶ, ಒಂದು ದೇಶದ ಜೀವನದಲ್ಲಿ ವಿಜ್ಞಾನದ ಪಾತ್ರ (ಅವರು ನಿರಾಕರಿಸುತ್ತಿದ್ದ ಮತತತ್ವಗಳ ನಂಬಿಕೆಗಳಿಗೆ ಪ್ರತಿಯಾಗಿ) ದೇಶದ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ, ಹಾಗು ಜಾಗತಿಕ ವಿಚಾರಗಳಲ್ಲಿ ಭಾರತದ ಸ್ಥಾನ ಮುಂತಾದ ವಿಚಾರಗಳಲ್ಲಿ ನೆಹರೂ ಪ್ರಬಲವಾದ ಅಭಿಪ್ರಾಯಗಳನ್ನು ರೂಢಿಸಿಕೊಂಡರು.

೧೯೩೦ ರಲ್ಲಿ ಪಕ್ಷದ ಅಧ್ಯಕ್ಷ ಸ್ಥಾನವನ್ನು ಗಳಿಸುವುದನ್ನೂ ಒಳಗೊಂಡಂತೆ ನೆಹರೂ ಅವರು ಕಾಂಗ್ರೆಸ್‌ನೊಳಗೆ ಪ್ರಾಮುಖ್ಯತೆಯನ್ನು ಪಡೆಯುತ್ತಿದ್ದ ಕಾಲಕ್ಕೆ ರಾಷ್ಟ್ರೀಯ ಚಳುವಳಿಯು ಹೋರಾಟ, ಹೊಂದಾಣಿಕೆ, ಗುಂಪುಗಾರಿಕೆಯ ಒಡಕು ಸ್ಥಗಿತತೆ ಮುಂತಾದ ವಿವಿಧ ಹಂತಗಳನ್ನು ಹಾದುಹೋಗುತ್ತಿತ್ತು, ಹಾಗಾಗಿ ಅವರ ಬೌದ್ಧಿಕ ಬೆಳವಣಿಗೆ ಬಹಳ ಮುಖ್ಯವಾಗಿತ್ತು. ಈ ದಶಕದಲ್ಲಿ ಗಾಂಧೀಜಿಯವರು ಒಬ್ಬ ರಾಜಕೀಯ ನಾಯಕರಾಗಿ ಮಾತ್ರ ಉಳಿಯದೆ ತಮ್ಮ ಗಮನವನ್ನು ಅಸ್ಪೃಶ್ಯರ ಸ್ಥಿತಿ ಗತಿಗಳ ಕಡೆ ಹರಿಸುತ್ತಿದ್ದರು. ೧೯೩೬ ರ ಹೊತ್ತಿಗೆ ಗಾಂಧೀಜಿಯವರು ಸಾರ್ವಜನಿಕವಾಗಿ ನೆಹರೂ ಅವರನ್ನು ತಮ್ಮ ವಾರಸುದಾರರೆಂದು ಘೋಷಿಸಿದ್ದರು. ನೆಹರೂ ಅವರಿಗಿದ್ದ ಪ್ರತಿಭೆ ಮತ್ತು ಯಾವುದೇ ವಿಭಾಗೀಯ ಅಥವಾ ವೈಯಕ್ತಿಕವಾದ ಹಿತಾಸಕ್ತಿಗಳಿಲ್ಲದೆ ಇಡೀ ದೇಶದ ಬಗೆಗೆ ಅವರಿಗಿದ್ದ ಕಾಳಜಿಗಳ ಕಾರಣಕ್ಕೆ, ಕಾಂಗ್ರೆಸ್‌ನೊಳಗೆ ಐಕ್ಯತೆಯನ್ನು ಸಾಧಿಸುವುದಕ್ಕೆ ಅವರೇ ಸೂಕ್ತ ವ್ಯಕ್ತಿ ಎಂದು ಗಾಂಧೀಜಿಯವರಿಗೆ ಅನ್ನಿಸುತ್ತಿತ್ತು. ಈ ಹಂತದಲ್ಲಿ ನೆಹರೂ ಪಕ್ಷದ ಚರ್ಚೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದುದು ಮಾತ್ರವಲ್ಲದೆ ಸಾಕಷ್ಟು ಸಾರ್ವಜನಿಕ ಮೆಚ್ಚುಗೆಗೆ ಪಾತ್ರರಾಗಿದ್ದ ಜನನಾಯಕರೂ ಸಹ ಆಗಿದ್ದರು.

೧೯೪೬ ರಲ್ಲಿ ತಾತ್ಕಾಲಿಕ ಸರ್ಕಾರದ ಮುಖ್ಯಸ್ಥರಾಗಿದ್ದ ನೆಹರೂ ದೇಶದ ವಿಭಜನೆ, ಮತ್ತು ಸ್ವಾತಂತ್ರ್ಯದವರೆಗೆ ಮೌಂಟ್ ಬ್ಯಾಟನ್ ಹಾಗೂ ಜಿನ್ನಾ ಅವರೊಂದಿಗೆ ನಡೆದ ಚರ್ಚೆಗಳಲ್ಲಿ ಪ್ರಮುಖ ಪಾತ್ರ ವಹಿಸಿದರು. ಪೂರ್ಣ ಸ್ವರಾಜ್ಯಕ್ಕಾಗಿ ಗಾಂಧೀಜಿಯವರು ಚಳುವಳಿ ಪ್ರಾರಂಭಿಸುವುದಕ್ಕೆ ಮೊದಲೇ ನೆಹರೂ ಅವರು ಅದಕ್ಕಾಗಿ ಒತ್ತಾಯಿಸಿದ್ದರು. ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಮೊದಲು ಪ್ರಾಂತ್ಯಗಳಿಗೆ ಅಧಿಕಾರವನ್ನು ವಹಿಸುವ ಮೌಂಟ್ ಬ್ಯಾಟನ್ ಅವರ ಪ್ರಸ್ತಾವನೆಯನ್ನು ನೆಹರೂ ಬಲವಾಗಿ ವಿರೋಧಿಸಿದರು. ಅದು ಭಾರತ ದೇಶದ ಒಡಕಿಗೆ ಕಾರಣವಾಗುವುದೆಂಬುದು ಅವರ ತಿಳುವಳಿಕೆಯಾಗಿತ್ತು.

ಮೌಂಟ್ ಬ್ಯಾಟನ್ ತಮ್ಮ ಪ್ರಸ್ತಾಪವನ್ನು ಹಿಂತೆಗೆದುಕೊಂಡರು. ಆದರೆ ಸ್ವಾತಂತ್ರ್ಯ ದೊರೆಯುವ ಮೊದಲ ಕೆಲವು ವಾರಗಳಲ್ಲಿ ನೆಹರೂ ಮತ್ತು ಅವರ ಸಹಚರರು, ತೀವ್ರ ಹಿಂಸಾಚಾರ, ಭಾರತ ಅಥವಾ ಪಾಕಿಸ್ತಾನದ ಜೊತೆ ಸೇರಬಯಸುವ ಪ್ರಾಂತ್ಯಗಳಿಗಿದ್ದ ಆಯ್ಕೆಯ ಅವಕಾಶ, ರಾಜರುಗಳ ಮುಂದಿನ ಭವಿಷ್ಯ, ಬ್ರಿಟಿಷ್ ಭಾರತದ ಆಸ್ತಿಯನ್ನು ಪಾಲು ಮಾಡುವ ಪ್ರಕ್ರಿಯೆ ಇತ್ಯಾದಿ ಸವಾಲುಗಳನ್ನು ಎದುರಿಸಬೇಕಾಗಿತ್ತು. ಬಹು ಶೀಘ್ರದಲ್ಲಿ ಕಾಶ್ಮೀರದ ಬಿಕ್ಕಟ್ಟನ್ನು ನೆಹರೂ ಎದುರಿಸಬೇಕಾಯಿತು. ಸ್ವಾತಂತ್ರ್ಯ ದೊರೆತ ಆರು ತಿಂಗಳ ಒಳಗೇ ಗಾಂಧೀಜಿಯವರ ಹತ್ಯೆಯ ಸಮಸ್ಯೆಯನ್ನೂ ಅವರು ಎದುರಿಸಬೇಕಾಯಿತು.

**ಅವರ ಮೂರು ಬಹುಮುಖ್ಯ ಕೊಡುಗೆಗಳು** :

ಭಾರತ ಇಂದು ಗಣರಾಜ್ಯವಾಗಿರುವುದು ನೆಹರೂ ಅವರು ೧೯೪೬ ರ ನಂತರದ ತಮ್ಮ ವೃತ್ತಿಜೀವನದಲ್ಲಿ ಮಾಡಿದ, ಅವರ ಖ್ಯಾತಿಗೂ ಕಾರಣವಾದ, ಮೂರು ಮುಖ್ಯ ಮಧ್ಯಪ್ರವೇಶದಿಂದ. ಮೊದಲನೆಯದಾಗಿ ಭಾರತದ ಬಗೆಗಿನ ತಮ್ಮ ದರ್ಶನವನ್ನು ಅವರು ಸಂವಿಧಾನದಲ್ಲಿ ಮೂಡಿಸಿದರು. ಭಾರತವು ತನ್ನೆಲ್ಲಾ ಅಧಿಕಾರವನ್ನೂ ಜನರಿಂದ ಪಡೆಯುವ ಒಂದು ಸ್ವತಂತ್ರ ಗಣರಾಜ್ಯವಾಗಬೇಕು. ಪ್ರತಿಯೊಬ್ಬರಿಗೂ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನ್ಯಾಯ ದೊರೆಯಬೇಕು, ಸ್ಥಾನಮಾನಗಳಲ್ಲಿ, ಅವಕಾಶಗಳಲ್ಲಿ ಸಮಾನತೆ, ಮತ್ತು ಆಲೋಚನೆ, ಧರ್ಮ, ಮತ್ತು ಸಭೆ ಸೇರುವ ಸ್ವಾತಂತ್ರ್ಯ ಮುಂತಾದ ವಿಚಾರಗಳಿಗೆ ಸಂಬಂಧಿಸಿದಂತೆ ಒಂದು ಕರಡನ್ನು ಸಿದ್ಧಪಡಿಸಿ ಅದನ್ನು ಸಂವಿಧಾನ ರಚನಾ ಸಭೆಯಲ್ಲಿ ಮಂಡಿಸಿದರು. ಹಿಂದುಳಿದ ವರ್ಗಗಳಿಗೆ ಅಲ್ಪ ಸಂಖ್ಯಾತರಿಗೆ ಆದಿವಾಸಿಗಳಿಗೆ ರಕ್ಷಣೆ ದೊರೆಯಬೇಕು ಎಂಬ ಪ್ರಸ್ತಾಪವನ್ನೂ ಸಹ ಈ ಕರಡು ಒಳಗೊಂಡಿತ್ತು. ಇವೆಲ್ಲವೂ ಸಹಜವಾಗಿ ಬಂದವುಗಳಾಗಿರಲಿಲ್ಲ. ೧೯೩೭ ರ ಪ್ರಾಂತೀಯ ಚುನಾವಣೆಗಳು ಆಸ್ತಿ ಮತದಾನದ ಹಕ್ಕನ್ನು ಕನಿಷ್ಟ ಆಸ್ತಿ ಮಾಲೀಕತ್ವದಿಂದ ಮಿತಿಗೊಳಿಸಲ್ಪಟ್ಟಿದ್ದುದರಿಂದ ಕೇವಲ ಮೂರು ಕೋಟಿ ಭಾರತೀಯರಿಗೆ ಮಾತ್ರವೇ ಮತದಾನದ ಹಕ್ಕನ್ನು ನೀಡಲಾಗಿತ್ತು. ಇದಕ್ಕೆ ಪ್ರತಿಯಾಗಿ ೧೯೫೧ ರಲ್ಲಿ ಸ್ವತಂತ್ರ ಭಾರತದಲ್ಲಿ ನಡೆದ ಚುನಾವಣೆಯಲ್ಲಿ ೧೭.೩ ಕೋಟಿ ಭಾರತೀಯರಿಗೆ ಮತದಾನದ ಹಕ್ಕು ದೊರೆತಿತ್ತು. ಇತಿಹಾಸಕಾರ ರಾಮಚಂದ್ರ ಗುಹಾ ತಮ್ಮ ದೇಶಭಕ್ತರೂ ಮತ್ತು ಪಕ್ಷವರ್ತಿಗಳು' ಎಂಬ ಲೇಖನದಲ್ಲಿ ನೆಹರೂ ಅವರು ನಮ್ಮ ಪ್ರಜಾತಂತ್ರದ ಪ್ರಶ್ನಾತಿತ ಪ್ರಧಾನ ಶಿಲ್ಪಿ, ಇತರ ಯಾವ ನಾಯಕರಿಗಿಂತಲೂ ಹೆಚ್ಚು ಸಾರ್ವತ್ರಿಕ ಮತದಾನ ಮತ್ತು ಬಹುಪಕ್ಷೀಯ ವ್ಯವಸ್ಥೆಯನ್ನು ಪ್ರೋತ್ಸಾಹಿಸಿದವರು ಅವರೇ ಎಂಬುದಾಗಿ ಬರೆಯುತ್ತಾರೆ.

ನೆಹರೂ ಅವರ ದರ್ಶನದ ಕೇಂದ್ರದಲ್ಲಿ, ಈ ಉಪಖಂಡದಲ್ಲಿ ಶತಮಾನಗಳಿಂದ ಅಸ್ತಿತ್ವದಲ್ಲಿದ್ದ ಹಲವು ಧಾರ್ಮಿಕ, ಸಾಂಸ್ಕೃತಿಕ ಪದ್ಧತಿಗಳ ಸಂಗಮವಾಗಿ ಮೂಡಿಬಂದ ಸಂಸ್ಕೃತಿಯಿಂದ ಹುಟ್ಟಿರುವ ಒಂದು ಸಂಯುಕ್ತ ರಾಷ್ಟ್ರ ಭಾರತ ಎಂಬ ವಿಚಾರವಿತ್ತು. ಭಾರತವು ಒಂದು ಸ್ವತಂತ್ರ ದೇಶವಾಗಿ ಮೂಡುತ್ತಿದ್ದು, ರಾಜಪ್ರಭುತ್ವ ಹೊಂದಿದ್ದ ಪ್ರಾಂತ್ಯಗಳು ಮತ್ತು ಇತರೆ ಸಮುದಾಯಗಳು ಪರ್ಯಾಯ ರಾಜಕೀಯ ಭವಿಷ್ಯವನ್ನು ಹೊಂದಿದ್ದ ಕಾಲಘಟ್ಟದಲ್ಲಿ ಒಂದು ರಾಜಕೀಯ ಜೋಡಣೆಯಾಗಿ ಮೂಡಿಬರುತ್ತಿದ್ದ ಹಂತದಲ್ಲಿ ನೆಹರೂ ಕೆಲಸ ಮಾಡಬೇಕಾಗಿತ್ತು. ಪ್ರತಿಯೊಬ್ಬರಿಗೂ ಖಾತರಿಯಾದ ಮೂಲಭೂತ ಹಕ್ಕುಗಳು, ಧರ್ಮನಿರಪೇಕ್ಷತೆ, ಸಾಮಾಜಿಕ ಅಸಮಾನತೆಗಳನ್ನು ಮತ್ತು ಪ್ರತ್ಯೇಕತೆಗಳನ್ನು ಗಣನೆಗೆ ತೆಗೆದುಕೊಳ್ಳುವ ರಾಜ್ಯ ನೀತಿಗಳು ಮಾತ್ರವೇ ಸಂಯುಕ್ತ ಭಾರತವನ್ನು ಒಟ್ಟಾಗಿ ಹಿಡಿದಿಡಬಲ್ಲದು ಎಂಬುದು ನೆಹರೂ ಅವರಿಗೆ ತಿಳಿದಿತ್ತು. ವೈವಿಧ್ಯತೆಯುಳ್ಳ ಅಸ್ಮಿತೆಗಳನ್ನು ಹೊಂದಿರುವ ಜನಕ್ಕೆ ಸಂವಿಧಾನಿಕ ಪ್ರಜಾಪ್ರಭುತ್ವವು ಉಪಯುಕ್ತ ಎಂಬುದನ್ನು ನೆಹರೂ ಅಂತಃಸ್ಫೂರ್ತಿಯಿಂದ ಅರ್ಥಮಾಡಿಕೊಂಡಿದ್ದರು. ಬಿ ಆರ್ ಅಂಬೇಡ್ಕರ್, ವಲ್ಲಭಾಯ್ ಪಟೇಲ್,ಮೌಲಾನಾ ಆಜಾದ್, ಸಿ ರಾಜಗೋಪಾಲಾಚಾರಿಯವರಂತಹ ಇತರ ಪ್ರತಿಭಾನ್ವಿತ ನಾಯಕರನ್ನೂ ಹೊಂದುವಲ್ಲಿ ಭಾರತವು ಅದೃಷ್ಟಶಾಲಿಯಾಗಿತ್ತು. ಇವರುಗಳು ಭಾರತೀಯರು ಒಟ್ಟಾಗಿ ಸಹಬಾಳ್ವೆ ನಡೆಸಲು, ನಿರ್ದಿಷ್ಟ ಅಸ್ಮಿತೆಯನ್ನು ಉಳಿಸಿಕೊಂಡೂ, ರಾಷ್ಟ್ರದ ಬಗೆಗಿನ ಸಮಾನ ಕಲ್ಪನೆಯನ್ನು ವಿಕಾಸಗೊಳಿಸಲು ಬೇಕಾದ ಭಾರತವನ್ನು ನಿರ್ಮಿಸಿದರು.

ಎರಡನೆಯದಾಗಿ ಜಾಗತಿಕ ರಾಜಕಾರಣದಲ್ಲಿ ನೆಹರೂ ಅವರ ಪ್ರಭಾವವು ವ್ಯಾಪಕವಾಗಿ ಗುರುತಿಸಲ್ಪಟ್ಟಿದೆ. ಅವರು ಜನಾಂಗವಾದ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧದ ಅಧಿಕೃತ ಟೀಕಾಕಾರರಾಗಿ ಮೂಡಿದ್ದರು, ಅವರು ಏಷ್ಯನ್ ಐಕಮತ್ಯದ, ಆಫ್ರೋ ಏಷ್ಯನ್ ಒಗ್ಗಟ್ಟಿನ, ವಿಶ್ವ ಶಾಂತಿಯ ಪ್ರತಿಪಾದಕರಾಗಿದ್ದರು. ಭವಿಷ್ಯದ ದೃಷ್ಟಿಯಿಂದ ಎರಡು ಶಕ್ತಿ ಬಣಗಳ ಜೊತೆ ಸರಾಗವಾಗಿ ವ್ಯವಹರಿಸುತ್ತಾ ಎರಡೂ ಬಣಗಳ ಜೊತೆಗಿನ ಸಂಪರ್ಕದಿಂದ ದೇಶಕ್ಕೆ ಅನುಕೂಲ ಪಡೆಯುವ ಅಲಿಪ್ತ ನೀತಿಯನ್ನು ರೂಪಿಸಿದರು. ಗುಹಾ ಅವರು ಹೇಳುವಂತೆ, ಇದರಿಂದ ಭಾರತವು ದೇಶಗಳ ನಡುವಿನ ಸಂಧಾನಕಾರನಾಗಿ, ಅಭಿವೃದ್ಧಿಶೀಲ ರಾಷ್ಟ್ರಗಳ ಮುಂದಾಳಾಗಿ ಮೂಡಿ ಬರಲು ಸಹಕಾರಿಯಾಯಿತು. ಬ್ರೌನ್ ಅವರು ಹೇಳುವಂತೆ ನೆಹರೂ ಅವರು ನಡೆಸಿದ ವಿದೇಶೀ ವ್ಯವಹಾರಗಳು ಭಾರತ ದೇಶಕ್ಕೆ ಒಂದು ವಿಶಿಷ್ಟ ಸ್ವತಂತ್ರ ಅಂತರರಾಷ್ಟ್ರೀಯ ಅಸ್ಮಿತೆಯನ್ನು ಸೃಷ್ಟಿಸಿತು.

ಮೂರನೆಯದಾಗಿ ದೇಶದೊಳಗಿನ ಸಾಮಾಜಿಕ ಬದಲಾವಣೆಗಳ ವಿಚಾರದಲ್ಲಿ ನೆಹರೂ ಗಮನವುಳ್ಳವರಾಗಿದ್ದರು. ದೇಶದ ಯೋಜನೆಯನ್ನು ಅಭಿವೃದ್ಧಿಯ ಪ್ರೇರಕ ಮತ್ತು ಅಸಮಾನತೆಯನ್ನು ಕಡಿಮೆ ಮಾಡುವ ಸಾಧನ ಎಂದು ಭಾವಿಸಿದ್ದರು. ಮಿಶ್ರ ಆರ್ಥಿಕನೀತಿಯೊಂದಿಗಿನ ಈ ಬಗೆಯ ಸಮಾಜವಾದಿ ಮಾದರಿಯ ಆಡಳಿತಕ್ಕೆ ಇತ್ತೀಚಿನ ದಿನಗಳಲ್ಲಿ ಕಳಂಕ ಹಚ್ಚುವ ಪ್ರವೃತ್ತಿ ಬೆಳೆಯುತ್ತಿದೆ. ಆದರೆ ಅಂದು ಈ ಬಗೆಯ ಆರ್ಥಿಕ,ಸಾಮಾಜಿಕ ನೀತಿಗೆ ಯಾವುದೇ ಬೆಂಬಲದ

(೯ನೇ ಪುಟಕ್ಕೆ

# ಗಾಂಧಿಯವರ ಜ್ಞಾನದ ಗ್ರಹಿಕೆಯ ನೆಲೆಗಳು

ಗಾಂಧಿ–೧೫೦

**–ಗೋಪಾಲ್ ಗುರು**



**ಗಾಂ**ಧಿಯ ಬಗ್ಗೆ ಬರೆದಷ್ಟು ಜಗತ್ತಿನಲ್ಲಿ ಬಹುಶಃ ಮತ್ಯಾರ ಬಗ್ಗೆಯೂ ಬರೆಯಲ್ಪಟ್ಟಿಲ್ಲ.. ಅಷ್ಟೇ ಅಲ್ಲ ಕೆಲವರು ಗಾಂಧಿಯನ್ನು ದ್ವೇಷಿಸುವಷ್ಟು ಇನ್ಯಾರನ್ನೂ ದ್ವೇಷಿಸುವುದಿಲ್ಲ. ಬ್ರಿಟಿಷರ ವಿರುದ್ಧದ ರಾಷ್ಟ್ರೀಯ ಹೋರಾಟ ಗಟ್ಟಿಗೊಳ್ಳುತ್ತಿದ್ದ ಸಂದರ್ಭದಲ್ಲಿ ಗಾಂಧಿ ತೆಗೆದುಕೊಂಡ ನಿಲುವುಗಳು ಮತ್ತು ಆಗಿನ ಅವರ ಚಿಂತನೆಗಳನ್ನು ಇವತ್ತಿಗೂ ಕೆಲವರು ಕಟುವಾಗಿ ಟೀಕಿಸುತ್ತಾರೆ. ಗಾಂಧಿಯನ್ನು ದ್ವೇಷಿಸುವವರಿಗೆ, ಆವರನ್ನು ಕೊಂದವರಿಗೆಒಂದು ಸಮರ್ಥನೆಯೂ ಇರುವುದಿಲ್ಲ. ದ್ವೇಷ ಮತ್ತು ಅಸೂಯೆ ಎರಡೂ ವಿಚ್ಛಿದ್ರಕಾರಿ ಅಂಶಗಳು. ಮತ್ತು ಅವೆರಡಕ್ಕೂ ಒಂದು ಸೂಕ್ಷ್ಮವಾದ ತಾರ್ಕಿಕ ಸಮರ್ಥನೆ ಇರುವುದಿಲ್ಲ. ಚಾರಿತ್ರಿಕವಾಗಿ ಸೇರಿಕೊಂಡು ಬಂದಿರುವ ಪೂರ್ವಗ್ರಹಗಳೇ ಅವಕ್ಕೆ ಬೇಕಾದಷ್ಟು. ಬಹುಶಃ ಅವರು ಗಾಂಧಿಯೊಂದಿಗಾಗಲಿ, ಅಥವಾ ಗಾಂಧಿಯನ್ನು ಓದಿಕೊಂಡ ವಿದ್ವಾಂಸರು, ವ್ಯಾಖ್ಯಾನಕಾರರು ಅಥವಾ ವಿಶ್ಲೇಷಿಸಿದವರ ಜೊತೆಗಾಗಲೀ ಎಂದೂ ಗಂಭೀರವಾದ ಚರ್ಚೆಯನ್ನೂ ಮಾಡಿಲ. ಅವರಿಗೆ ಬೇಕಾಗಿರುವುದು ಗಾಂಧಿಯನ್ನು ಸಮರ್ಥಿಸಿಕೊಂಡು ಕೆಲವರು ನೀಡುವ ತೆಳುವಾದ ತಕ್ಷಣದ ಪ್ರತಿಕ್ರಿಯೆ. ಅದನ್ನು ಹೊಡೆದುಹಾಕುವುದರಲ್ಲೇ ಅವರಿಗೆ ನೆಮ್ಮದಿ.

ಗಾಂಧಿಯವರ ಚಿಂತನೆಗಳನ್ನು ಕುರಿತಂತೆ ಒಂದು ಅಸಲಿಯಾದ ಹಾಗೂ ನಿಖರವಾದ ವಿವರಣೆಯನ್ನು ನೀಡುವುದಕ್ಕೆ ವಿದ್ವಾಂಸರಿಗೆ, ಭಾಷ್ಯಕಾರರಿಗೆ, ವಿಶ್ಲೇಷಕರಿಗೆ ಗಾಂಧಿ ಬಹುಶಃ ಅವಕಾಶವನ್ನೇ ಕೊಟ್ಟಂತಿಲ್ಲ. ಅಂದರೆ ಗಾಂಧಿಯವರ ಚಿಂತನೆಗಳನ್ನು ಕುರಿತಂತೆ ಒಂದು ಸಂಪೂರ್ಣವಾದ ಹಾಗೂ ಅಂತಿಮ ಎನ್ನಬಹುದಾದ ವಿವರಣೆಯನ್ನು ಕೊಡುವದುಗೆ ಕಷ್ಟ. ಈ ಮಾತು ಗಾಂಧಿಯವರ ತಿಳುವಳಿಕೆಯ ವಿಷಯದಲ್ಲಷ್ಟೇ ಅಲ್ಲ, ಅವರು ಅನುಸರಿಸಿದ ವಿಧಾನದ ಮಟ್ಟಿಗೂ ಸತ್ಯ. ಗಾಂಧಿಯವರ ಬರಹಗಳ ಒಂದು ಲಕ್ಷಣವೆಂದರೆ, ಅವುಗಳ ತೆರೆದಿರುವಿಕೆ (ಮುಕ್ತತೆ). ಅಂದರೆ ಯಾವುದೇ ವಿಚಾರದಲ್ಲೂ ಅವರು ಇದು ಇಲ್ಲಿಗೆ ಮುಗಿಯಿತು ಎಂದು ಒಂದು ತೆರೆ ಎಳೆದು ಬಿಡುವುದಿಲ್ಲ. ಅದು ಮುಕ್ತವಾಗಿಯೇ ಇರುತ್ತದೆ. ಇದರಿಂದಾಗಿಯೇ ವಿದ್ವಾಂಸರಿಗೆ ಗಾಂಧಿಯನ್ನು ವಿಭಿನ್ನ 'ಅವತಾರ'ಗಳಲ್ಲಿ ನಿರೂಪಿಸುಮವ ಸಾಹಸ ಮಾಡುವುದಕ್ಕೆ ಸಾಧ್ಯವಾಗಿದೆ. ಹಾಗಾಗಿಯೇ ಗಾಂಧಿ ವಸಾಹತುಪೂರ್ವ ರಾಷ್ಟ್ರೀಯವಾದಿಯಾಗಿ, ಅಂತರರಾಷ್ಟ್ರೀಯವಾದಿಯಾಗಿ, ಆಧುನಿಕತೆಗೆ ಪರ್ಯಾಯವಾಗಿ, ಆಧುನಿಕೋತ್ತರವಾದಿಯಾಗಿ, ಭಾವನಾವಾದಿಯಾಗಿ, ವ್ಯಾವಹಾರಿಕನಾಗಿ, ಮಹಿಳಾವಾದಿಯಾಗಿ, ತಳಸಮುದಾಯ ಪರ ಚಿಂತಕನಾಗಿ ಮತ್ತು ಕೊನೆಗೆ ಉದಾರವಾದಿಯಾಗಿ; ಹಾಗೆಯೇ ಕೂಡೊಡೆತನದ ಪ್ರತಿಪಾದಕನಾಗಿ ಹೀಗೆ ವಿಭಿನ್ನ ರೂಪಗಳಲ್ಲಿ ನಮಗೆ ಕಾಣಿಸಿಕೊಳ್ಳುತ್ತಾರೆ. ಗಾಂಧಿಯ ಚಿಂತನೆಯಲ್ಲಿರುವ ಈ ಮುಕ್ತತೆ ಅಥವಾ ಚಿಂತನೆಯ ಮುಕ್ತತೆಯೇ ಗಾಂಧಿಯನ್ನು ಟೀಕಿಸುವವರನ್ನು ನೈತಿಕ ಶಿಷ್ಟತೆ ಜಾಗೂ ಸೌಜನ್ಯವೇ ಇಲ್ಲದ ಗಲೀಜು ಜನರನ್ನಾಗಿ ಅಥವಾ ರಾಜಕೀಯವಾಗಿ ಆಷಾಡಭೂತಿಗಳನ್ನಾಗಿ, ಬೌದ್ಧಿಕವಾಗಿ ನಿಸ್ಸಹಾಯಕರಾಗಿ, ಹತಾಶರನ್ನಾಗಿ ಅಥವಾ ಅಧೀರರನ್ನಾಗಿ ಮಾಡಿದೆ.

ಗಾಂಧಿಯನ್ನು ಎದುರಿಸಲು ಅವರಲ್ಲಿ ಯಾವುದೇ ವಾದವೂ ಇಲ್ಲ ಅಥವಾ ಅವರಿಗೆ ಆಸಕ್ತಿಯೂ ಇಲ್ಲ. ಹಾಗಾಗಿಯೇ ಅವರು ಜಿಗುಪ್ಸೆ ಹುಟ್ಟಿಸುತ್ತಾರೆ. ಗಾಂಧಿಯನ್ನು ಬೌದ್ಧಿಕವಾಗಿ ಹೇಗೆ ಎದುರಿಸಬೇಕೆಂದು ತಿಳಿಯದೇ ಅವರಲ್ಲಿ ಕೆಲವರು ಹತಾಶರಾಗುತ್ತಾರೆ. ಗಾಂಧಿವಾದದ ಇಡೀ ಪರಂಪರೆಯನ್ನೇ ನಿರ್ನಾಮ ಮಾಡಬೇಕು ಎಂದುಕೊಂಡವರಿಗೆ ತಮ್ಮ ಉದ್ದೇಶವನ್ನು ಹೇಗೆ ಸಾಧಿಸಿಕೊಳ್ಳಬೇಕು ಎನ್ನುವುದು ತಿಳಿದಿಲ್ಲ. ಹಾಗಾಗಿ ಕನಿಷ್ಠ ಮೇಲ್ನೋಟಕ್ಕಾದರೂ ಅವರು ಗಾಂಧಿಯೊಂದಿಗೆ ಗುರುತಿಸಿಕೊಳ್ಳಬೇಕಾಗಿದೆ. ಅವರ ಒಳಗಿನ ನಿಜವಾದ ಉದ್ದೇಶ ಹಾಗೂ ಅವರು ಹೊರಗೆ ತೋರಿಸಿಕೊಳ್ಳುತ್ತಿರುವ ರೀತಿಗೂ ನಡುವೆ ಘರ್ಷಣೆ ನಡೆಯುತ್ತಿರುತ್ತದೆ. ತುಟಿಯಚಿನ ನಾಮಸ್ಮರಣೆಯನ್ನೂ ಮಾಡುತ್ತಾರೆ.

ಗಾಂಧಿಯ ಬರಹಗಳು ಸಂವಾದದ ರೂಪದಲ್ಲಿವೆ. ಈ ವಿಧಾನ ಸಾಂಪ್ರದಾಯಿಕ ವಿಚಾರಗಳನ್ನು ಚರ್ಚಿಸುವುದಕ್ಕೆ ಒತ್ತಾಯಿಸುತ್ತದೆ. ಈ ವಿಧಾನಕ್ಕೆ ಬೇಕಾದ ಬೌದ್ಧಿಕ ಆಕರಗಳು ಭಾರತೀಯ ಜ್ಞಾನಪರಂಪರೆಯಲ್ಲಿ ಇವೆ. ಗಾಂಧಿ ಅವನ್ನು ಸೃಜನಶೀಲವಾಗಿ ಬಳಸಿಕೊಂಡಿದ್ದಾರೆ. ಅವರ ಚಿಂತನೆಗಳು ಬಹುಪಾಲು ಒಳಗಿನಿಂದಲೇ ಕೆಲಸಮಾಡುತ್ತಿರುತ್ತವೆ. ಗಾಂಧಿಯ ವಿಚಾರಗಳು ಎಲ್ಲಾ ವಿದ್ವಾಂಸರಲ್ಲೂ ಒಂದೇ ರೀತಿಯ ಚಿಂತನೆಗಳನ್ನು ಮೂಡಿಸುವುದಿಲ್ಲ. ಪಾಶ್ಚಾತ್ಯ ಗ್ರಹಿಕಾಪದ್ಧತಿಗಳಿಗೆ ಭಾರತೀಯರು ದಾಸರಾಗಬಾರದೆಂದು ಗಾಂಧಿ ವಾದಿಸುತ್ತಾರೆ. ಇದನ್ನು ಹಲವು ವಿದ್ವಾಂಸರುಗಳು ಗುರುತಿಸಿದ್ದಾರೆ.

ವಸಾಹತುಶಾಹಿ ಶಕ್ತಿಯ ವಿರುದ್ಧ ಅಥವಾ ಸ್ಥಳೀಯವಾಗಿ ಸಮಾಜವನ್ನು ನಿಯಂತ್ರಿಸುತ್ತಿರುವ ಬ್ರಾಹ್ಮಣಶಾಹಿಯ ವಿರುದ್ಧ ಜನರನ್ನು ಸಂಘಟಿಸುವುದಕ್ಕೆ ಕೆಲವು ವಿಧಾನಗಳು ಸೂಕ್ತವಾಗುವುದಿಲ್ಲ ಎನ್ನುವ ಕಾರಣಕ್ಕೆ ಗಾಂಧಿ ಅವುಗಳನ್ನು ಕೈಬಿಟ್ಟಿದ್ದಾರೆ. ಇವುಗಳನ್ನು ಗಮನಿಸಿದರೆ, ಜ್ಞಾನವನ್ನು ಗ್ರಹಿಸುವುದರಲ್ಲಿ ಗಾಂಧಿಗಿದ್ದ ಅರಿವು ಅರ್ಥವಾಗುತ್ತದೆ. ಇದರಿಂದಾಗಿಯೇ ಅವರು ಬಳಸಿದ ಸಹಿಷ್ಣುತೆ, ಅಹಿಂಸೆ, ಅಸಹಕಾರದ ಪರಿಭಾಷೆ ವಸಾಹತುಶಾಹಿ ವಿರುದ್ಧದ ಹೋರಾಟದಲ್ಲಿ ತುಂಬಾ ಪರಿಣಾಮಕಾರಿಯಾಗಿದ್ದವು. ಹಾಗೆಯೇ ಸೇವೆ, ಸಹಾನುಭೂತಿ ಮತ್ತು ಕೂಡೊಡೆತನ ಮುಂತಾದವುಗಳ ಅವರ ವಿವರಣೆ ಮತ್ತು ವ್ಯಾಖ್ಯಾನ ಅಂತಹ ಕ್ಲಿಷ್ಟವಾಗಿಲ್ಲ. ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುತ್ತವೆ. ಜನಸಾಮಾನ್ಯರು ಇವುಗಳಿಗಾಗಿ ತಮ್ಮ ಎದುರಾಳಿಗಳ ವಿಷಯದಲ್ಲಿ ತೀರಾ ಕಠಿಣವಾದ ನಿಲುವನ್ನು ತೆಗೆದುಕೊಳ್ಳಬೇಕಾಗುವ ಅವಶ್ಯಕತೆಯೂ ಇರಲಿಲ್ಲ. ಹಾಗಾಗಿ ಇವುಗಳನ್ನು ಒಪ್ಪಿಕೊಳ್ಳುವುದಕ್ಕೆ ಯಾವ ಕಷ್ಟವೂ ಅಗಲಿಲ್ಲ. ಇಂತಹ ಭಾಷೆಯ ಒಳಗೇ ಇರುವ ಭಾವನಾತ್ಮಕ ಅಂಶವೂ ವೈಚಾರಿಕ ಪ್ರಖರತೆಯನ್ನು ಕಡಿಮೆ ಮಾಡುತ್ತದೆ. ಈ ಭಾವನಾತ್ಮಕ ಅಂಶ ಅವರ ಗ್ರಹಿಕಾ ವಿಧಾನಗಳ ಆಧಾರವಾಗಿ ಕೆಲಸಮಾಡುತ್ತದೆ. 'ಹರಿಜನ' ಎನ್ನುವುದು ಕೂಡ ಬೌದ್ಧಿಕ ಚಿಂತನೆಯನ್ನು ಆಧರಿಸದ ಇಂತಹುದೇ ಒಂದು ಸುಲಭಗ್ರಾಹ್ಯ ಪದವಾಗಿತ್ತು. ಈ ಪದದ ಉದ್ದೇಶ ಕೆಳಜಾತಿಗಳಿಗೆ ಸಂಬಂಧಿಸಿದಂತೆ ಸವರ್ಣೀಯರ ಸಾಮಾಜಿಕ ನಿಲುವನ್ನು ತಟಸ್ಥಗೊಳಿಸಿ, ಅಂತಿಮವಾಗಿ ಅವರಿಬ್ಬರ ಸಾಮಾಜಿಕ ಅಂತಸ್ತನ್ನು ಒಂದೇ ಮಾಡುವುದಾಗಿತ್ತು. ಗಾಂಧೀಜಿಯವರ ಅನುಸರಿಸಿದ ಈ ವೈದಾನಿಕ ನಡೆಯಿಂದಾಗಿ, ವಸಾಹಾತು ವಿರೋಧಿ ಹೋರಾಟದಲ್ಲಿ ಜನರನ್ನು ಸಂಘಟಿಸುವಲ್ಲಿ ಅವರನ್ನು ಬಹು ಯಶಸ್ವಿ ನಾಯಕರನ್ನಾಗಿ ಮಾಡಿತು. ಗಾಂಧೀಜಿಯವರ ಈ ಪರಿಭಾಷೆ ಎದುರಾಳಿಗಳನ್ನು ರೊಚ್ಚಿಗೆಬ್ಬಿಸುತ್ತಿರಲಿಲ್ಲ. ಹಾಗಾಗಿ ಸಾಮಾನ್ಯ ಜನರಲ್ಲಿ ಇದು ಸುರಕ್ಷತೆ ಮತ್ತು ನೆಮ್ಮದಿಯ ಭಾವವನ್ನು ಮೂಡಿಸುತ್ತಿತ್ತು. ವಿವರಣೆ ಮತ್ತು ವ್ಯಾಖ್ಯಾನವನ್ನು ನೀಡುವುದಕ್ಕೆ ಗಾಂಧಿ ಬೌದ್ಧಿಕವಲ್ಲದ ಚಿಂತನಾಕ್ರಮವನ್ನು ಬಳಸಿದ್ದರಿಂದ ಅವರ ಚಿಂತನೆಗಳಿಗೆ ಒಂದು ಮುಕ್ತತೆ ಬಂದಿತು. ಇದರಿಂದಾಗಿ ಭಾರತೀಯ ಜನಸಮುದಾಯದ ಪರಿಣಾಮಕಾರಿಯಾದ ಬೆಂಬಲವನ್ನು ಪಡೆದುಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಯಿತು.

ಗಾಂಧೀಜಿಯ ಚಿಂತನೆಗಳು ಅದೆಷ್ಟು ಮುಕ್ತವಾಗಿವೆಯೆಂದರೆ ವಿಷಯಕ್ಕೆ ಸಂಬಂಧಿಸಿದಂತೇ ಆಗಲಿ ಅಥವಾ ಅದರ ಅಭಿವ್ಯಕ್ತಿಗೆ ಸಂಬಂಧಿಸಿದಂತೇ ಆಗಲಿ ಅವು ಯಾವುದೇ ರೀತಿಯ ನಿರ್ಬಂಧಗಳನ್ನು ಹೇರುವುದಿಲ್ಲ. ಅವರ ಚಿಂತನೆಗಳಿಗೆ ವಿಭಿನ್ನ ಬಗೆಯ ವಿಶ್ಲೇಷಣೆಗಳು ಸಾಧ್ಯ.  ಮತ್ತು ಅವುಗಳನ್ನು ನೀವು ಆರೋಗ್ಯಕರ ವಿಮರ್ಶೆಗೂ ಸುಲಭವಾಗಿ ಒಡ್ಡಬಹುದಿತ್ತು. ಸಾಮಾನ್ಯವಾಗಿ ಆಲೋಚನೆಗಳನ್ನು ಮತ್ತು ವಿಚಾರಗಳ ಅಭಿವ್ಯಕ್ತಿಯನ್ನು ಹಲವು ನಿಬಂಧನೆಗಳು ಮತ್ತು ನಿಯಮಾವಳಿಗಳು ನಿಯಂತ್ರಿಸುತ್ತವೆ. ಆದರೆ ಗಾಂಧಿಯ ಚಿಂತನೆಗಳು ಇಂತಹ ಎಲ್ಲಾ ನಿಯಂತ್ರಣಗಳನ್ನೂ ನಿರಾಕರಿಸುತ್ತವೆ. ಅವರ ಚಿಂತನೆಗಳು ಹುಡುಕಾಟ ಮತ್ತು ಅನ್ವೇಷಣೆಗೆ ಮುಕ್ತವಾಗಿ ತೆರೆದುಕೊಂಡಿವೆ. ಅವು ಹೀಗೆ ಮುಕ್ತವಾಗಿವೆ ಎಂದ ಕೂಡಲೇ, ಅವೆಲ್ಲಾ ಮನಸೋ ಇಚ್ಛೆ ರೂಪುಗೊಂಡ ವಿಚಾರಗಳು ಅಂತ ಭಾವಿಸಬಾರದು. ಅವರ ಯವರ ಚಿಂತನೆಗಳಿಗೆ ಒಂದು ನೈತಿಕ ಸಮುದಾಯ ಮತ್ತು ಮಾನವೀಯತೆಯನ್ನು ಸೃಷ್ಟಿಸುವ ಉದ್ದೇಶ, ಕಾಳಜಿ ಮತ್ತು ಜವಾಬ್ದಾರಿ ಇದೆ.

ಭಾರತ ಇಂದು ಸಾಮಾಜಿಕವಾಗಿ ಸ್ವತಂತ್ರಗೊಳ್ಳಬೇಕಾಗಿದೆ. ಸ್ವತಂತ್ರ ಅಂದರೆ ಕೇವಲ ಭಾರತವನ್ನು ಬಯಲುಶೌಚಮುಕ್ತ ದೇಶವನ್ನಾಗಿ ಮಾಡುವುದಲ್ಲ. ಅದಕ್ಕಿಂತ ಮುಖ್ಯವಾಗಿ ಭಾರತೀಯ ಮನಸ್ಸುಗಳೊಳಗೆ ಆಳವಾಗಿ ಬೇರೂರಿರುವ ಅಸ್ಪೃಶ್ಯತೆಯಿಂದ ಭಾರತವನ್ನು ಮುಕ್ತಗೊಳಿಸಬೇಕಾಗಿದೆ. ಅದಕ್ಕಾಗಿ ಜನಸಮುದಾಯವನ್ನು ಸಂಘಟಿಸಲು ಗಾಂಧಿಯ ಚಿಂತನೆಗಳು ಇಂದು ನಮಗೆ ಪ್ರಸ್ತುತ.



**(ಲೇಖಕರು ದೆಹಲಿಯ ಜೆಎನ್‌ಯುನಲ್ಲಿ ರಾಜಕೀಯಶಾಸ್ತ್ರದ ಪ್ರಾಧ್ಯಾಪಕರು ಮತ್ತು ರಾಜಕೀಯ ವಿಶ್ಲೇಷಕರು)**

**(ಕೃಪೆ: *ಎಕನಾಮಿಕ್ ಅಂಡ್ ಪೊಲಟಿಕಲ್ ವೀಕ್ಲಿ. ೫.೧೦. ೨೦೧೯*
ಕನ್ನಡಕ್ಕೆ: ಟಿ.ಎಸ್. ವೇಣುಗೋಪಾಲ್, ಶೈಲಜ)**

೭ನೇ ಪುಟದಿಂದ)

ಕೊರತೆಯಿರಲಿಲ್ಲ – ಉದಾಹರಣೆಗೆ ಭಾರತದ ಕೈಗಾರಿಕೋದ್ಯಮಿಗಳು ಸಹ ಪೈಪೋಟಿಯಿಂದ ರಕ್ಷಣೆ ಬಯಸುತ್ತಿದ್ದರು. ಈ ವಿಚಾರದಲ್ಲಿ ನೆಹರೂ ಅವರು ಸೋವಿಯತ್‌ನ ಕೈಗಾರಿಕೀಕರಣದ ವೇಗದಿಂದ ಪ್ರಭಾವಿತರಾಗಿದ್ದರು. ಅದನ್ನವರು ಹಿಂಸೆಯಿಲ್ಲದೆ ಭಾರತದಲ್ಲೂ ಪುನರಾವರ್ತಿಸಲು ಬಯಸಿದರು. ಅಗ ಭಾರತವು ಎಂತಹ ಸ್ಥಿತಿಯಲ್ಲಿತ್ತು ಎಂಬುದನ್ನು ಗುರುತಿಸುವುದು ಮುಖ್ಯ. ಉದಾಹರಣೆಗೆ ಆಗ ಭಾರತದಲ್ಲಿ ಅಕ್ಷರಸ್ಥರ ಪ್ರಮಾಣ ಶೇ.೧೮. ಬಡತನದ ಮಟ್ಟ ಅತಿ ಹೆಚ್ಚಾಗಿದ್ದು, ಹಲವಾರು ಕ್ಷೇತ್ರಗಳಲ್ಲಿ ಸರ್ಕಾರದ ಮಧ್ಯಪ್ರವೇಶ ಅಗತ್ಯವಾಗಿತ್ತು. ಮತ್ತು ಅದು ಹಲವಾರು ಕ್ಷೇತ್ರಗಳಲ್ಲಿ ಮಹತ್ವದ ಫಲಿತಾಂಶವನ್ನೂ ನೀಡಿರುವುದು ಸುಳ್ಳಲ್ಲ.

ನೆಹರೂ ಹಲವು ವಿಚಾರಗಳಲ್ಲಿ ಸೋಲು ಕಂಡಿದ್ದೂ ಉಂಟು, ಅವರು ಚೀನಾದ ಉದ್ದೇಶಗಳನ್ನು ತಪ್ಪಾಗಿ ಅರ್ಥೈಸಿಕೊಂಡರು, ೧೯೬೨ ರಲ್ಲಿ ಮಾವೋ ಭಾರತದ ಮೇಲೆ ದಾಳಿ ಮಾಡಬಹುದೆಂದು ಅವರು ನಿರೀಕ್ಷಿಸಲಿಲ್ಲ. ಇನ್ನೂ ಕೆಟ್ಟದ್ದೆಂದರೆ ಅವರು ತಮ್ಮ ಊಹೆಗಳನ್ನು ಆಧರಿಸಿ ಭಾರತದ ರಕ್ಷಣಾ ಸಿದ್ಧತೆಯ ಕೊರತೆಗೆ ಕಾರಣರಾಗಿದ್ದರು. ನೆಹರೂ ಅವರು ಪ್ರತಿನಿಧಿಗಳನ್ನು ನಿಯೋಜಿಸುವ ವಿಚಾರದಲ್ಲಿ ಯಶಸ್ವಿಯಾಗದ ಕಾರಣಕ್ಕೆ ರಾಜಕೀಯ ಪ್ರತಿಭೆಗಳ ಬೆಳವಣಿಗೆಯು ಕುಂದಿತು. ಇದರಿಂದ ಭಾರತಕ್ಕೆ ಹಲವು ರೀತಿಯ ನಷ್ಟ ಉಂಟಾಯಿತು. ದೇಶದ ಅಂತರಿಕ ಕ್ಷೇತ್ರದಲ್ಲಿ ಭೂ ಸುಧಾರಣೆಯಂತಹ ವಿಚಾರದಲ್ಲಿ ಅವರ ಹಲವು ಆಕಾಂಕ್ಷೆಗಳು, ಸ್ಥಳೀಯ ಭೂಮಾಲೀಕ ವರ್ಗದೊಂದಿಗೆ ಸಂಪರ್ಕವಿದ್ದ ರಾಜ್ಯ ಮಟ್ಟದ ನಾಯಕರುಗಳಿಂದ ಅಡ್ಡಿಪಡಿಸಲ್ಪಟ್ಟವು. ಗುಹಾ ಅವರು ಬರೆಯುವಂತೆ ಬಲಪಂಥವು ಅವರನ್ನು ಅತಿ ಕೇಂದ್ರೀಕೃತ ಆರ್ಥಿಕ ನೀತಿಯ ಪ್ರತಿಪಾದಕ ಎಂದು ಭಾವಿಸುತ್ತದೆ. ಎಡಪಂಥೀಯರಲ್ಲಿ ಕೆಲವರು ಅವರು ಸಾಕಷ್ಟು ಪ್ರಮಾಣದಲ್ಲಿ ಮಧ್ಯಪ್ರವೇಶವಾದಿ(interventionist)ಯಾಗಿರಲಿಲ್ಲ ಎನ್ನುತ್ತಾರೆ. ಅವರು ನಿರ್ಮಿಸಿದ ಬೃಹತ್ ಅಣೆಕಟ್ಟೆಗಳು ಸ್ಥಳೀಯ ಸಮುದಾಯಗಳನ್ನು ಸ್ಥಳಾಂತರಿಸಿದವು. ಶೇಖ್ ಅಬ್ದುಲ್ಲಾ ಅವರನ್ನು ದೀರ್ಘ ಕಾಲ ಬಂಧನದಲ್ಲಿರಿಸಿದ್ದರಿಂದ ಕಾಶ್ಮೀರದ ಕೆಲವು ಭಾಗಗಳು ಭಾರತದಿಂದ ದೂರಾಗತೊಡಗಿದ್ದವು. ಪ್ರತಿಯಾಗಿ ನೆಹರೂ ಹಲವು ಸಾರಿ ತಮ್ಮ ದೇಶವಾಸಿಗಳೊಂದಿಗೆ ಭಿನ್ನಾಭಿಪ್ರಾಯವುಳ್ಳವರಾಗಿರುತ್ತಿದ್ದರು: ಆಡಳಿತಾತ್ಮಕ ಅಸಾಮರ್ಥ್ಯ, ಮತೀಯ ಪ್ರಚೋದಕ ಮಾತುಗಳು ಕಾಂಗ್ರೆಸ್‌ನ ಒಳಗಿದ್ದ ಭ್ರಷ್ಟಾಚಾರ, ರಾಷ್ಟ್ರ ನಿರ್ಮಾಣದ ಸ್ಫೂರ್ತಿಗೆ ಹೊಂದಿಕೆಯಾಗದ ಸಂಕುಚಿತ ಪ್ರಾಂತೀಯ, ಜಾತೀಯ ಮನೋಭಾವ ಮುಂತಾದ ವಿಚಾರದಲ್ಲಿ ಅವರು ಹತಾಶರಾಗಿದ್ದರು.

ಏನೇ ಆದರೂ ಅವರ ಸಾಧನೆಯ ಪ್ರಮಾಣವಂತೂ ಉಳಿದೇ ಉಳಿಯುವುದು. ನೀರದ್ ಚೌಧರಿಯವರು ಒಮ್ಮೆ ನೆಹರೂ ಅವರ ನಾಯಕತ್ವವನ್ನು ಕುರಿತು ಆಡಿದ 'ಭಾರತತ ಐಕ್ಯತೆಯ ಹಿಂದಿನ ಬಹುಮುಖ್ಯ ನೈತಿಕ ಬಲ' ಎಂಬ ಮಾತುಗಳ ಮಹತ್ವವವನ್ನು ಗುಹಾ ಅವರು ಉಲ್ಲೇಖಿಸುತ್ತಾರೆ. ಸರಿಯಾಗಿ ಹೇಳುವುದಾದರೆ ನೆಹರೂ ಅವರಿಗೆ ಒಬ್ಬನೇ ವಾರಸುದಾರ ಇರಲು ಸಾಧ್ಯವಿಲ್ಲ, ಅವರ ಸಂಯುಕ್ತ ನಾಯಕತ್ವದ ಬೇರೆ ಬೇರೆ ಅಂಶಗಳಿಗೆ(element) ಒಬ್ಬೊಬ್ಬ ವಾರಸುದಾರರಿರಬಹುದು. ಅದು ಅವರ ಪ್ರಭಾವದ ಮಟ್ಟವನ್ನು ಸೂಚಿಸುತ್ತದೆ.

ಗಾಂಧೀಜಿಯವರನ್ನು ಒಬ್ಬ ಋಷಿ ಎಂದು ಹೇಳಲಾಗುತ್ತದೆ, ಆದರೆ ನೆಹರೂ ಅವರೂ ಕೂಡ ಸತತವಾಗಿ ಭಾರತದ ರಾಜಕಾರಣ ಮತ್ತು ಸಮಾಜದ ನೀತಿಗಳು ಮತ್ತು ಗುರಿಗಳ ಕಡೆಗೆ ಗಮನ ಸೆಳೆಯುತ್ತ ಭಾರತಕ್ಕೆ ಕಡಿಮೆ ಮಟ್ಟದ ಮಾರ್ಗದರ್ಶಿಯೇನೂ ಆಗಿರಲಿಲ್ಲ.. ಅವರು ಸ್ಫೂರ್ತಿ ತುಂಬುತ್ತಿದ್ದರು, ಮನವೊಲಿಸುತ್ತಿದ್ದರು, ಛೇಡಿಸುತ್ತಿದ್ದರು. ಅವರು ಸೋಲು ಕೂಡ ಕಂಡರು, ಅವರ ವೃತ್ತಿಜೀವನದಲ್ಲಿ ಹಲವು ಸಲ ನಿತ್ರಾಣರಾಗುವ ಮಟ್ಟಿಗೆ ಕೆಲಸ ಮಾಡಿದರು. ಆಸ್ಟ್ರೇಲಿಯದ ರಾಜತಾಂತ್ರಿಕ ಕ್ರಾಕರ್ ಅವರು "ನೆಹರೂ ತಮಗೆ ನೆರವಾಗುವುದನ್ನಷ್ಟೇ ಬಯಸುತ್ತಾರೆ, ಸ್ವಂತಕ್ಕಾಗಿ ಏನನ್ನೂ ಬಯಸುವುದಿಲ್ಲ ಎಂಬುದನ್ನು ಬಹಳಷ್ಟು ಜನ ಅರ್ಥಮಾಡಿಕೊಂಡಿದ್ದರೆಂಬ ಅವರ ಮಾತು ಸರಿಯಾಗಿಯೇ ಇತ್ತೆಂದು ಗುಹಾ ಆ ಮಾತನ್ನು ಉಲ್ಲೇಖಿಸುತ್ತಾರೆ.

ಅವರದ್ದು ಭಾರತಕ್ಕಾಗಿಯೇ ಜೀವಿಸಿದ ಪೂರ್ಣ ಬದುಕು, ನೆಹರೂ ಅವರು ರೂಪಿಸದ ಅಥವಾ ಪ್ರಭಾವಿಸದ ನಮ್ಮ ಗಣರಾಜ್ಯದ ಯಾವುದೇ ಸಂಸ್ಥೆ ಅಥವಾ ಸಂಗತಿ ಇರಲು ಸಾಧ್ಯವಿಲ್ಲ. ಅವರ ಕೊಡುಗೆಯಲ್ಲಿ ಸಂಭ್ರಮಿಸುವುದಕ್ಕೆ ಅಥವಾ ಪ್ರಶ್ನಿಸುವುದಕ್ಕೆ ಬೇಕಾದಷ್ಟಿದೆ. ಅವರ ಪಾತ್ರವನ್ನು ಹೀಗಳೆಯುವುದರಿಂದ – ಅಥವಾ ಮರೆಯುವುದರಿಂದ – ಇತಿಹಾಸದಲ್ಲಿ ನೆಹರೂ ಅವರ ಸ್ಥಾನವನ್ನು ಬದಲಾಯಿಸಲು ಸಾಧ್ಯವಿಲ್ಲ. ಅದು ಭಾರತದ ಅವನತಿಯನ್ನು ತೋರಿಸಬಹುದಷ್ಟೇ.



**('ಹಿಂದೂ ಸ್ತಾನ್ ಟೈಮ್ಸ್'ನ ಬಾತ್ಮೀದಾರರಾಗಿದ್ದ ಸುಶೀಲ್ ಅರೂಣ್ ಈಗ ವಿವಿಧ ಪತ್ರಿಕೆಗಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆ ಲೇಖನಗಳನ್ನು ಬರೆಯುತ್ತಾರೆ)**

*(ಕೃಪೆ : ಜನತಾ, ೨೪, ನವೆಂಬರ್*

ಕನ್ನಡಕ್ಕೆ : ಎಂ. ರಾಜು)

## ನಿಮ್ಮ ಪತ್ರ

ಪ್ರಿಯ ಸಂಪಾದಕರೇ,

ಕೋಣಂದೂರು ಲಿಂಗಪ್ಪ ಅವರನ್ನು ಕುರಿತ ಡಿಸೆಂಬರ್ ಸಂಚಿಕೆಯಲ್ಲಿನ ನಿಮ್ಮ ಟಿಪ್ಪಣಿ ಆತ್ಮೀಯವಾಗಿದೆ. 'ಪುರಾತನ ಸಮಾಜವಾದದ ಪಳಯುಳಿಕೆ' ಮತ್ತು 'ರಾಜಕಾರಣದಲ್ಲಿ ಕಳೆದುಹೋದ ಕವಿ' – ಇವು ತುಂಬಾ ಯುಕ್ತವಾದ ಮಾತುಗಳು. ಮಹಾರಾಜ ಕಾಲೇಜಿನಲ್ಲಿ ಒಟ್ಟಾಗಿ ಓದುತ್ತಿದ್ದ ಕಾಲದಲ್ಲಿ ಅವರ ಸೈಕಲ್ ಕಂಬಿಯ ಮೇಲೆ ನನ್ನನ್ನು ಕೂರಿಸಿಕೊಂಡು ಹೋಗುತ್ತಿದ್ದ ದಿನಗಳು, ಬೆಂಗಳೂರು ವೈಎಂಸಿಯಲ್ಲಿ ಅವರು ವಾಸವಾಗಿದ್ದ ಕಾಲದಲ್ಲಿ ಅವರ ಅತಿಥಿಯಾಗಿ ನಾನು ಅವರೊಡನೆ ಕಳೆದ ತಿಂಗಳುಗಳು, ನಂತರ ಅವರು ಮೈಸೂರು ವಿ.ವಿ ಯ ಸೆನೆಟ್ ಸದಸ್ಯರಾಗಿದ್ದ ಅವಧಿಯಲ್ಲಿ ನಮ್ಮ ಪದೇಪದೇ ಭೆಟ್ಟಿಗಳು –ಈ ಎಲ್ಲ ಸಂದರ್ಭಗಳು ನನಗೆ ಇವತ್ತಿಗೂ ಖುಶಿ ಕೊಡುವ ನೆನಪುಗಳು. ಯಾರೂ ಪ್ರೀತಿಸಬಹುದಾದ ಲಿಂಗಪ್ಪ ಒಬ್ಬ ಅಪರೂಪದ ವಿಶಿಷ್ಠ ವ್ಯಕ್ತಿ; ರಾಜಕಾರಣದಲ್ಲಿ ಕೂಡಾ.

**–ಹೆಚ್ ಎಸ್ ಈಶ್ವರ, ಬೆಂಗಳೂರು**

ಕಳೆದ ಸಂಚಿಕೆಯಲ್ಲಿ ನಿಮ್ಮ ಸಂಪಾದಕೀಯ ಮತ್ತು ಸಾಂಸ್ಕೃತಿಕ ಟಿಪ್ಪಣಿಗಳು, ಗಾಂಧಿ ಮತ್ತು ರಮಣರ ಬಗೆಗಿನ ಲೇಖನ, ಧರ್ಮವಿಚಾರದ ಕ್ರೈಸ್ತ ವಾಣಿಗಳು ಗಮನ ಸೆಳೆದವು. ಕೇವಲ ಒಂದೇ ಪುಟದ ತಮ್ಮ ಸಂಪಾದಕೀಯದಲ್ಲಿ ಡಿಎಸ್ನೆನ್ ಇಂದು ನಮ್ಮ ಸಮಾಜವು ಎದುರಿಸುತ್ತಿರುವ ಅಸಂಖ್ಯಾತ ಸಮಸ್ಯೆಗಳಿಗೆ ಕಾರಣಗಳನ್ನು ಬಿಡಿಸುತ್ತಾ ಸಮಾಜವು ಬೆಳೆಸಿಕೊಂಡ ನಿರ್ಲಜ್ಜತೆ, ಅನೈತಿಕತೆಗಳ ವಿಚಾರವಾಗಿ ಹೇಳುತ್ತಾ ಕೊನೆಗೆ ಇವೆಲ್ಲದಕ್ಕೂ ಮೂಲಭೂತ ಕಾರಣವಾದ ಮನುಷ್ಯ ತನ್ನ ಮನಸ್ಸಿನ ಮೇಲಿನ ಹಿಡಿತವನ್ನು ಕಳೆದುಕೊಂಡು ಅದರ ಸ್ವಚ್ಛಂದತೆಯೇ ಬದುಕಿನ ಪ್ರೇರಣೆಯಾಗಿಸಿಕೊಂಡು ಹಾದಿ ತಪ್ಪಿರುವುದೇ ಆಗಿದೆ ಎಂಬ ಆಳದ ಸತ್ಯ ದರ್ಶನ ಮಾಡಿಸಿದ್ದಾರೆ. ಹಾಗಾಗಿಯೇ ಬಿಕ್ಕಟ್ಟುಗಳೆಲ್ಲ ಇರುವುದು ಮನುಷ್ಯ ಕುಲದ ಮನಸ್ಸಿನಲ್ಲಿ ಅಂದರೆ ನಮ್ಮ ಆಂತರ್ಯದಲ್ಲಿಯೇ ಹೊರತು ಬಾಹ್ಯದಲ್ಲಿ ಅಲ್ಲ, ಹಾಗಾಗಿ ರಿಪೇರಿ ಆಗಬೇಕಾದದ್ದು ಮೊದಲು ನಮ್ಮ ಮನಸ್ಸು ಎಂಬ ಹೊಳಹುಗಳು ಇಲ್ಲಿ ಮೂಡಿವೆ. ಮನಸ್ಸಾಕ್ಷಿ ಮತ್ತು ಮನದ ಸ್ವೇಚಾಚಾರದ ಬಗೆಗಿನ ತಿಳುವಳಿಕೆ ಇಲ್ಲದೆ ಯಾವ ಬಾಹ್ಯ ವ್ಯವಸ್ಥೆಗಳೂ ತನ್ನ ಕಾರ್ಯವನ್ನು ಸರಿಯಾಗಿ ನಿರ್ವಹಿಸಲಾರವು ಎಂದು ಮನಮುಟ್ಟುವಂತೆ ತಿಳಿಸಲಾಗಿದೆ. ಈ ದರ್ಶನಕ್ಕೆ ಪೂರಕವಾಗಿ ಗಾಂಧಿ ರಮಣರ ಮತ್ತು ಕ್ರೈಸ್ತ ವಾಣಿಗಳು ನಮಗೆ ಮಾರ್ಗಸೂತ್ರಗಳಾಗಿ ಜೀವನದ ನಿಜವಾದ ಸೌಂದರ್ಯದ ಕಡೆ ಬೆಳಕು ಚೆಲ್ಲುವಂತಿದೆ.

ಇನ್ನು ಕೋಣಂದೂರು ಲಿಂಗಪ್ಪನವರ ಜೊತೆಗಿನ ನಿಮ್ಮ ಒಡನಾಟದ ಬಗೆಗಿನ ಲೇಖನವು ತಿಳಿಯಾದ ಹಾಸ್ಯದಿಂದ ಮುದ ನೀಡಿ ಅವರ ವ್ಯಕ್ತಿತ್ವದ ಬಗ್ಗೆ ಆಪ್ತತೆ ಮೂಡಿತು. ಗೌರ್ಮೆಂಟ್ ಬ್ರಾಹ್ಮಣ ನಾಟಕದ ಬಗ್ಗೆ ವಿಮರ್ಶೆ ವಸ್ತುನಿಷ್ಠವಾಗಿದ್ದು ನಾಟಕಗಳ ರಸಗ್ರಹಣವನ್ನು ಕಲಿಸುವಂತಿದೆ. ಜೊತೆಗೆ ಪುಸ್ತಕಗಳ ಪರಿಚಯ ನಿಜಕ್ಕೂ ಗಮನ ಸೆಳೆಯುತ್ತಿದೆ. ಅಯೋಧ್ಯ ತೀರ್ಪಿನ ಲೇಖನವು ಓದಲು ಬಹೂ ಕ್ಲಿಷ್ಟಕರವಾಗಿದ್ದು ಗೊಂದಲಗೊಳಿಸುವಂತಿದೆ.

**–ಬಿ.ವಿ. ಸುರೇಂದ್ರ** ಸಾಗರ

ಡಿಸೆಂಬರ್ ಸಂಚಿಕೆಯಲ್ಲಿನ 'ಮಹಾತ್ಮ ಗಾಂಧಿ ಮತ್ತು ಶ್ರೀ ರಮಣ ಮಹರ್ಷಿಗಳು' ಲೇಖನ ವಿಶೇಷವಾಗಿ ಗಮನಸೆಳೆಯಿತು. ರಮಣರಿಂದ ನಮಗೆ ಗಾಂಧಿ ಲೋಕ ವ್ಯವಹಾರಗಳ ಮಧ್ಯೆಯೇ ಆಧ್ಯಾತ್ಮಿಕವಾಗಿ ಬದುಕಿದ ಮಹಾ ಸಂತ ಎಂಬುದು ತಿಳಿಯುತ್ತದೆ. 'ಗಾಂಧಿ ಕಥನ'ದಲ್ಲಿ ಡಿ. ಎಸ್. ಎನ್. ಮುನ್ನುಡಿಯಲ್ಲಿ ಹೇಳುವಂತೆ ಗಾಂಧಿ ರಮಣರನ್ನ ಮುಖತಃ ಭೇಟಿಯಾಗಿದ್ದರೆ ಅವರಿಬ್ಬರ ನಡುವೆ ಏರ್ಪಡುವ ಸಂಭಾಷಣೆಯನ್ನು ನಾವು ಕಾಣಬಹುದಿತ್ತು ದುರಾದೃಷ್ಟವಷಾತ್ ಅದು ಘಟಿಸಲಿಲ್ಲ. ಹಾಗೇ 'ಕ್ರೈಸ್ತ ಸಂತವಾಣಿ' ಮತ್ತು ಮೂರು ಪದ್ಯಗಳು ನಮ್ಮನ್ನ ಆತ್ಮ ವಿಮರ್ಶೆಗೆ ಹಚ್ಚುತ್ತವೆ!

**–ಸಂಜಯಕುಮಾರ್**, ಬೊಕ್ಕಪುರ (ಚಾಮರಾಜನಗರ)

**ಹಿರಿಯ ಸಾಹಿತಿಗಳಾದ ಎಲ್. ಎಸ್. ಶೇಷಗಿರಿ ರಾವ್ ಮತ್ತು ಚಂದ್ರಕಾಂತ ಕರದಳ್ಳಿ ಹಾಗೂ ಹಿರಿಯ ಸಾಹಿತ್ಯ ಪೋಷಕ ಎಂ. ರಾಮಚಂದ್ರ ಅವರ ನಿಧನಕ್ಕಾಗಿ 'ಹೊಸ ಮನುಷ್ಯ' ತೀವ್ರ ಸಂತಾಪಗಳನ್ನು ವ್ಯಕ್ತಪಡಿಸುತ್ತದೆ.–ಸಂ.**

ಯುವಲಹರಿ

# ಆದಿವಾಸಿಗಳ ಅಭಿವೃದ್ಧಿಯೆಂಬ ಕ್ಲೀಷೆ

–ಅರ್ಚನಾ ಖ್ಯಾಡಿ

**ಸ್ಮಾರ್ಟ್ ಸಿಟಿಗಳು, ಬುಲೆಟ್ ಟ್ರೇನು, ೧೮೨ ಅಡಿ ಎತ್ತರದ ಪ್ರತಿಮೆ, ೫ ಟ್ರಿಲಿಯನ್ ಎಕಾನಮಿ, ಹಾಗೂ ನಮ್ಮೆಲ್ಲರ ಐಷಾರಾಮಿ ಜೀವನಕ್ಕೆ ಬೇಕಾಗುವ ಸಂಪನ್ಮೂಲಗಳೆಲ್ಲ ಆದಿವಾಸಿಗಳು ಬದುಕುವ ಗುಡ್ಡಗಳ ಒಡಲಲ್ಲೇ ಹುದುಗಿವೆ. ಅಭಿವೃದ್ಧಿಯ ನಾನಾ ಯೋಜನೆಗಳಾದ ಅಣೆಕಟ್ಟಗಳು, ಅಣುಸ್ಥಾವರಗಳ ನಿರ್ಮಾಣಕ್ಕೆ ಅವರ ಭೂಮಿಯೇ ಬೇಕಾಗಿರುವಾಗ, ಅವರ ಹಕ್ಕುಗಳನ್ನು ಗುರುತಿಸಿ ಸಬಲರನ್ನಾಗಿ ಮಾಡುವ ಪ್ರಶ್ನೆ ಎಲ್ಲಿಂದ ಬಂತು? ಅದರ ಬದಲಾಗಿ ಆದಿವಾಸಿ ಮೇಳಗಳನ್ನು ವಿಜೃಂಭಣೆಯಿಂದ ನೆರವೇರಿಸಿ, ಹೋಗುವಾಗ ಅವರಿಗೊಂದಿಷ್ಟು ಸಂಭಾವನೆ ಕೊಟ್ಟು ಕಳಹಿಸಿ ಕೈತೊಳೆದುಕೊಳ್ಳುವುದು ಸುಲಭದ ಕೆಲಸವಲ್ಲವೇ?**



ಪ್ರತಿವರ್ಷದಂತೆ ದೆಹಲಿಯಲ್ಲಿ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ಆದಿವಾಸಿ ಕಲೆ–ಸಂಸ್ಕೃತಿಯನ್ನು ಸಂಭ್ರಮಿಸುವುದಕ್ಕೋಸ್ಕರ ಹದಿನೈದು ದಿವಸಗಳ 'ಆದಿ ಮಹೋತ್ಸವ' (ರಾಷ್ಟ್ರೀಯ ಆದಿವಾಸಿ ಹಬ್ಬ)ವನ್ನು ಕಳೆದ ನವೆಂಬರ್‌ನಲ್ಲಿ ಆಯೋಜನೆ ಮಾಡಿತ್ತು. ೧೬ ರಿಂದ ೩೦ ರವರೆಗೆ ನಡೆದ ಈ ಉತ್ಸವಕ್ಕೆ ನಮ್ಮ ಕೇಂದ್ರ ಗೃಹ ಮಂತ್ರಿಗಳು ಚಾಲನೆ ನೀಡಿದರು.

ಇದೇ ಮಾದರಿಯ ಉತ್ಸವಗಳನ್ನು ರಾಷ್ಟ್ರಮಟ್ಟದಲ್ಲಿ ಅಲ್ಲದೇ, ರಾಜ್ಯಮಟ್ಟದಲ್ಲಿಯೂ ಅನೇಕ ಕಡೆ ಪ್ರತಿ ವರ್ಷವೂ ಆಯೋಜನೆ ಮಾಡಲಾಗುತ್ತದೆ. ಎರಡು ವರ್ಷಗಳ ಹಿಂದೆ ಒಡಿಶಾದಲ್ಲಿ ನಾನು ಕೆಲಸ ಮಾಡುತ್ತಿದ್ದ ವೇಳೆಯಲ್ಲಿ ಭುಬನೇಶ್ವರದಲ್ಲಿ ನಡೆಯುತ್ತಿದ್ದ 'ಆದಿವಾಸಿ ಮೇಳ'ಕ್ಕೆ ಹೋಗಿದ್ದೆ. ಮೇಳದಿಂದ ಹೊರಬರುವ ಹೊತ್ತಿಗೆ ಒಂದು ರೀತಿಯಕಳವಳದ ಭಾವ ಹುಟ್ಟಿತ್ತು. ಒಂದು ಕಡೆ, ಅವರ ಹಕ್ಕುಗಳನ್ನು ದಮನ ಮಾಡಿ ಅಭಿವೃದ್ಧಿಯ ಮಂತ್ರವನ್ನು ಪಠಿಸುತ್ತಿರುವ ಸರ್ಕಾರಗಳು, ಇನ್ನೊಂದು ಕಡೆ ಆದಿವಾಸಿಗಳನ್ನು ಪ್ರಾಣಿಗಳಂತೆ, ಮನರಂಜನೆಯ ವಸ್ತುಗಳಂತೆ ನೋಡುವ 'ನಾಗರಿಕ' ಜನತೆ.

ಮೇಳದ ಒಳಗೆ, ಒಡಿಶಾದಲ್ಲಿರುವ ಅನೇಕ ಆದಿವಾಸಿ ಸಮುದಾಯಗಳ ಮನೆಗಳ ಮಾದರಿಗಳನ್ನು ನಿರ್ಮಾಣ ಮಾಡಿ ಆ ಮನೆಗಳಲ್ಲಿ ಆಯಾ ಸಮುದಾಯದ ಒಬ್ಬರನ್ನೋ ಇಬ್ಬರನ್ನೋ ಕೂರಿಸಿರುತ್ತಾರೆ. ನೋಡಲು ಹೋದ ಜನ ಕಟಾಂಜನದ ಆಚೆ ನಿಂತು ಆದಿವಾಸಿ ಜನರನ್ನು ತಮ್ಮ ಆಶ್ಚರ್ಯಭರಿತ ಕಣ್ಣುಗಳಿಂದ ಸಂಗ್ರಹಾಲಯದಲ್ಲಿರುವ ಪ್ರಾಣಿಗಳನ್ನು ನೋಡಿದ ಹಾಗೆ ನೋಡುತ್ತಾರೆ. ಉಳಿದಂತೆ, ತಮ್ಮ ಮನೆಯಾಲಂಕಾರಕ್ಕೆ ಅಲ್ಲಿ ಮಾರಲು ತಂದ ಕಲಾಕೃತಿಗಳನ್ನು ಕೊಂಡು, ಆ ದಿನ ಏರ್ಪಡಿಸಿದ ನೃತ್ಯ ಪ್ರದರ್ಶನವನ್ನು ನೋಡಿ, ಒಂದಷ್ಟು ಖಾದ್ಯಗಳನ್ನು ಸವಿದು ಮನೆಗಳಿಗೆ ತೆರಳುತ್ತಾರೆ. ಅಲ್ಲಿಗೆ, ಸರ್ಕಾರದ ಹಾಗೂ 'ಜನರ ಸಂಸ್ಕೃತಿ ಉಳಿಸುವ ನಾಟಕ' ಕೊನೆಗೊಳ್ಳುತ್ತದೆ.

ಸರ್ಕಾರ ಆಯೋಜನೆ ಮಾಡುವ ಇಂತಹ ಕಾರ್ಯಕ್ರಮಗಳು ಅವರ ಆಷಾಢಭೂತಿತನ, ಕಪಟತನದ ಧೋರಣೆಗಳಿಗೆ ಹಿಡಿದ ಕನ್ನಡಿಯಾಗಿದೆ. ಇದೇ ರಾಜ್ಯದಲ್ಲಿ ಆದಿವಾಸಿಗಳು ಪ್ರತಿದಿನವೂ ತಮ್ಮ ನೆಲವನ್ನು ಕಳೆದುಕೊಳ್ಳುವ ಭೀತಿಯಲ್ಲಿ, ಕಳೆದುಕೊಂಡ ನೋವಿನಲ್ಲಿ ಬದುಕುತ್ತಿದ್ದಾರೆ. ಗಣಿಗಾರಿಕೆಯ ಕಂಪೆನಿಗಳಿಗೆ ಸರ್ಕಾರವೇ ಸಾಥ್ ನೀಡಿ ಜನರನ್ನು ಒಕ್ಕಲೆಬ್ಬಿಸಿ, ದೇಶವನ್ನು 'ಅಭಿವೃದ್ಧಿ'ಯ ಪಥದತ್ತ ಕೊಂಡೊಯ್ಯುವ ಯೋಜನೆಗಳನ್ನು ಎಡೆಬಿಡದೆ ನಿರೂಪಿಸುತ್ತಿದೆ. ಸಹಸ್ರ ವರ್ಷಗಳಿಂದ ಕಾಡಿನೊಂದಿಗೆ ಅವಿನಾಭಾವ ಸಂಬಂಧವನ್ನಿರಿಸಿಕೊಂಡು, ಕಾಡಿನ ರಕ್ಷಣೆ ಮಾಡುತ್ತಾ ತಮ್ಮ ಮಿತಿಯಾದ ಅಗತ್ಯಗಳನ್ನು ಅದರಿಂದ ಪೂರೈಸಿಕೊಂಡು ಬಂದಿರುವ ಈ ಜನ ಪ್ರತಿದಿನ ಅನಿಶ್ಚಿತತೆಯ ಸಂಕಟದಲ್ಲಿ ಬದುಕುತ್ತಾರೆ.

ಆದಿವಾಸಿ ಸಮುದಾಯಗಳ ಹಾಗೂ ಇತರೆ ಅರಣ್ಯಾಶ್ರಿತ ಸಮುದಾಯಗಳ ಹಕ್ಕುಗಳನ್ನು ಗುರುತಿಸಿ ೨೦೦೬ ರಲ್ಲಿ 'ಅರಣ್ಯ ಹಕ್ಕು ನೀತಿ' ಜಾರಿಗೆ ಬಂದಿದ್ದರೂ, ಯಾವ ರಾಜ್ಯದಲ್ಲಿಯೂ ಕೂಡ ಅದರ ಸಮರ್ಪಕ ಅನುಷ್ಠಾನವಾಗಿಲ್ಲ. ವೈಯಕ್ತಿಕ ಅರಣ್ಯ ಹಕ್ಕು (IFR) ಗಳನ್ನು ತಕ್ಕಮಟ್ಟಿಗೆ ಗುರುತಿಸಿದ್ದರೂ, ಸಾಮುದಾಯಿಕ ಅರಣ್ಯ ಹಕ್ಕು (ಅಆಖ) ಗಳನ್ನು ಗುರುತಿಸಲು ಸರ್ಕಾರಕ್ಕೆ ಬಿಲ್ಕುಲ್ ಮನಸ್ಸಿಲ್ಲ. ಕೆಲವೇ ಕೆಲವು ಕಡೆಗಳಲ್ಲಿ ಆದಿವಾಸಿಪರ ಸಂಘಟನೆಗಳ ನಿರಂತರ ಪರಿಶ್ರಮದಿಂದ CFR ಗಳನ್ನು ಗುರುತಿಸಲಾಗಿದೆ. ಸಾಮುದಾಯಿಕ ಹಕ್ಕನ್ನು ಗುರುತಿಸದೇ ಇರುವ ಈ ಹೇತುವನ್ನು ಬಿಡಿಸಿ ಹೇಳಬೇಕಾಗಿಲ್ಲ. ಇವರು CFR(ಸಾಮುದಾಯಿಕ ಅರಣ್ಯ ಹಕ್ಕು) ಗಳನ್ನು ಗುರುತಿಸಿ ಹಕ್ಕುಪತ್ರ ನೀಡಿದರೆ, ಅಲ್ಲಿಗೆ ಆ ಭೂಮಿಯ ಮೇಲಿನ ಒಡೆತನ ಸಮುದಾಯದ ಸುಪರ್ದಿಗೆ ಬರುತ್ತದೆ. ಮುಖ್ಯವಾಗಿ, ಹೊರಗಿನಿಂದ ಬರುವ ಲಾಭಕೋರ ಕಂಪೆನಿಗಳನ್ನು/ಇನ್ನಿತರರನ್ನು ಎದುರಿಸುವ ಶಕ್ತಿ ಕಾನೂನಾತ್ಮಕವಾಗಿ ಸಮುದಾಯಕ್ಕೆ ದೊರೆತಿರುತ್ತದೆ. ಈ ಹಕ್ಕಿನಿಂದ ವಂಚಿತರನ್ನಾಗಿ ಮಾಡಿರುವ ಉದ್ದೇಶ ಇಲ್ಲಿ ಸ್ಪಷ್ಟವಾಗಿ ವಿದಿತವಾಗುತ್ತದೆ.

ಸ್ಮಾರ್ಟ್ ಸಿಟಿಗಳು, ಬುಲೆಟ್ ಟ್ರೇನು, ೧೮೨ ಅಡಿ ಎತ್ತರದ ಪ್ರತಿಮೆ, ೫ ಟ್ರಿಲಿಯನ್ ಎಕಾನಮಿ, ಹಾಗೂ ನಮ್ಮೆಲ್ಲರ ಐಷಾರಾಮಿ ಜೀವನಕ್ಕೆ ಬೇಕಾಗುವ ಸಂಪನ್ಮೂಲಗಳೆಲ್ಲ ಆದಿವಾಸಿಗಳು ಬದುಕುವ ಗುಡ್ಡಗಳ ಒಡಲಲ್ಲೇ ಹುದುಗಿವೆ. ಅಭಿವೃದ್ಧಿಯ ನಾನಾ ಯೋಜನೆಗಳಾದ ಅಣೆಕಟ್ಟಗಳು, ಅಣುಸ್ಥಾವರಗಳ ನಿರ್ಮಾಣಕ್ಕೆ ಅವರ ಭೂಮಿಯೇ ಬೇಕಾಗಿರುವಾಗ, ಅವರ ಹಕ್ಕುಗಳನ್ನು ಗುರುತಿಸಿ ಸಬಲರನ್ನಾಗಿ ಮಾಡುವ ಪ್ರಶ್ನೆ ಎಲ್ಲಿಂದ ಬಂತು? ಅದರ ಬದಲಾಗಿ ಆದಿವಾಸಿ ಮೇಳಗಳನ್ನು ವಿಜೃಂಭಣೆಯಿಂದ ನೆರವೇರಿಸಿ, ಹೋಗುವಾಗ ಅವರಿಗೊಂದಿಷ್ಟು ಸಂಭಾವನೆ ಕೊಟ್ಟು ಕಳಹಿಸಿ ಕೈತೊಳೆದುಕೊಳ್ಳುವುದು ಸುಲಭದ ಕೆಲಸವಲ್ಲವೇ?

ಹನ್ಸ್‌ದಾ ಸೌನೇಂದ್ರ ಸೇಖರ್ ಎಂಬ ಸಂತಾಲ್ ಆದಿವಾಸಿ ಸಮುದಾಯಕ್ಕೆ ಸೇರಿದ ವೈದ್ಯಾಧಿಕಾರಿಯೊಬ್ಬರು ಬರೆದ 'The Adivasi Will Not Dance' ಎಂಬ ಪುಸ್ತಕದಲ್ಲಿ, ಅದೇ ಶೀರ್ಷಿಕೆಯ ಕೊನೆಯ ಅಧ್ಯಾಯದಲ್ಲಿ ಸರ್ಕಾರ ಆದಿವಾಸಿ ಸಮುದಾಯವನ್ನು ಶೋಷಿಸುವ ದೃಷ್ಟಾಂತವನ್ನು ಲೇಖಕರು ಅಂತಃಕರಣಪೂರ್ವಕವಾಗಿ ಕಟ್ಟಿಕೊಟ್ಟಿದ್ದಾರೆ.

ನೃತ್ಯ ಮೇಳಗಳನ್ನು ತರಬೇತುಗೊಳಿಸುವ ಮಂಗಲ್ ಮುರ್ಮು ಎಂಬ ಆದಿವಾಸಿ ವೃದ್ಧರೊಬ್ಬರಿಗೆ ನೃತ್ಯ ಪ್ರದರ್ಶನವನ್ನು ನಡೆಸಿಕೊಡಲು ರಾಷ್ಟ್ರಪತಿಗಳಿಂದ ಆಹ್ವಾನ ಬರುತ್ತದೆ. ಆಹ್ವಾನವನ್ನು ಅತ್ಯಂತ ಸಂತೋಷದಿಂದ ಸ್ವೀಕರಿಸಿ ಕಾರ್ಯಕ್ರಮಕ್ಕೆ ಹೋದಾಗ ತಿಳಿಯುತ್ತದೆ: ತನ್ನದೇ ಸಮುದಾಯದ ಜನರನ್ನು ಆಶ್ರಯಹೀನರನ್ನಾಗಿ ಮಾಡಿ ಕಟ್ಟಿದ ಅಣುಸ್ಥಾವರದ ಉದ್ಘಾಟನಾ ಸಮಾರಂಭ ಅದು ಎಂದು. ವಿಷಯ ತಿಳಿದ ಮುರ್ಮು ರಾಷ್ಟ್ರಪತಿಗಳನ್ನು ಪ್ರಶ್ನಿಸುತ್ತಾರೆ – "ಯಾವ ಕಾರಣಕ್ಕೆ ನಾವು ನಿಮ್ಮ ಮುಂದೆ ಕುಣಿಯಬೇಕು ಹೇಳಿ? ಸುಳ್ಳು ಭರವಸೆಗಳನ್ನು ಕೊಟ್ಟು ನಾವು ಅನ್ನ ಬೆಳೆಯುವ ಭೂಮಿಯನ್ನೇ, ಇಂದು ನಾವು ಕುಣಿಯಬೇಕಾಗಿರುವ ಭೂಮಿಯನ್ನೇ ಕಸಿದುಕೊಂಡಿರುವಾಗ ನಾವು ಹೇಗೆ ಸಂತೋಷದಿಂದ ಹಾಡಿ ಕುಣಿಯಲು ಸಾಧ್ಯ? ನಮ್ಮ ಮನೆ ಹಾಗೂ ಭೂಮಿಯನ್ನು ವಾಪಸು ಕೊಡುವವರೆಗೂ, ನಾವು ಹಾಡುವುದಿಲ್ಲ ಮತ್ತು ಕುಣಿಯುದಿಲ್ಲ" ಎಂದು ಸ್ಪಷ್ಟವಾಗಿ ಸಭೆಯನ್ನುದ್ದೇಶಿಸಿ ಹೇಳುತ್ತಾರೆ. ಅವರ ಈ ಪ್ರಶ್ನೆ ಅತ್ಯಂತ ಸಾತ್ವಿಕವದದ್ದು ಹಾಗೂ ನಮ್ಮೆಲ್ಲರನ್ನೂ ಚಿಂತನೆಗೆ ಒಳಪಡಿಸುವಂಥದ್ದು.

ಆದಿವಾಸಿ ಸಂಸ್ಕೃತಿ ರಕ್ಷಣೆಯೆಂದರೆ, ಅವರನ್ನು ಝೂನಲ್ಲಿರುವ ಪ್ರಾಣಿಗಳಂತೆ ಕೂರಿಸಿ ನಾವು ಆಯೋಜನೆ ಮಾಡುವ ಕಾರ್ಯಕ್ರಮಗಳಿಗೆ ಹಾಡಲು, ಕುಣಿಯಲು ಕರೆಸಿ ಮನರಂಜನೆ ತೆಗೆದುಕೊಳ್ಳುವುದಲ್ಲ. ಮೇಳಗಳನ್ನು ಏರ್ಪಡಿಸಿ ಒಂದಷ್ಟು ಮಾರಾಟದ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಸೀಮಿತಗೊಳಿಸಿಕೊಳ್ಳುವುದಲ್ಲ. ಅವರ ಮೂಲ ಹಕ್ಕುಗಳಿಗೆ ಭಂಗ ಬರದಂತೆ ಅವರ ನೆಲದಲ್ಲಿ ನೆಮ್ಮದಿಯಿಂದ ಬದುಕಲು ಬಿಡುವುದು ಇಂದಿನ ತುರ್ತು. ಅವರಿಂದ ನಾವುಗಳು ಶಾಂತಿ– ಸಹಬಾಳ್ವೆ, ಸಂಪನ್ಮೂಲಗಳ ಮಿತವಾದ ಬಳಕೆ, ಪರಿಸರ ರಕ್ಷಣೆಯ ಪಾಠಗಳನ್ನು ಕಲಿಯುವಪ್ರಯತ್ನಗಳನ್ನು ಮಾಡಿದಲ್ಲಿಮಾತ್ರ ಸಂಸ್ಕೃತಿಯ ರಕ್ಷಣೆ ಹಾಗೂ ಪ್ರಸರಣೆ ನೈಜ ಅರ್ಥದಲ್ಲಿ ಸಾಧ್ಯವಾದೀತು.



**(ಮೂಲತಃ ಬಿಜಾಪುರದ ಚಡಚಣದವರಾದ ಅರ್ಚನಾ 'ಅಭಿವೃದ್ಧಿ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದು, ಕೃಷಿ, ಪರಿಸರ, ಕೈಮಗ್ಗ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದಾರೆ)**

# ನವಿಲುಗರಿ

## ಪಾರ್ಕಿನಲಿ ಒಂದು ಸಂಜೆ



ಬೆಂಗಳೂರಿನಲಿ ಪಾರ್ಕು
ಮುಗಿಬೀಳುತ್ತಾರೆ ಜನ
ಉಳಿಸಿದ್ದಾರಲ್ಲ ಉಸಿರು!
ವಾತಾವರಣಕ್ಕೆ
ಅಂಗೈಅಗಲದ ಹಸಿರು
ಅಲ್ಲಲ್ಲಿ ಕಲ್ಲುಬೆಂಚು
ರೌಂಡು ಛಾವಣಿ
ಸುತ್ತಲೂ ವಯಸ್ಸಾದವರದೆ
ಕಾರು-ಬಾರು, ಮಗಳು ಅಳಿಯ
ಮಗ-ಸೊಸೆ, ಬಿಪಿ ಶುಗರು
ಅಲ್ಲಲ್ಲಿ ಅಜ್ಜಿಯರ ದರಬಾರು
ಸಚಿವರು ಶಾಸಕರು ಹಾಳು ಚುನಾವಣೆ
ಹವಾಮಾನ, ಕೊಲೆ ಸುಲಿಗೆ ಇವತ್ತಿನ ವಿದ್ಯಮಾನ
ಮಾತಾಡಿದ್ದೇ ಮಾತಾಡಿದ್ದು
ತಲೆನೋವಿಗೆ ಅಜ್ಜಂದಿರ ಮಾತೇ ಮದ್ದು!

ಕೆಲವರದಂತೂ ಮಾತಿಲ್ಲ ಮೌನ ಮೌನಂ
ಏನಿದಿಯೋ ಸಮಸ್ಯೆ ದೇವರೇ ಬಲ್ಲ
ನಿಜ, ಮಾತನಾಡಲೇಬಾರದು ಪಾರ್ಕಿನಲಿ
ಅದು ಮೌನದ ಜಾಗ
ಆದರೂ ಬಿಡಲಾದೀತೆ ಕಷ್ಟ-ಸುಖ
ಪಾರ್ಕು ನಿಮಿತ್ಯ ಮಾತ್ರ
ಬಹುತೇಕರಿಗೆ ಇದೂ ಅಪರಿಚಿತ ಲೋಕವೇ
ಎದ್ದು ಬರಬೇಕು ಒಬ್ಬರೇ ಕುಳಿತು
ಬರುತ್ತಾರೆ ಆಗಾಗ
ದೊಡ್ಡ ದನಿಯವರು
ಕಳಿತಲ್ಲಿಂದಲೇ ಫೋನಿನಲಿ
ಜೋರಾಗಿ ಮಾತನಾಡುವವರು
ಕುಳಿತುಕೊಂಡಿದ್ದೆ ಒಂದು ದಿನ ಸಂಜೆ
ಹೆಂಡತಿ ಮಕ್ಕಳ ಜೊತೆ
ಎದುರಿಗಿದ್ದರು ಅಜ್ಜ ಅಜ್ಜಿಯರು
ಪಕ್ಕದಲ್ಲಿದ್ದವನ ಜೋರಾದ ಮಾತು
ಕೀಟಲೆ ಮಾಡುತ್ತಿದ್ದ ಅಜ್ಜನಿಗೆ
ವಯಸ್ಸಿನ ಅಂತರವಿಲ್ಲದೆ
ಸಲುಗೆಯನಿರಬೇಕು
ಅಜ್ಜ ಮುಗುಳ್ನಗುತ್ತಿದ್ದ
ಅಜ್ಜಿಯೂ ಅಷ್ಟೇ
ಶುರು ಮಾಡಿದನವನು
ಫೋನಿನಲಿ ಮಾತು
ಯಾಕೆ ಕವಿಗಳೇ ಬಂದಿಲ್ಲ ಇವತ್ತು?
ಕೇಳಿಸಿಕೊಳ್ಳಬೇಕಿತ್ತು ನಿಮ್ಮ ಕವನ
ಮೊನ್ನೆ ಚೆನ್ನಾಗಿತ್ತು. ನಾನೂ ಬರೀಬೇಕು
ಮಾತನಾಡುತ್ತಲೇ ಇದ್ದ
ನಮ್ಮನ್ನೇ ನೋಡುತ್ತಿದ್ದ
ಬಡಪಾಯಿಗಳ ಸುದ್ದಿಯನ್ನು
ಬಡಪಾಯಿಗಳ ಮುಂದೆ
ಅದೂ ಪಾರ್ಕಿನಲಿ ಕವಿಗಳ ಸುದ್ದಿ!
ಮನೆಯಾಕೆ ನೋಡಿದಳು ನನ್ನನೆ
'ಗಿರಾಕಿ ನಿಮ್ಮದೆ' ಸುಮ್ಮನೆ ಕೂಡೆಂದೆ
ನಮ್ಮಷ್ಟಕ್ಕೆ ನಾವು ಗುಣು ಗುಣು
ಮಾತು ನಿಲ್ಲಿಸಿದ ನಮ್ಮನ್ನೇ ನೋಡುತ್ತಾ
ನಮ್ಮ ಹುಡುಗನ ಕರೆದ
ಯಾವ ಕ್ಲಾಸೆಂದ?





ಚಿತ್ರಗಳು: ವಿಜಯಶ್ರೀ ಹಾಲಾಡಿ

ಹೆಸರೇನೆಂದ ಇಬ್ಬರನ್ನೂ ಕೇಳಿದ
ನಾನೂ ನಕ್ಕೆ ಸೌಜನ್ಯದಿಂದ
ಕಡೆಯವರಾ? ಹೌದೆಂದೆ
ಲಿಂಗಾಯತರಾ? ಎಂದ
ಅರೇ ಇಷ್ಟ ಬೇಗ ಜಾತಿ ಬೇಕಾಯಿತಾ ಇವನಿಗೆ?
ಸಿಟ್ಟು ಬಂತು, ತಡೆದುಕೊಂಡು ಹೇಳಿದೆ
'ನನ್ನ ತಂದೆ ಮುಸ್ಲಿಂ, ನನ್ನ ತಾಯಿ ಹಿಂದೂ '
ನಾನು ಕ್ರಿಶ್ಚಿಯನ್ ನಮ್ಮದು ಲವ್ ಮ್ಯಾರೇಜ್
ನನ್ನ ಹೆಂಡತಿ ಲಿಂಗಾಯತರು
ಅವನು 'ಹೌದಾ'.. ಅನ್ನಲಿಲ್ಲ
'ಹೌದೂ'.. ಎನ್ನಲಿಲ್ಲ ಗೋಣು ಹಾಕಿದ
ಮುಂದೆ ಮಾತಿಲ್ಲ ಎದ್ದು ಬಂದೆವು
ಮರೆಯಾಗುವರೆಗೂ
ನಮ್ಮನ್ನೇ ನೋಡುತ್ತಿದ್ದ

-ಬಸವರಾಜ ಹೂಗಾರ

## ಹೊಟ್ಟೆ ಸಂಕಟ

ಇದ್ದಕ್ಕಿದ್ದಂತೆ ಅಕಾಲ ವೈರಾಗ್ಯ
ಬಂದಂತೆ ಶೂನ್ಯದಲ್ಲಿ
ದೃಷ್ಟಿ ನೆಟ್ಟ ಆ ಭಯ
ಭೀತ ನೋಟ



ಚೂರಿಯಂತೆ ಹೊಟ್ಟೆಯೊಳಗೆ
ಹೊಕ್ಕು ಅಟ್ಟಾಡಿಸಿ ಆಡಿಸಿ
ಹಗಲು ರಾತ್ರಿ ಬೆನ್ನು ಬಿಡದೆ
ಜಗ್ಗಿ ಜಗ್ಗಿ ನೋವು
ನೊಣೆದು ನುಲಿದು
ಹಿಂಡಿ ಹಿಪ್ಪೆ ಮಾಡಿ
ಹೊಸಕಿ ಜೀವ

ಇಟ್ಟು ಕೊಂಡಿರುವೆ ಹೊಟ್ಟೆ ಯೊಳಗೆ
ಬಸುರಿಯಲ್ಲ ಹೆರಲಾರೆ
ಉಂಡರು ಉಣಲಾರೆ ಉಟ್ಟರು
ಉಡಲಾರೆ ನಗಲಾರೆ ಅತ್ತರೆ
ನಿಲ್ಲಿ ಸಲಾರೆ ಬಿಕ್ಕಿ ಬಿಕ್ಕಿ ಹಗುರ
ಆಗಲಾರೆ ಕೈ ಚೆಲ್ಲಲಾರೆ ನೋವ
ಕೊಟ್ಟು ಕಳೆಯಲಾರೆ ಮರೆತು
ಮಲಗಲಾರೆ ನೋಡಲಾರೆ ನಲುಗುವುದು
ಹೊಕ್ಕುಳ ಬಳ್ಳಿ
ಚಡಪಡಿಸುವುದು.

ಹೌದು ಇದು ಹೊಕ್ಕುಳ ಕುರಿತಾಗಿಯೇ
ಹುಟ್ಟುತ್ತಿರುವ ಮಾತುಗಳು
ಹುಟ್ಟಲಾರವು
ಇದು ರಕ್ತ ಮಾಂಸ ಹಂಚಿಕೊಂಡು
ಹುಟ್ಟಿದ್ದರ ಫಲವು !

-ಸಂಧ್ಯಾದೇವಿ



**ಒಂದು ಅ-ಲಲಿತ ಪ್ರಸಂಗ**

# ಕೋಳಿ ಜಗಳ ಹೋಗಿ ಕುರಿ ಪಂಚಾಯತಾಯ್ತು...

–ಹೆಚ್. ಆರ್. ಸುಜಾತಾ



ಚಿತ್ರ: ಗುಜ್ಜಾರಪ್ಪ

**ಆ** ದನಿನ ಬಾರೆಗೆ ದನ ಮೇಯ್ಸಕೆ ಅಂತ ಹೋಗೋ ಹುಡ್ಲು ಕಾಡು ವನ ಎಲ್ಲ ಸುತ್ತಿ ಯಾವ್ಯಾವ ಮರದಲ್ಲಿ ಯಾವ ಕಾಲದಲ್ಲಿ ಯಾವ ಹಣ್ಣುಪಣ್ಣು ಸಿಕ್ತವೆ ಅಂತ ಹುಡಕ್ಕಂಡು ತಿನ್ನದು. ಹೊಲದಲ್ಲಿ ಬೆಳೆದಿರೊ ಜೋಟ್ಟು, ಕಾಳ ಕಿತ್ಕಂದು ತಿನ್ನದು, ಊರವ್ರು ಬ್ಯಾರೆ ಊರಿನ ನೆಂಟ್ರು ಮನಿಗೆ ಹ್ವಾದವರು ಅಂದಾಗ ಅಲ್ಲಿ ನೋಡಕಬಂದುದ್ದೆ ಅಪರೂಪಕ್ಕೆ ಊರು ವುನ್ಲಿ ಕಡ್ಲೆಕಾಯ್ನೋ... ಆಲೂಗಡ್ಡೆನೋ... ಗೆಣಸನೋ ತಂದು ಹಾಕಿ ಮನಿಗೆ ತಿನ್ನಕಾತವೆ, ಬೆಳಕಳನ ಅಂತ ಹ್ವಾದ್ರೆ...ಅದುನ್ನೂ ಬುಡದೆ ಲೂಟಿ ಹೊಡ್ಯದು, ಊರಲ್ಲಿರ ಅಲ್ಲೊಂದು ಇಲ್ಲೊಂದು ತೆಂಗಿನ ತ್ವಾಟಕ್ಕೋಗಿ ಎಳನೀರು ಕದ್ದು ಕುಡ್ಯದು. ಮ್ಯಾತೆಜ್ವಾಳದ ಹೊಲಕ್ಕೆ ನುಗ್ಗಿ ಮುರಕಂದು ಬೆಂಕಿ ಹಾಕ್ಕಂದು ಸುಟ್ಕಂದು ತಿನ್ನದು... ಇಂಥ ಕಳ್ಳ ಹುಡ್ಲು ಜೊತೆಲಿ ಬೇಯಕ್ಕಾಗದೆ ಊರಲ್ಲಿ ದೊಡ್ಡೋರಿಗೆ ಜಗಳ ಅನ್ನದು ಹತ್ತಿ ಉರದುದ್ದು ಒಂದೊಂದ್ಸಲ ಊರನೇ ಬೇಯ್ಸಬುಡದು.

ಹಿಂಗೆ ಒಂದಪ ಏನಾತಪ್ಪ ಅಂದ್ರೆ.... ರಾಜನ ಹೆಂಡತಿ ಲಕ್ಷಮಮ್ಮನ ಕೋಳಿ ಕಳ್ದು ಹೋಯ್ತು. ರಾಜನ ಹೆಂಡತಿ ಅಂದ್ರೆ ಊರಿಗೆ ಓಬವ್ವ ಇದ್ದಂಗೆ ಇದ್ಲು ಅನ್ನಿ. ಅವಳು ದೊಡ್ಡಾಳು. ಆಪ್ಪಗಲ ಮೈ. ಆ ಎತ್ರ, ಲಕ್ಷಣ, ಹಣೆಗಿಡೊ ದೊಡ್ಡ ಕುಕ್ಕುಮ, ಯಾವಾಗ್ಲೂ ತೊಟ್ಟಿರತಿದ್ದ ಅವರಪ್ಪನ ಮನೆಲಿ ಕೊಟ್ಟ ತೂಕದ ಬೆಳ್ಳಿ ಕಾಲ್ಸರ, ಕಾಲಮುರಿ, ಬಳೆಮುಂದ್ಲಕ್ಕೆ ಹಾಕ್ಕಂದಿರ ಬೆಳ್ಳಿ ಮುರಿ, ಚಿನ್ನದ ಕಿವಿ ಬುಗುಡಿ, ಅದುಕ್ಕೆ ನ್ಯಾತುಬಿದ್ದ ಮುರ, ಎರಡೂ ಮೂಗಿನ ಬೇಸುರಿ, ಎಲಡಿಕೆ ಸೋರಿ ಯಾವಾಗೂ ಕೆಂಪಗಿರ ತುಟಿ, ಕೆನ್ನಿಗೆ ವತ್ತಲಸಕಂದಿರ ಎಲಡ್ಕೆ ಗಂಟು, ಹಿಂದೆ ಕಟ್ಟಿರ ದಪ್ಪ ತುರುಬು, ಯಾವಾಗ್ಲೂ ಕಪಿ ಹಂಗೆ ಕಂಕ್ಳಲ್ಲಿ ಅವುಚ್ಕಂದಿರ ಮಕ್ಳು, ಕತ್ತಿನ ನರದ ಮ್ಯಾಲೆ ವಲದಾಡ್ತಾ ಹೊತ್ಕಂದಿರ ಊಟದ ಕುಕ್ಕೆ, ಅವರವ್ವನ ಕಾಲುಕಾಲಿಗೆ ತೊಡ್ರಕಂದು ಜತಿಗೆ ಹೋತಿರ ಇನ್ನೆಳ್ಡು ಮಕ್ಳು, ಭುಜದ ಮ್ಯಾಲೆ ಯಾವಾಗ್ಲೂ ಕುಂತಿರೊ ಒಂದು ದಪ್ಪನೆ ಸುತ್ತಿಗೆ ಹಿಂಗೆ ಊರ ಮಾರಮ್ಮನೆ ಎದ್ದು ತನ್ ಮಕ್ಳ ಜೊತೆ ಊರು ಕಟ್ಟಕೆ ಅಂತವ ನಡದು ಹೋತಿದ್ದಾಳೇನೋ ಅನ್ನೋ ಹಂಗೆ ಅವ್ಳು ಹೊಸಬರಿಗೆ ಕಾಣತಿರಳು.

ಹಿಂಗೆ ಅವಳು ನಡದು ಹ್ವಾಗುವಾಗ ಒಳಗಿಂದ ಮಣಿ ಓಡಿಬಂದು ಅವ್ರ ಮನೆ ಬಾಗ್ಲಲ್ಲಿ ನಿಂತು ಈ ಚಂದವ ನೋಡತಾ ನಿಲ್ಲದು. ಅವ್ಳೂ ಅಕ್ರೇಲಿ ನಿಂತಕಂದು ಮಣಿಯ ಮಾತಾಡಸ್ಕಂಡು 'ಓದ್ಕಳೊ ಮಗೈ... ನಿಮ್ಮಪ್ಪವ್ವರ ಆಸೆ ನೆರವೇರ್ಲಿ ಕಣ್ ಚಿನ್ನ...ಹಾಸನ ಕ್ವಾಟಿಗೆ ನಾಳಿಕೆ ಹೋತಿಯೇನೆ ನನ್ ಕಂದ... ಬರ್ಲೆನವ್ವಾ... " ಅಂತ ರಾಗ ಹೂಡಿ ಸಕಲ ಬ್ರಹ್ಮಾಂಡವನ್ನೇ ಹೊತ್ತ ಆ ಒಂದು ವಿಶ್ವರೂಪ ಊರ ನಡೂಲಿರೊ ಕಾಲುದಾರಿ ದಾಟಿ ಬಸವಣ್ಣ, ಮಾರಮ್ಮರ ಗುಡಿ ಮುಂದಾಸಿ,ಪುಡ್ಸಮ್ಮಗೌಡ್ರ ಹಿತ್ಲ ಬಳುಸಿ, ಗದ್ದೆ ಬದಿಗೆ ಇಳುದು, ಮತತ್ತೋಪಿನ ದೀಣೆ ಹತ್ತಿ, ಗುಡ್ಡದ ಕಡಿಕೆ ನಡಕಂದು ಹೋಗದು.

ಹಂಗೆ ಅದು ಊರಾಚಿಗಿರ ಗುಡ್ಡದಲ್ಲಿ ತಳವೂರಿ ಕುಂತು ಬಂಡೆಬಂಡೆನೆ ಚಚ್ಚಿ ಜಲ್ಲಿ ಮಾಡಿ ಅಕ್ಕಿರಾಗಿಯ ಕಣದಲ್ಲಿ ಗುಡ್ಡೆ ಮಾಡಿದ ಥರಕ್ಕೆ ....ಕಲ್ಲುವಡ್ಡರ ಸರ್ಸಮಕ್ಕೆ ನಿಂತಕಂದು ಜೀವನ ದಕ್ಕುಸ್ಕಂದ ಹೆಣ್ಣಹೆಂಗಸಾಗಿತ್ತು.ಬಿಸ್ಲುಬ್ಯಾಗೆ ಅನ್ನದೆ, ಆ ಓಬವ್ವ... ಸಿನಿಮಾದ ಜಯಂತಿಗತ್ತುಪಟ್ಟು ಚಂದವಾಗಿ, ದಿನನಿತ್ಯಲೂ ಸುತ್ತಿಗೆಹೊತ್ತು ಗುಡ್ಡಕ್ಕೂ ಮನೆಗೂ ತಿರುಗಿದ ಓಬವ್ವ ಚಿತ್ರದುರ್ಗದ ಕ್ವಾಟೆನ ಕಾಪಾಡಕಂದಂಗೆ ಲಕ್ಷ್ಮಮ್ಮ ತನ್ನ ಕುಲವ ಊರಲ್ಲಿ ನೆಲೆ ಮಾಡದಂಥ ಗಟ್ಟಿಗ್ತಿ.

ಆ ಕಲ್ಲುಗುಡ್ಡದಲ್ಲಿ ಕುಂತವಳೆ ಗಂಡಸ್ರು ಸರಿಸಮಕ್ಕೆ ದಿನಕ್ಕೆ ಹತ್ತು ಮಂಕ್ರಿ ಬೇಬಿ ಜಲ್ಲಿ ಒಡದು, ಬ್ಯಾಸಯದ ಕಸುಬು ಕೈ ಸೋತು ದುಸುಕದಾಗ ಬ್ಯಾರೆ ಕಸಬಲ್ಲೂ ಜೀವ ಹೆಂಗೆ ಹೊರಿಬೋದು ಅನ್ನೋದನ್ನ ತೋರ್ಸುಕೊಟ್ಟ ಈ ಗೌಡಗಿತ್ತಿ ಊರಲ್ಲೇ ಮೊಟ್ಟಮೊದಲ್ನೇಳಾಗಿದ್ಲು. ಹಂಗೇ 'ಬಟ್ಟಬಜಾರಿ' ಅಂತ ಹೆಸ್ರು ತಗಂಡು ಒಂದ್ಸಲ ಊರ ಕಂಬಕ್ಕೆ ಕಟ್ಟಾಕಸಂಡಿದ್ದ ಅವಳು..... ಕೇಳದಂಥ ಭೂಮ್ತಾಯಿ ತೂಕದ ನ್ಯಾಯವಾದ ಮಾತಿಗೆ ಊರೋರು ತುಟಿಪಿಟಕ್ಕನ್ನದೆ ಹಗ್ಗದ ಕಟ್ಟು ಬಿಚ್ಚಿ ಅವಳ ಕೈಲಿ ಹೀನಾಮಾನ ಉಗುಸ್ಕಂದಿದ್ರು. ಆಮೇಲ್ಯಾರೂ ಊರಲ್ಲಿ ಅವಳ ತಂಟೆಗೆ ಹೋಯ್ತಿರ್ನಿಲ್ಲ.

ಹಿಂಗೆ ಆವತ್ತು ಏನಾತಪ್ಪ ಅಂದ್ರೆ ಅವಳ ಕೋಳಿಹುಂಜ ಒಂದು ಕಳದು ಹೋಗೀತೆ. "ಹ್ಯಾಟೆ ಕಾವಿ ಕುಂತ ಸಮಯಕ್ಕೆ ಸರ್ಯಾಗಿ ಕೋಳಿ ಮುರ್ಕಂದವ್ರಲ್ಲ ನನ್ನ ಹಾಟುಗಳ್ರು ಅದು ಇನ್ನ ಮರಿ ಮಾಡತೀತಾ?ಹುಂಜ ಇಲ್ಲದೇಯಾ.... ಥೂ ಇವ್ರ ಮಕ್ಕ ತಿನ್ನ..... " ಅಂತ ಅವಳು ತನ್ನ ಹಾಟು ಕೊಳೆ ಎಲ್ಲನೂ ತಂದು ತಿಂದೋರ ಬಾಯಿಗೆ ಹುಯ್ಯೋ ಹೊತ್ತಿಗೆ ಸರ್ಯಾಗಿ ಈ ಶೇಖ ಬಾವಿಕಟ್ಟೆ ಕಡಿಂದ ಬತ್ತಿದ್ದ. ಬಂದನಾ...ನೋಡತಾನೆ. ಈ ಓಬವ್ವ ಶೇಖನ ಮನೆ ಹಿತ್ಲು ಹೊಕ್ಕಂಡು ಬಯ್ತಲೆ ಏನೋ ಹುಡುಕಾಡತಾವಳೆ. ಇವನಗೂ ರೋಷ ಹತ್ತಿ ಬೇಲಿ ತಾವಕೆ ಬಂದು ನಿಂತ್ಕಂದ. ಇವ್ಳು ಕಳಕಂದಿರ ಕೋಳಿಯ ಕೆಂಪು ಹಳದಿ ಕಪ್ಪು ಬಣ್ಣದ ಪುಕ್ಕ ಸಿಕ್ಕೇಬುಟ್ಟೀತೆ.

ಆಗ ಏನಾಗೀತೆ? ಶೇಖರವ್ವನ ಮಡ್ಲಲ್ಲಿ ಓಬವ್ವನ ಮನೆ ಪಾವುಗೋಳಿ ಮೂರು ಪಿಯ್ಯ ಪಿಯ್ಯ ಅಂತಿದ್ವಂತೆ. ಓಬವ್ವನ ಕೈಗೆ ಮಾಲು ಸೈತ ಸಿಂಗಪುರದಮ್ಮ ಸಿಕ್ಕಹಾಕಂಡೇಬುಟ್ಟವಳೆ. 'ಅನ್ನ ಹಾಕಿ ಹಾಕಿ ಕಾಣದಂಗೆ ಹಿಡಕಂಡು ಮನೆ ಕೋಳಿ ವಳಿಕೆ ಬುಟ್ಕಂದ್ರೆ ಹೆಂಗೋ ಒಗ್ಗೋಯ್ತವೆ. ಅವ್ಳಿಗೆ ಗೊತ್ತಾಗಕ್ಕುಲ್ಲ' ಅಂತ ಶೇಖನವ್ವ ಚಿಗಳುರಮ್ಮನ ಹುನ್ನಾರ. ಅದ ನೋಡುದ್ದೆ ಇವ್ಳು ಅತ್ಲಾಗೆ ಧರೆಗೆ ಇಳ್ದುಹೋದ.

ತಕಳಪ್ಪ.... ಯಾಕೇಳುತೀಯಾ? ಶುರುವಾಯತು..... ಯುದ್ಧಾ..... ಊರೆಲ್ಲ ನಿಂತು ಯಾರ್ಯಾರ ಮನೇವ್ರು ಅವಳೀಗೆ ಅನ್ನೇಯ ಮಾಡವ್ರೆ ಅವ್ರೆಲ್ಲರ ಮಾನ ಕಾದ ಹೆಂಚಿನ ಮ್ಯಾಲೆ ಸಿಡಿಯೋ ಹುಳ್ಳಿಕಾಳ ಹುರ್ಗಾಳಂಗೆ ಪೋಲಿ ಬೈಗುಳ ಜತೇಲೆ ಪಟಗುಟ್ಟೋದ್ವು, ಅವ್ರೆಲ್ಲರ ಮರ್ಯಾದೆ ಥೋ..... ಹೋಗತ್ಲಾಗೆ! ಮುಂದ್ಲ ತೂತಿಂದ ಹೊರಟು ಹಿಂದ್ಲ ತೂತಿಂದ ಬಂದ್ವು. ರಾತ್ರೀ ಹೊತ್ನಲ್ಲಿ ಸೂರ್ಯಪ್ಪನ ಕಣ್ಣಿಗೆ ಕಾಣದಿರಂಗೆ ಹೆಂಗೋ ಒಂದಾಗಿ, ಗಂಡು ಹೆಣ್ಣು ತಮ್ಮ ಭಂಗಗೆಟ್ಟ ಬದುಕನ್ನ ನೀಗುಸಿ, ಅದರೊಳಗಿರ ಅಂದವ ಬಗದು, ಬದುಕಿನ ಬಟ್ಟೆ ಹಗುರಾಗೋ ಹಂಗೆ ಸುಖಪಟ್ಟು ಸಂಸಾರ ಮಾಡತಿದ್ದೋರು?

ಗದ್ದೆ ಹೊಲ ಮನೆ ಮರೇಲಿ ಜನರ ಕಣ್ಣಿಗೆ ಮರಮಾಚಿ ಕೂಡಕಂದು ಮೆಚ್ಚಾಡದೋರು... ಒಳಗೊಳಗೆ ಇದ್ದ ಸಂಬಂಧಕ್ಕೆ ನೋವುಂಡರೂ... ಮುಳ್ಳು ಮುರಕಂದು ಚಿಯ್ಯೋ ಅಂತ ಕಿರಗುಟ್ಟಕೊಂದು ನೊಯ್ಯೋ ಗಾಯಕ್ಕೆ ಇನ್ನೊಂದು ಮುಳ್ಳು ತಗಂಡು ಬಗದಂಗೆ....ಸಂಬಂಧ ಮತ್ತೆ ಮತ್ತೆ ಬೆಳಸೋರು, ಆಡೋರು ಆಡಕೊಳ್ಳಲಿ ಅನಕಂದು ಕೂಡಿಕೊಳ್ಳೋರು, ಮೂರ್ನು ಬಿಟ್ಟೋರು ಊರ್ಗೆ ದೊಡ್ಡವ್ರು ಅನ್ನಸ್ಕಳವರ್ಗೂ...ಹೆಚ್ಕಂಡ ಭಂಡರು ಎಲ್ಲರ ಮುಂದೆ ಪಂಚಾಯ್ತಿಗೆ ನಿಂತ್ಕಂದಾಗ ಪಡಿಪಾಟ್ಲು ಬೀಳತರಲ್ಲ ಹಂಗೆ.... ಓಬವ್ವ ಅರಹುವಂಥ ಸತ್ವದ ಮಾತಿಗೆ....ಕೇಳಸಕಂದ ಕಿವಿನೆ ಕೆಂಪಾಗಿ ಕಿವುಡಾಗೋ ಹಂಗೆ ಬುಗುರಿಯಂತೆ ತಿರುಗುಸುವ ಅವಳ ಬೈಗುಳ ಕೇಳಿ ಕಿವಿ ಮುಚ್ಕಂದು ತಲೆ ಬಗ್ಗುಸ್ಕಂದು ಅವ್ರು ಓಡೋಗ ಹಂಗೆ ಮಾಡಿದ್ದೆಯ... ಅತ್ಲಾಗಿ ಉಸ್ಸಪ್ಪಾ... ಅಂತ ಸೋತು ಹೋಗೋವರೆಗೂ ರಂಪಾಟ ಮಾಡಿ ಊರನೇ ಗಡಗಡನೆ ನಡುಗುಸ್ಬುಟ್ಟ ಆ ಬೈಗುಳದ ಪಾತ ಊರ ಮಕ್ಳ ಬಾಯಲ್ಲಿ ಮರಿದಿರೋ ಬಾಯಿ ಪಾತ ಆಗೋಗದು.

ಕೊನಿಗೆ ಆಗ ಚಿಗಳೂರಮ್ಮ.... "ತಗಳೆ ತಾಯಿ. ಅನ್ನ ಹಾಕ್ದೆ ಆಸೆ ಬಿದ್ಬುಟ್ಟು. ನಮ್ಮ ಮರಿಹ್ಯಾಟೇ ವಳಿಗೆ ಕೂಡಾಕ್ಕಂಡ್ರೆ ಗೊತ್ತಾಗಕ್ಕುಲ್ಲ ಅಂತ ಹಿಡಕಂದೆ ಕೋಳಿಮರಿಗಳಾ...ಆದ್ರೆ.... ದಿಟವಾಗ್ಲೂ ನಂಬೆ ನನ್ನ ತಾಯಿ... ನೀನು ದೇವ್ರ ಹೆಸರೇಳಿ ಬುಟ್ಟು ತರದು ಬುಟ್ಟಿರೋ ಆ ಕೋಳಿ ಹುಂಜನ್ನ ಮಾತ್ರವಾ..... ಆ ಬಾಣೇದೇವ್ರು ಸತ್ಯವಾಗ್ಲೂ...ಆಣೆ ಮಾಡಿ ಹೇಳ್ತೀನಿ, ಮುರಕಂದು ತಿನ್ನಿಲ್ಲ ನಾವು

ಅಯ್ಯೋ... ಅದ ತಿಂದಿರೋರು ಚಿಗಳೂರಮ್ಮನ್ ಮನೇವ್ರಲ್ಲ ಕಣಗೀ... ನಮ್ಮ ಹುಡ್ಗ ಮಂಜಣ್ಣ 'ನಾನೂ ಬತ್ತೀನಿ" ಅಂತ ಹಠ ಮಾಡಕಂಡು ನಿನ್ನೆ ದಿಸ ದನ ಕಾಯೋ ದೊಡ್ಡನ ಕುಟೆ ಹೋಗಿತ್ತ. ಬಾರೆ ಮ್ಯಾಲೆ ಕೋಳಿ ಬೇಯ್ಸ್ಕತಿದ್ವಂತೆ ದನಿನ ಹುಡ್ಲು. ಇದುಕ್ಕೂ ಎರಡು ತುಂಡು ತಿನ್ನಸೇ ಕಳಸವ್ರೆ. ನೀನು ಬೈದಾಡ್ವಾಗ ನಂಗೆ ಹೊಳದೋತು. ಅವ ಹೊಟ್ಟೊಡ್ಯಾ....ಊರನೇ ಬೇಯಸಕಂದು ತಿಂದ್ರೂ ಅವುಕ್ಕೆ ಸಾಕಾಗಕ್ಕುಲ್ಲ. ಚಿಗಳುರಮ್ಮಂದು ಕಳ್ಳ ಕೈ ಅಲ್ವಾ? ಅವ್ಳ ಮ್ಯಾಲೆ ದೂರು ಬರ್ಲಿ ಅಂತಲೇ ತಂದು ಅವ್ಳ ಬೇಲಿಗೆ ಪುಕ್ಕ ಹಾಕ್ಕವ್ರೆ, ಛತಾಮ್ ನನ್ ಮಕ್ಳು.... ತಂದು" ಆಗ ಓಬವ್ವ ಕೆನ್ನೆ ಕೆನ್ನೆ ಬಡಕಂಡ್ಲು.

ಮಾತ್ರವ....." ಅಂದು ಮನೆ ಬಾಗ್ಲು ಹಾಕ್ಕಂದು ಮರೆಯಾಗೋದ್ಲು. ಅಮ್ಯಾಕೆ ಜನೆಲ್ಲ ಮರೆಯಾದ್ರೂವೆ ಮರದ ಎಲೆಲಿ ನಿಂತಿರೋ ಮಳೆಹನಿ ಟಪ್ಪು ಗುಟ್ಕಂಡು ನಿಧಾನುಕ್ಕೆ ಸದ್ದು ಮಾಡದಂಗೆ ಬೈಗುಳ ಬಿಟ್ಟುಬಿಟ್ಟು ಹೆಂಚಿನ ಸಂದಿಂದ ಹಾರಿಬಂದು ಊರಿನ ಕಿವಿಗೆ ಬೀಳ್ತಲೇ ಇದ್ವು.

ಕೊನಿಗೆ... " ಥೂ ನನ್ನ ಹಾಟುಗಳ್ರಾ.... ರಾತ್ರಿನಾಗ ನನ್ ಕೋಳಿ ಮುರ್ಕಂದು ತಿಂದು ಇವತ್ತು ತಿಪ್ಪೆ ಬೆಳಿಸಿದ್ರಲ್ಲೋ..... ಏನು ಸಿಕ್ರೋ...ನಿಮಗೆ, ನನ್ ದ್ಯಾವ್ರು ನಿಮ್ಮ ಕಣ್ಣು ಹಿಂಗಸ್ಲಿ " ಅಂತವ ಬೈದು ಮಂಗಳ ಹಾಡುದ್ಲು. 'ಶೇಖಿನ ಅವ್ವಂದು ಕಳ್ಳಗಯ್ಯಿ' ಅಂತ ಲಕ್ಕಿ ನೀಲವ್ವರಿಬ್ರಾಳು ಮಾತಾಡಕತಿದ್ದ ತನ್ ಮನೇಲಿ ಕೂತು ಕೇಳುಸ್ಕಂಡಿತ್ತ ಮಣಿ. ಇದೆಲ್ಲನೂ ನಿಂತು ನೋಡುದ ಮ್ಯಾಲೆ ಮಣಿ ಬಾಲೆ ಮನೆ ವಳಗೆ ಬಂದಾಗ ಶೇಖನ್ನ ಕೇಳೇ ಬುಡತ.

" ಶೇಖ! ನಿಮ್ಮವ್ವನ್ನ ಬಯ್ಯುವಾಗ ನೀ ಸುಮ್ನೆ ಅರಗಾಗಿ ಬಂದಲ್ಲೋ..."

"ಅಯ್ಯಬ್ಬ ! ನಮ್ಮವ್ವ ಆ ಮೂರು ಕೋಳಿಮರಿಗೆ ಆಸ್ ಬಿದ್ದು ಮಡ್ಲು ಸಮೇತ ಲಕ್ಷ್ಮಕ್ಕನ ಕೈಗೇ ಸಿಕ್ಕು ಬಿದ್ದವಳೆ. ಇನ್ನ ಅವ್ಳ ಕುಟೆ ಮಾತಾಡಕ್ಕೆ ಆಯ್ತೀತಾ? ಈ ಊರಲ್ಲೇ ಅವಳೊಂದಿಗೆ ನ್ಯಾಯ ಮಾಡ ಅಂಥೋರು ಯಾರೂ ಇನ್ನೂ ಹುಟ್ಟಿಲ್ಲ . ಇನ್ನ ನಾ ಮಾತಾಡುದ್ರೆ ಬುಡತಾಳಾ? ಬೀಜ ಹಿಸುಕ್ಬುಡತಳೆ ಮಾತಲ್ಲೇಯ... ಇಂಥ ಬಾಯಾಳಿ ನಾನೆಲ್ಲೂ ಕಂಡಿಲ್ಲ ಕನವ್ವ. ಅದ್ಕೆ ಆ ರಾಜಣ್ಣ ಕುಡಕಬಂದು ಮಗ್ಲು ಮುರ್ಯೋ ಹೊಡದು ಇವಳ ಮಗ್ಲು ಮಲಗ್ಸದು"

ಆ ಮಾತ್ಗೆ ಅಲ್ಲೇ ಇದ್ದ ನೀಲವ್ವ....

" ಹೋಗು ಮೊದ್ಲು... ಎತ್ತಿಗೆ ನೀರು ಕುಡಸ್ಕಂಬರೋಗು. ಅವ್ರ ಸಂಸಾರ ಅವ್ರೇನಾರ ಮಾಡಕಳ್ಳಲಿ. ಅವ್ಳ ಸುದ್ದಿಗೆ ಯಾಕೆ ಹೋತಿರಪ್ಪ ನೀವು ಘನವಂತ್ರು. ಕಲ್ಲ್ ಹೊಡದು... ದುಡಕಂದು, ಮಕ್ಳ ಸಾಕ್ಕಂಡು, ಊರಲ್ಲಿ ಅವ್ಳೂ ಒಂದು ನೆಲೆಯಾದ್ಲಲ್ಲ! ಅದ ಹೇಳಬ್ಯಾಡಿ. ಹಗ್ಲಲ್ಳಿಲಿ ಅವ್ರಪ್ಪನ ಮನ್ಲಿ ಅವ್ಳ ಹೆಂಗೆ ಸಾಕಿದ್ರು ಗೊತ್ತ! ಒಬ್ಳೆ ಮಗ್ಳು ಅಂತವ ! ಅವ್ಳು ತವ್ರು ಅನಕಂದು ಅಲ್ಲೂ ಹೋಗ್ದೇಯ... ಊರೊಳಗೆ ಇಲ್ಲೂ ಯಾರ ಹಟ್ಟಿ ಬಾಗ್ಲಲ್ಲೂ ಬಂದು ನಿಂತ್ಕಳದೇಯ ಮಕ್ಳು ಸಾಕ್ಕಳದು ವಸಿ ಪಾಡೆನಪ್ಪ! ಪಾಯಿ! ಪಾಪ ನನ್ ಮಗ್ಳು! ಅವ್ನು! ರಾಜ ಮರ ಕುಯ್ಯಕೆ ಹೋತನಲ್ಲ.... ಬಂದ ದುಡ್ಡೆಲ್ಲನೂ ಕುಡದುಹಾಕಿ ಉಚ್ಚೆ ಹುಯ್ಯೋ ಆ ನನ್ಮಗಂಗೆ ಏನಾದ್ರೂ... ಸಂಸಾರದ ನೆದ್ರೀತಾ? ಏನು? ರಾಜಾ ಮೀಸೆ ಬ್ಯಾರೆ ಬುಟ್ಟೋನೆ... ಅದು ಬ್ಯಾರೆ ಕೇಡು? ನನ್ ಕಂಡ್ರೆ ಅತ್ಗವ್ವ...ಅಂತ ಆಸ್ಯಾಗವ್ನೆ. ಅದ್ ಬ್ಯಾರೆ ಮಾತು...." ಕತ್ಲಾತಿತ್ತು.

ಆಗಲಾಗಲೇ ತಗಳಪ್ಪ! ನೆನದೋರು ಮನದಲ್ಲಿ ಅನ್ನೋ ಹಂಗೆ.... ಹೊರಗಡಿಂದ ಬುಲಾವ್ ಬಂದೇ ಬುಡತು.

"ಅತ್ಗಮ್ಮ ನಮ್ಮನೆ ಲಕ್ಷುಮಿ ನೋಡುದ್ರಾ.... ಇವತ್ತು ಊರೊಳಗೆ ರಂಪಾಟ ಮಾಡುದ್ಲಂತಲ್ಲ! ಕಡೇಪ್ಯಾಟೇಲಿ ನಮ್ಮೂರರು ಬಂದು ಹೇಳುದ್ರು "ನಿನ್ನ ಹೆಂಡತಿ ಊರಲ್ಲಿ ಮ್ಯಾಳ ಕಟ್ಟವಳೆ ಕಣಪ್ಪ.... ಹೋಗ ನೋಡು. ಊರನೇ ಬೇಯುಸ್ತಾ ಅವ್ಳೆ " ಅಮ್ತವಾ... ಅಷ್ಟಿಗೆ ನಾನು ಈಗಲೀಗಲೇ ಹದ ಹಾಕುದ ಹ್ವಾದ್ರೆ.... ನನ್ನ ಹೆಸ್ರು ರಾಜನೇ ಅಲ್ಲ ಕನತ್ಗೆ.... " ಅಂತ ನೆಲದ ಕಡಿಗೆ ತೂರಮ್ಮ ಬಾರಮ್ಮ ಆಡತಾ ಮೀಸೆ ತಿರುವಕಂದ. ಆಗ.... ನೀಲವ್ವ ಮಾಯಮಂತ್ರಿ ಹಂಗೆ ಬಂದು ಮೆಟ್ಲು ಮ್ಯಾಲೆ ನಿಂತಕಂದು ಮಾತಾಡುದ್ರು.

" ನಂಗೊತ್ತಿಲ್ಲಪ... ನೀ ಹೊಡಿತೀಯಾ ಅಂತ ಎತ್ಲಾಗೆ ಹ್ವಾದ್ಲು ನೋಡಪ್ಪ! ನಾ ಕಾಣೆ... "

" ನೋಡತೀನಿ" ಅಂತ ಹಟ್ಟಿ ಧೂಳ ಎಬ್ಬುಸ್ಕಂದು ಕಾಲ ನೆಲಕ್ಕೆ ಸವ್ರುಕಂದು ಎಡವಿ ಬಿದ್ದಾಗ ?

" ಮೀಸೆ ಮಣ್ಣಾತಲ್ಲೋ " ಅಂತ ನೆಗಾಡಿದ ಶೇಖನ್ನ ದುರುದುರುನೆ ಕೆಂಡಗಣ್ಣ ಬುಟ್ಟು ತಿರುಗ್ನಿ ನೋಡದ.

" ಅಪ್ಪಾ.... ಕೆಂಡಗಣ್ಣ ಸಾಮಿ... ನಿನ್ ದಮ್ಮಯ್ಯ ಹೋಗಪ್ಪ... ನೀನು ನಿನ್ನ ಹೆಂಡ್ತಿ ಇಬ್ರು ಕುಟೆ ನಮ್ಗೆ ಊರೊಳೀಗೆ ಬೇಯಕ್ಕಾಗಕ್ಕುಲ್ಲ ಮಂತೆ.... " ಅಂತ ಕೈ ಮುಗುದ. ದುಬದುಬನೆ ಕಾಲೆಳಕಂಡು ಅವನು ಬಾವಿ ದಿಕ್ಕಿನ ಸಂದಿಲಿ ಮರೆಯಾಗಕ್ಕೂವೆ...ನೀಲವ್ವರ ಒಳಮನೆ ಮಹಡಿ ಮೆಟ್ಲು ಸದ್ದಾಗಕ್ಕೂವೆ... ಓಂದೇ ಆತು.

"ಥೂ! ನಿನ್ ಮನಿ ಕಾಯ್ವೋಗ... ಇಲ್ಲೇ ಇದ್ದೇನಗೀ.... ಮಾಡಿ ಹತ್ ಕುಂತಿದ್ದಾ....ಹೋಕ್ಕಳ್ಲಿ ಬಾರೆ. ಕಡ್ಲೆಕಾಳ ಬೇಸಿ ಹೂಸ್ಲಿ ಮಾಡಿದಿನಿ. ವಸಿ ತಿಂದೋಗು" ಅಂತ ನೀಲವ್ವರು ಅಡಿಗೆ ಮನಿಂದ ವರಾತ ಮಾಡದಾಗ ಗಂಟೆ ಮುಂಚೆಲೆ ರಣಚಂಡಿ ಹಂಗೆ ಬೀದೀಲಿ ಕಾಣತಿದ್ದ ಓಬವ್ವ ಈಗ ಕಣ್ಣಲ್ಲಿ ನೀರ ತುಂಬ್ಕಂದು, ಮುತ್ತುಗದೆಲೆ ಜೊನ್ನಿಲಿ ನೀಲವ್ವ ಹಾಕ್ಕೊಟ್ಟ ಕಾಳು ಹೂಸ್ಲಿಯ ಸೆರಗಿನ ಮರೆಲಿ ಹಿಡಕಂದು.... ಧುಕ್ಬುಸ್ತಾ... ಹೇಳಿದ್ಲು.

" ಯಾವ್ದೋ ಜನ್ಮದಲ್ಲಿ ನನ್ನ ಹೆತ್ತವ್ವಪ್ಪ ಆಗಿದ್ರೇನವ್ವ ನೀವ್ ಈ ಮನ್ಯೋರು. ಅದುಕ್ಕೆ ಆಪತ್ ಬಂದಾಗೆಲ್ಲ ಓಡು ಬಂದು ನಿಮ್ಮನೆ ಆರು ಮೆಟ್ಲ ಒಂದೇ ಏಟಿಗೆ ಹಾರಿ ಮಾಡಿ ಹತ್ತಿ ಹಿಂದ್ಲ ಅಟ್ಟಕ್ಕೆ ಹೋಗಿ ಕುಂತುಬುಡತೀನಿ. ಇದು ನನ್ ಮನೆನೆ ಕಣವ್ವ. ಮಗ್ಲು ಮೂಳೆ ಮುರಿಯೋ ಹೊತ್ನಲ್ಲಿ ನನ್ನ ಕಾಪಾಡಕಂಡು ಬಂದ ಮನೆ. ಅವ್ವ, ನೋಡವ್ವ ನೀನೇಯಾ... ನಾ ಮಳಲಿ ಗಿಡ್ಡಮ್ಮಂಗೆ ಬುಟ್ಟ ಕೋಳಿಯ ನಮ್ಮೂರ ಪಾಪ್ರ ನನ್ಮಕ್ಳು ತಿಂದ್ ಹಾಕವ್ರೆ"

" ಅಯ್ಯೋ... ಅದ ತಿಂದಿರೋರು ಚಿಗಳೂರಮ್ಮನ್ ಮನೇವ್ರಲ್ಲ ಕಣಗೀ... ನಮ್ಮ ಹುಡ್ಗ ಮಂಜಣ್ಣ 'ನಾನೂ ಬತ್ತೀನಿ" ಅಂತ ಹಠ ಮಾಡಕಂಡು ನಿನ್ನೆ ದಿಸ ದನ ಕಾಯೋ ದೊಡ್ಡನ ಕುಟೆ ಹೋಗಿತ್ತ. ಬಾರೆ ಮ್ಯಾಲೆ ಕೋಳಿ ಬೇಯ್ಸಕ್ಕತಿದ್ವಂತೆ ದನಿನ ಹುಡ್ಲು. ಇದುಕ್ಕೂ ಎರಡು ತುಂಡು ತಿನ್ನಸೇ ಕಳಸವ್ರೆ. ನೀನು ಬೈದಾಡ್ವಾಗ ನಂಗೆ ಹೊಳದೋತು. ಅವ ಹೊಟ್ಟೊಡ್ಯಾ....ಊರನೇ ಬೇಯಸಕಂದು ತಿಂದ್ರೂ ಅವುಕ್ಕೆ ಸಾಕಾಗಕ್ಕುಲ್ಲ. ಚಿಗಳುರಮ್ಮಂದು ಕಳ್ಳ ಕೈ ಅಲ್ವಾ? ಅವ್ಳ ಮ್ಯಾಲೆ ದೂರು ಬರ್ಲಿ ಅಂತಲೇ ತಂದು ಅವ್ಳ ಬೇಲಿಗೆ ಪುಕ್ಕ ಹಾಕ್ಕವ್ರೆ, ಥತಾಮ್ ನನ್ ಮಕ್ಳು.... ತಂದು" ಆಗ ಓಬವ್ವ ಕೆನ್ನೆ ಕೆನ್ನೆ ಬಡಕಂಡ್ಲು.

" ಅಯ್ಯವ್ವ! ನಿಮ್ಮನೆ ಮಂಜಣ್ಣನೂ ಎಳ್ಡು ಚೂರು ತಿಂತಂತ. ಅಯ್ಯೋ ಶಿವ್ನೇ.... ನಿಮ್ಮನೆ ಮಗ ನನ್ ಮಗನೇ ಅಲ್ವೇನವ್ವ... ತಪ್ಪಾತು. ತಪ್ಪಾತು. ಮಾರವ್ವ! ನನ್ ಬೈಗುಳ ಮರ್ತುಬುಡವ್ವ.... ನಿನ್ ಹೆಸ್ರಲ್ಲಿ ಇನ್ನೊಂದು ಕೋಳಿ ಹುಂಜವ ಪುಕ್ಕ ತೆರದು ಬುಟ್ಬುಡ್ತೀನಿ ಕಣೆ ತಾಯಿ, ನನ್ ಬೈಗುಳ ನಿನ್ ಹೊಟ್ಟೆಗೆ ಹಾಕ್ಕಬುಡವ್ವ. ಅವ್ವ..... ತಿಂಕಳ್ಳಲಿ ಬುಡವ್ವ. ತಿಂದ್ರೆ ತಿನ್ನಲಿ.... ನಿನ್ ಮಗ ತಿಂದೀತಲ್ಲ ಎಲ್ಡು ಚೂರ....ಅದೇ ನನ್ ಪುಣ್ಯ ಮಾತ್ರವಾ... ನನ್ನ ಭಾಗಕ್ಕೆ ನೀನೇ ಕಣ್ಣಿಗ್ ಕಾಣೋ ದೇವ್ರು, ಈ ಊರಗೆ ಬಂದು ಬಿದ್ದಾಗಿಂದಲೂ ನಮ್ಮವ್ವನ ನೆಪ್ಪಾದ್ರೆ ಸಾಕು, ನಾನಿಲ್ಲಿಗೆ ಓಟ ಬಿದ್ದು ಬಂದು ಬಿಡತೀನಿ. ಒಂದಿಸಕ್ಕಾದ್ರೂ ಮುಖ ತಿರುವ್ನಿಲ್ಲವ್ವ, ನೀನು!" ಅಂತವ ಮಾರಮ್ಮನ ಗುಡಿಗೆ ಕೈ ಮುಗುದು ಅವ್ಳು.....ಅವಳ ಕುರಿ ಕಳವಾಗಿದ್ದ ನೆಪ್ಪಿಗೆ ಹೋದ್ಲು.

" ಅವ್ವ, ನನ್ನ ಕುರಿಯ ಹಿಂಗೆ ಮೆಳ್ಳಳ್ಳಿಯೋರು ಹೊಡಕ ತಿಂದುದ್ರಲ್ಲ! ಪಟೇಲಪ್ಪ ಆವತ್ತು ಮೆಳ್ಳಳ್ಳಿಯೋರ ಆಲೂರ ಸಂತೆಲೆ ಪಂಚಾತಿಗೆ ಕರದು...ನನ್ನ ಎದುರುಗೆ "ಅಲ್ಲ! ಊರಿಂದೂರುಗೆ ಕಂಡರ ಮನೆ ಐದು ಕುರಿ ಪೋಲಿ ಬಿದ್ದು ಬಂದವೆ ಅಂತ ಕೂದು ಪಾಲಾಕ್ಕಂದಿದ್ದೇ ಕುಯ್ಕಂದು ತಿಂದು ನಿಮ್ಮೂರರು ತೇಗುದ್ರಲ್ಲ! ನೀವೆಂಥ ಘನಸ್ತ್ರಪ್ಪ! ನಾ ಕಾಣೆ " ಅಂದುದ್ದೇಯ.... ಆ ಊರರು ನಾಚಕಂಡು ತಪ್ಪೊಪ್ಗೆ ಕೊಟ್ಟು ನಂಗೆ ದಂಡ ಕಟ್ಟೊಟ್ರು. ಆ ದುಡ್ಡಲ್ಲೇಯ ಮತ್ತೆ ಸಂತೇಲಿ ನಾಕುಮರಿ ತಂದೆ. ಸಾಕ್ಕಂದೆ. ಇವಾಗಾ ಅದೇ ಆಡು ಒಂದು ಹಿಂಡಾಗವೆ. ನನ್ ದೊಡ್ಮಗ ಅಲ್ಲೇ ಗುಡ್ದದ್ ಪಕ್ಕದಲ್ಲೇ ಕಾಯಕತೀತೆ. ನೋಡವ್ವ... ಪಟೇಲಪ್ಪ ಹೆಂಗೆ ಆಲೂರ ಸಂತೇಲಿ ಸುದ್ದಿ ತಂದು ಇದ ತೀರ್ಮಾನ ಮಾಡಕೊಡತು. ಹೆಜ್ಜೆಜ್ಗೆ ನಿಮ್ಮಂಥೋರು ನಮ್ ಬೆನ್ ಹಿಂದೆ ನಿಲ್ಲದಿದ್ರೆ ಇಲ್ಲಿ ಇವತ್ತು ನಾನು ನಿಂತು ಒಂದು ವಕ್ಲಾತಿದ್ದನಾ ... ಈ ಊರೊಳಗೆ "

ಶೇಖ ಅಷ್ಟೊತ್ತು ನಾಚಕಂಡು ಮಾತಾಡದೆ ನಿಂತಿದ್ದವನು ಈಗ ಬಾಯ್ಬುಟ್ಟ

" ಆವತ್ತು ಪತ್ತಾಗಿದ್ದು ಹೆಂಗೆ ಗೊತ್ತ.... ಸಂತೇಲಿ ಎಣ್ಣೆ ಬುಡುಸ್ಕಬರಕೆ ನಾನೂ ಹೋಗಿದ್ದನಾ... ಮೆಳ್ಳಳ್ಳಿಯೋನು ಒಬ್ಬ ಬಂದು ನನ್ ತಾವ ನಿಂತಿದ್ದನಾ... ಆಗ... ಹಿಂದಗಡಿಂದ ಒಬ್ಬ... " ಏ ಕಿವಿಚೊಟ್ರೆ... " ಅಂತ ಅವನ ಹತ್ರಕ್ಕೆ ಬಂದು

" ಅಲ್ಲ ಕನ್ರೋ....ಅದ್ಯಾವ ಊರಪ್ವೋ... ಒಂದು ಹಿಂಡು ಆಡು ನಿಮ್ಮೂರಿಗೆ ಕದ್ದು ಮೇಯ್ಕಬಂದ್ರೆ ನೀವು ಪಾಲಾಕ್ಕಂದು ತಿಂಕಂಬುಟ್ರಂತಲ್ಲ. ಆಗ್ಬೋದೇನಪ್ಪ.... ನಿಂಗೂ ಹೇಳಬ್ಯಾಡ ಅಂತವ ಕಿವಿಚೊಟ್ರೆಯ ಬೆಂಕೀಲಿ ಸುಟ್ಟು ಕೊಟ್ರಂತಲ್ಲ.ನಿಂಗೆ ಕಿವಿಚೊಟ್ರೆ ಬಾಡ ಬೆಂಕಿಲಿ ಸುಟ್ಕೊಟ್ರೆ ಪ್ರಾಣವಂತಲ್ಲೋ.... ನಮ್ ನೆಂಟ್ರು ಆವತ್ತು ನಿಮ್ಮೂರಲ್ಲಿದ್ರಂತಲ್ಲ! " ಅಂದ್ರು ನೋಡಪ್ಪ, ನಂಗೆ ವಾಸ್ನೆ ಹೊಡದುದ್ದೇ ವಾಟ ಬಿದ್ದು ಹೋಗಿ ನಾನು ಪಟೆಲಣ್ಣನ ಕರಕ ಬಂದೇಬುಟ್ಟೆ! ಅವ್ರಿರತಾಕೆ. ಆಗ ಅವ್ರು ಬಾಯ್ಬುಟ್ರು. ನಾನೇ ಗೊತ್ತೇನಕ್ಕ ಹಿಡಕೊಟ್ಟುದ್ದು. ನೀನಿದ್ದಲ್ಲ ಅವತ್ತು!" ಅಂದ.

ಲಕ್ಷ್ಮಿ "ನನ್ನ ಹಂಗೆ ರಾವು ಹಿಡುಸ್ತರೆ ಕನೋ ಎಲ್ಲ ಸೇರಕಂಡು.... ಬೇಜಾರಾ ಪಟ್ಕಬ್ಯಾಡ ಕಣಪ್ಪ ನನ್ ಸಂಕಟಕ್ಕೆ ಎಲ್ರನ್ನೂ ಬಯ್ತೀನಿ. ನನ್ ಮನೆ ಕಡ್ಡಿ ಚಿಟಕ ಅಂದ್ರೂ ನಂಗ ಮಾತ್ರ ಆಗಕ್ಕುಲ್ಲ... ಏನ್ ಮಾಡತೀಯಾ..... ಇನ್ನ ತಗ! ನನ್ ಗಂಡ ಕುಡದ ಸಾರಾಯಿಯ ಉಚ್ಚೆ ಹೂದು ಬಂದು ಬರಿ ಹೊಟ್ಟೇಲಿ ಮಲಗಿರ್ತನೆ ಮಗ್ಲಾಗಿ. ಅವನ ನೆಣ ಕೊಚ್ಚಿ ಮಗ್ಲಿಗೆ ಹರವಾ... ನಾನೋಗಿ ಆ ಪಾಪ್ ನನ್ ಮಗಂಗೂ, ಮಕ್ಕಿಗೂ ಬೇಯ್ಸ ಹಾಕತೀನಿ" ಅಂತವ ಕಾಳ ಜೊನ್ನೆಯ ಸೆರಗ ಮುಚ್ಕಂಡು, ಬೆಳಗಿಂದ ಹಾಕಿದ್ದ ವೇಷ ಬಿಚ್ಚಿಟ್ಟರೋ ಊರು ಮಾರಮ್ಮ ಇದ್ದಕ್ಕಿದ್ದಂಗೆ ಗರತಿ ಆಗಿ ತನ್ ಗೊತ್ತಿಗೆ ನಡಕ್ಕಂಡು ಹೋದಂಗೆ ಚಿಕ್ಕೇಗೌಡ್ರು ಮನೆ ಬಳಸ್ಕಂಡು ಅವ್ಳ ಮನೆ ದಿಕ್ಕಲ್ಲಿ ಮರೆಯಾದ್ಲು.



**(ಹಾಸನದ ಕಡೆಯ ಆಲೂರು ಮೂಲದ ಸುಜಾತಾ ಕನ್ನಡದ ವಿಶಿಷ್ಟ ಗದ್ಯ ಬರಹಗಾರ್ತಿ ಮತ್ತು ಕವಯತ್ರಿ)**

# ಸಾಹಿತ್ಯ, ಸಿನಿಮಾ, ನಾಟಕ, ಅಭಿನಂದನೆ, ಮೌಲ್ಯಮಾಪನ ಇತ್ಯಾದಿ: ಕೆಲ ಬಿಡಿ ಟಿಪ್ಪಣಿಗಳು

## ವೈದೇಹಿಯವರಿಗೆ ಗೌರವ ಸಮರ್ಪಣೆ



ಕಳೆದ ಡಿಸೆಂಬರ್ ಒಂದರಂದು ಶಿವಮೊಗ್ಗದಲ್ಲಿ ಹಿರಿಯ ಲೇಖಕಿ ವೈದೇಹಿ ಅವರಿಗೆ 'ಇರುವಂತಿಗೆ; ಎಬ ಗೌರವ ಗ್ರಂಥವನ್ನು ಅರ್ಪಿಸಲಾಯಿತು. ವೈದೇಹಿ ಶಿವಮೊಗ್ಗದ ಸೊಸೆ. ಹಾಗೇ ಗೌರವ ಗ್ರಂಥದ ಸಂಪಾದಕ ಮಂಡಳಿಯ ಮತ್ತು ಗೌರವ ಗ್ರಂಥ ಸಮಿತಿಯ ಹೆಚ್ಚಿನವರೂ ಶಿವಮೊಗ್ಗದವರೇ. ಹಾಗಾಗಿ ಸಮಾರಂಭ ಶಿವಮೊಗ್ಗದಲ್ಲೇ ನಡೆಯಿತು. ಅಂದು ಸಮಾರಂಭ ನಡೆದ ಪತ್ರಿಕಾ ಭವನದ ಸಭಾಂಗಣ ವೈದೇಹಿಯವರ ಸಾಹಿತ್ಯದ ಅಭಿಮಾನಿಗಳಿಂದ ತುಂಬಿ ತುಳುಕಿತು., ಶಿವಮೊಗ್ಗದ ಜನರಲ್ಲದೆ ರಾಜ್ಯದ ಬೇರೆ ಬೇರೆ ಊರುಗಳಿಂದಲೂ_ವಿಶೇಷವಾಗಿ ಮಂಗಳೂರಿನಿಂದ-ಅವರ ಸಾಹಿತ್ಯಾಭಿಮಾನಿಗಳು ಬಂದಿದ್ದರು.

ವೈದೇಹಿಯವರಿಗೆ ಈಗ ಎಪ್ಪತ್ತೈದು ತುಂಬಿದೆ. ಆದರೆ ಅವರೊಂದಿಗೆ ಮಾತಾಡಿದಾಗ ಹಾಗೇನೂ ಅನ್ನಿಸದು. ಅವರಿಗೆ ಇಬ್ಬರು ಮೊಮ್ಮಕ್ಕಳಿದ್ದಾರಾದರೂ ಅವರು ಹೆಚ್ಚು ತಾಯಿಯಂತೆ ಕಾಣುತ್ತಾರೆಯೇ ಹೊರತು ಅಜ್ಜಿಯಂತಲ್ಲ! ಆದರೆ ಅವರ ಸಾಹಿತ್ಯ ವೈವಿಧ್ಯದ ರಾಶಿ ನೋಡಿದರೆ ಇಷ್ಟು ಸಾಹಿತ್ಯ ರಚಿಸಲು ಅಜ್ಜಿಯೇ ಆಗಿರಬೇಕು ಎಂದು ಮಾತ್ರ ಅನಿಸದಿರದು. ಓರ್ವ ಗೃಹಿಣಿಯಾಗಿ ಅವರು ಮಾಡಿರುವ ಸಾಹಿತ್ಯದ ಕೆಲಸದ ಗಾತ್ರ ನೋಡಿದರೆ ಗಾಬರಿಯಾಗುವುದು. ಇನ್ನು ಅದರ ಗುಣಮಟ್ಟ ನೋಡಿದರೆ ಆಧುನಿಕ ಕನ್ನಡ ಸಾಹಿತ್ಯಕ್ಕೆ ಅವರು ನೀಡಿರುವ ಹೊಸದೊಂದು ಬಗೆಯ ಸ್ತ್ರೀ ಸಂವೇದನೆ ಅವರ ವಿಶಿಷ್ಟ ಸೃಜನಶೀಲತೆಯ ದ್ಯೋತಕವೇ ಆಗಿದೆ. ಅವರ ಕಾವ್ಯ, ಮಕ್ಕಳ ನಾಟಕ, ಜೀವನ ಚರಿತ್ರೆ, ಕಾದಂಬರಿ, ಅನುವಾದಗಳ ಮಾತಿರಲಿ, ಸಣ್ಣಕಥೆಗಳ ಮೂಲಕ ಪುಟ್ಟಮ್ಮತ್ತೆ ಮತ್ತು ಅವರ ಮೊಮ್ಮಗಳು, ಸೌಗಂಧಿ, ಗುಲಾಬಿ, ಅಮ್ಮಚ್ಚಿ, ಮೀನಾಕ್ಷತ್ತೆ, ರತ್ನರಂತಹ ಪುರುಷರು ಮುಟ್ಟಿನೋಡಿಕೊಳ್ಳುವಂತಹ ಸ್ತ್ರೀ ಪಾತ್ರಗಳನ್ನು ಕನ್ನಡ ಸಮಾಜಕ್ಕೆ ನೀಡಿದವರು ಅವರು. ಇಂಥವರಿಗೆ ಈಗ ಅವರ ಅಭಿಮಾನಿ ಓದುಗ ವರ್ಗ ಗೌರವವನ್ನು ಸಲ್ಲಿಸದೆ ಇನ್ನಾವಾಗ ಸಲ್ಲಿಸಬೇಕು?

ಆದರೆ ಈ ಗೌರವ ಸಮರ್ಪಣೆಯ ಮೇಲೆ ಹಲವರ ಕಾಕದೃಷ್ಟಿಯೂ ಬಿದ್ದಿತೆಂಬುದು ವಿಷಾದಕರ ಸಂಗತಿ. ಈ ಬಗ್ಗೆ ಕೆಲವರು 'ಪ್ರಗತಿಪರತೆ'ಯ ಹೆಸರಿನಲ್ಲಿ ತಮ್ಮ ಫೇಸ್‌ಬುಕ್ ಬರಹಗಳಲ್ಲಿ ಅನುಚಿತ ಮಾತುಗಳನ್ನಾಡಿದ್ದಾರೆ. ವೈದೇಹಿ ಆಳ್ವಾಸ್ ನುಡಿಸಿರಿಯ ಅಧ್ಯಕ್ಷತೆ ವಹಿಸಿದ್ದಲ್ಲದೆ ಆಳ್ವಾಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ನಡೆದ ಒಂದು ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದ ಸಭೆಗೆ ಹೋಗಿ ಆಳ್ವಾರ ಪರ ಮಾತಾಡಿದರೆಂಬುದು ಇವರ ಆಕ್ಷೇಪಣೆ. ಆದರೆ ಯಾರು ಯಾವುದರ ಅಧ್ಯಕ್ಷತೆ ವಹಿಸಬೇಕು ಅಥವಾ ಬಾರದು ಎಂದು ನಿರ್ಧರಿಸಲು ಇವರು ಯಾರು? ನಿಮಗೆ ಆಳ್ವಾ ಕೆಟ್ಟವರು ಎನ್ನಿಸಿಬಿಟ್ಟಿತು, ಹಾಗಾಗಿ ಮಿಕ್ಕವರೆಲ್ಲರೂ ಇವರ ಫತ್ವಾ ಅನುಸರಿಸಬೇಕು! ಇನ್ನು ವೈದೇಹಿಯವರು ಆ ಸಭೆಗೆ ಏಕೆ ಹೋದರು ಮತ್ತು ಅಲ್ಲಿ ಏನು ಮಾತಾಡಿದರು ಎಂಬುದನ್ನು ತಿಳಿದಾದರೂ ಇವರು ಫತ್ವಾ ಹೊರಡಿಸಿದ್ದಾರೆಯೇ? ಓರ್ವ ವ್ಯಕ್ತಿಯ ಒಂದು ವರ್ತನೆಯನ್ನು ತಮ್ಮ ನೈತಿಕ ಪೋಲೀಸ್‌ಗಿರಿಯ ಕುರುಡು ಕಾಣಲಾಗದ ಒಂದಲ್ಲ, ಹಲವು ಕಾರಣಗಳು ನಿರ್ಧರಿಸುತ್ತವೆ ಎಂಬ ಸರಳ ಸತ್ಯವನ್ನು ಅರಿಯಲಾಗದವರ ಪ್ರಗತಿಪರತೆ ಕೇವಲ ಕೂಗುಮಾರಿತನವಾಗಿ ಕುಬ್ಜಗೊಂಡಿರುತ್ತದೆ. ಇವರು ಗೌರವ ಸಮಾರಂಭವನ್ನು ಧಿಕ್ಕಾರ ಹೇಳಿ ಆರಂಭಿಸಿ ಎಂಬ ಸೂಚನೆಯನ್ನೂ ನೀಡಿದ್ದರಂತೆ! ಇದು ಕೂಗುಮಾರಿತನವನ್ನೂ ಮೀರಿದ ವಿಕ್ಷಿಪ್ತತೆಯೇ ಹೌದು. ಸಾಧಕಿಯೊಬ್ಬರನ್ನು ಅವರ ಇಳಿ ವಯಸ್ಸಿನಲ್ಲಿ ಗೌರವಿಸುವ ಸಂದರ್ಭದಲ್ಲಿ ಇಂತಹ ಮಾತುಗಳಿಗೆ ಎಡೆಕೊಡುವುದು ಶುದ್ಧ ಅಸಭ್ಯತೆ ಮಾತ್ರ ಎನಿಸುತ್ತದ. ಗೌರವ ಗ್ರಂಥ ಸಮಿತಿಯ ಓರ್ವ ಸದಸ್ಯನಾಗಿ ಇದನ್ನೆಲ್ಲ ಬರೆಯಬೇಕಾಯಿತು.

ಈ ಎಲ್ಲ ರಾದ್ಧಾಂತ ನಡೆದ ಫೇಸ್‌ಬುಕ್ ವಗೈರೆ ವೇದಿಕೆಗಳ ಒಟ್ಟು ಹೆಸರಾದ ಸಾಮಾಜಿಕ ಮಾಧ್ಯಮಗಳನ್ನು ನಮ್ಮ ದೇವನೂರ ಮಹಾದೇವ ಸುಮ್ಮಸುಮ್ಮನೆ ಬಯಲು ಶೌಚಾಲಯ ಎಂದು ಕರೆದಿದ್ದಾರೆಯೆ? ಈ ಬಯಲು ಶೌಚಾಲಯದ ಕೊಳಕು-ದುರ್ವಾಸನೆಗಳನ್ನು ತಾಳಲಾಗದೆ ನಾನು ಬಹು ಹಿಂದೆಯೇ ಅಲ್ಲಿಂದ ದೂರವಾದೆ. ಆದರೆ ನನ್ನ ಪತ್ನಿಗೆ ಅದು ಹಲವು ರೋಗಗಳ ಆಗರ, ಅತ್ತ ಸುಳಿಯಬೇಡ ಎಂದು ಎಷ್ಟು ಹೇಳಿದರೂ, ಅಲ್ಲಿ ಒಂದಿಷ್ಟು ನೀರು-ಫಿನಾಯಲ್ ಸುರಿದು ಬರುತ್ತೇನೆ ಎಂದು ಮತ್ತೆ ಮತ್ತೆ ಅಲ್ಲಿಗೆ ಹೋಗುತ್ತಿರುತ್ತಾಳೆ. ಅವಳೇ ನೊಂದು ವೈದೇಹಿ ಪ್ರಕರಣವನ್ನು ನನಗೆ ಹೇಳಿದ್ದು.

## ವಿಜಯಮ್ಮನವರ ಮುಡಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಗರಿ



ವಿಜಯಮ್ಮನವರು ಎಂದೇ ಜನಪ್ರಿಯರಾದ ಡಾ. ವಿಜಯಾ ಅವರಿಗೆ ಅವರ ಆತ್ಮಕತೆ 'ಕುದಿ ಎಸರು'ಗಾಗಿ ೨೦೧೯ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ದಿನಕ್ಕೆರಡು ಮೂರು ಪ್ರಶಸ್ತಿಗಳು ಪ್ರಕಟವಾಗುತ್ತಿರುವ ಈ ದಿನಗಳಲ್ಲಿ ಯಾವ ಪ್ರಶಸ್ತಿಗೂ 'ಸಂಭ್ರಮ'ದ ಶೋಭೆ ಇಲ್ಲದಾಗಿರುವಂತಾಗಿದ್ದರೂ ವಿಜಯಮ್ಮನವರನ್ನು ಈ ಪ್ರಶಸ್ತಿಗೆ ಅಭಿನಂದಿಸಲು ಕಾರಣವಿದೆ. ಈ ಪುಸ್ತಕ ಏನಕ್ಕಲ್ಲದಿದ್ದರೂ ಇದು ಇಂದು ಹೆಚ್ಚು ವಾಚಾಳಿಯಾಗಿ ಸಮತೋಲನ ಕಳೆದುಕೊಂಡಿರುವ 'ಜನಪ್ರಿಯ' ಸ್ತ್ರೀವಾದಕ್ಕೆ ವಿಶ್ವಾಸಾರ್ಹತೆ ಒದಗಿಸಬಲ್ಲ ಒಂದು ಕ್ರಿಯಾಶೀಲತೆಯ ಮಾದರಿಯನ್ನು ಒದಗಿಸುತ್ತದೆ ಎಂಬುದಕ್ಕಾಗಿ. ನನಗೆಂದೂ, ಅವರ ಈ 'ಕುದಿ ಎಸರು' ಸೇರಿದಂತೆ ವಿಜಯಮ್ಮನವರ ಬರವಣಿಗೆ ಅಷ್ಟಾಗಿ ಇಷ್ಟವಾಗಿಲ್ಲ. ಅವರ ಪತ್ರಕರ್ತ ಬರವಣಿಗೆಯೂ ಸೇರಿದಂತೆ. ಎಲ್ಲದರಲ್ಲಿ ಹಸಿ ಹಸಿ, ಎತ್ತರದ ದನಿಯ ಭಿನ್ನಮತೀಯ ನಿಲುವು ಎದ್ದು ಕಾಣುತ್ತದೆ. ಆದರೆ ಒಂಟಿ ಹೆಣ್ಣಾಗಿ ಅವರು ತಮ್ಮ ಬದುಕನ್ನು ಕಟ್ಟಿಕೊಂಡ ಬಗೆ, ಮಕ್ಕಳನ್ನು ಸಾಕಿ ನಿಲ್ಲಿಸಿದ ಬಗೆ, ತಾವು ಕೈಗೊಂಡ ಎಲ್ಲ ಸಾರ್ವಜನಿಕ ಚಟುವಟಿಕೆಗಳಲ್ಲಿ ಪ್ರದರ್ಶಿಸಿದ ದಿಟ್ಟತನ, ಪರಿಶ್ರಮ, ಪಾರದರ್ಶಕತೆ ಮತ್ತು ಪ್ರಾಮಾಣಿಕತೆ ಅವರನ್ನು ನಮ್ಮ ವಿಶಿಷ್ಟ ಮಹಿಳಾ ಹೋರಾಟಗಾರ್ತಿಯನ್ನಾಗಿ ಮಾತ್ರವಲ್ಲ ನಮ್ಮ ವಿಶ್ವಾಸಾರ್ಹ ಸಾಂಸ್ಕೃತಿಕ ವಕ್ತಾರರನ್ನಾಗಿಯೂ ಮಾಡಿದೆ. ಇದೆಲ್ಲದರ ದಾಖಲೆಯಾಗಿ (ಇದಿನ್ನೂ ಅಪೂರ್ಣವೇ ಆದರೂ) ನಾನು ಅವರ ಈ ಪುಸ್ತಕವನ್ನು ಪರಿಗಣಿಸಿ ಅವರನ್ನು ಅಭಿನಂದಿಸುವೆ.

ಇಲ್ಲಿ ಇನ್ನೂ ಒಂದು ಮಾತು ಹೇಳಬೇಕು. ವಿಜಯಮ್ಮನವರ ಈ ಪುಸ್ತಕದೊಂದಿಗೆ ಅಂತಿಮ ಸುತ್ತಿನಲ್ಲಿ ಪ್ರಶಸ್ತಿಗಾಗಿ ಸ್ಪರ್ಧಿಸಿದ್ದ ಪುಸ್ತಕಗಳಲ್ಲಿ ನನ್ನ ಪ್ರಕಾರ ಎರಡು ಮೂರಾದರೂ ಸಾಹಿತ್ಯ ಕೃತಿಗಳಾಗಿ ಈ ಪುಸ್ತಕಕ್ಕಿಂತ ಒಳ್ಳೆಯವಿದ್ದವು. ಆದರೆ ಈ ಪ್ರಶಸ್ತಿ ಆಯ್ಕೆಗಾಗಿ ಅಕಾಡೆಮಿ ರೂಪಿಸಿರುವ ಚಕ್ರವ್ಯೂಹದಂತಹ ವಿಧಾನ ಯಾವ ಉದ್ದೇಶಕ್ಕಾಗಿ ಈ ಚಕ್ರವ್ಯೂಹವನ್ನು ರಚಿಸಲಾಗಿದೆಯೋ ಅದನ್ನೇ ಭಂಗಗೊಳಿಸುವಂತಿದೆ ಎಂದಷ್ಟೇ ಇಲ್ಲಿ ಹೇಳಿದರೆ ಸಾಕು.

## ಗಿರೀಶ್ ಕಾಸರವಳ್ಳಿ-೭೦



ಮೊನ್ನೆಮೊನ್ನೆಯುವರೆಗೂ ಯುವ ನಿರ್ದೇಶಕರೆಂದು ಗುರುತಿಸಲ್ಪಡುತ್ತಿದ್ದ ಗಿರೀಶ್ ಕಾಸರವಳ್ಳಿಯವರಿಗೆ ಈಗ ೭೦ ವರ್ಷ ಎಂದಾಗ ನನ್ನ ವಯಸ್ಸಿನ ಅರಿವೂ ಆಗಿ ತೆಪ್ಪಗಾಗಬೇಕಾಯಿತು! ಅವರ ಮೊದಲ ಚಿತ್ರ 'ಘಟಶ್ರಾದ್ಧ' ರಾಷ್ಟ್ರ ಪ್ರಶಸ್ತಿಗಾಗಿ ಪ್ರಶಸ್ತಿ ಸಮಿತಿಯ ಮುಂದೆ ಪ್ರದರ್ಶಿತವಾದಾಗ ನಾನು ಅದರ ಕನ್ನಡೇತರ ಸದಸ್ಯರಿಗೆ ಅನುವಾದಾಕನಾಗಿ ಅಲ್ಲಿದ್ದೆ. ಚಿತ್ರ ನೋಡಿದ ನಂತರದಲ್ಲೇ ನಾನು ಕೆ.ವಿ. ಸುಬ್ಬಣ್ಣನವರಿಗೆ ಈ ಚಿತ್ರಕ್ಕೆ ಸ್ವರ್ಣ ಕಮಲ ಹೆಚ್ಚೂಕಡಿಮೆ ಖಚಿತ ಎಂದು ಪತ್ರ ಬರೆದಿದ್ದೆ. ಸಮಿತಿ ಸದಸ್ಯರೂ ಅದರ ರಾಜಿಯಿಲ್ಲದ ಮಾಧ್ಯಮ ನಿಷ್ಠೆಯನ್ನು ಗಮನಿಸಿ ಶ್ಲಾಘನೆಯ ಸುರಿಮಳೆಗೈದಿದ್ದರು. ಅವರ ಹಿನ್ನೆಲೆಯ ಬಗ್ಗೆ ವಿಚಾರಿಸಿದ್ದರು. ಭಾರತೀಯ ಚಿತ್ರರಂಗ ಸತ್ಯಜಿತ್ ರಾಯ್, ಋತ್ವಿಕ್ ಘಟಕ್, ಮೃಣಾಲ್ ಸೇನ್ ಮುಂತಾದ ಹಿರಿಯರ ನಂತರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಮ್ಮೆಪಡಬಹುದಾದ ಯುವ ನಿರ್ದೇಶಕನ್ನು ಕಂಡುಕೊಂಡಿರುವ ಬಗ್ಗೆ ಖುಷಿಯನ್ನೂ ವ್ಯಕ್ತಪಡಿಸಿದ್ದರು. ಆದರೆ ಬಹಳ ವರ್ಷಗಳ ನಂತರ ನಾನು 'ಘಟಶ್ರಾದ್ಧ' ಕಥೆಯನ್ನೇ ಆಧರಿಸಿದ 'ದೀಕ್ಷಾ' ಎಂಬ ಹಿಂದಿ ಚಿತ್ರ ನೋಡಿದಾಗ ಕಾಸರವಳ್ಳಿಯವರ

ಸಂವೇದನಾ ಲೋಕದ ಸೀಮಿತತೆಯೂ ಅರಿವಿಗೆ ಬಂತು ಎಂಬುದು ಬೇರೆ ವಿಷಯ.

ನಂತರ ಗಿರೀಶ್ ಹಲವಾರು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಚಲಚಿತ್ರಗಳಲ್ಲಿ ಕಲಾತ್ಮಕ ಮತ್ತು ವ್ಯಾಪಾರಿ ಎಂಬ ವಿಭಾಗೀಕರಣವಿಲ್ಲ ಎಂದು ವಾದಿಸಿದ್ದಾರೆ. ಆದರೆ ಇವರ ಎಲ್ಲ ಚಿತ್ರಗಳನ್ನೂ ಕಲಾತ್ಮಕ ಎಂದು ಗುರುತಿಸಿಯೇ ಜನ ನೋಡಿ ಮೆಚ್ಚಿದ್ದಾರೆ ಅಥವಾ ತಿರಸ್ಕರಿಸಿದ್ದಾರೆ. ಆದರೆ ಗಿರೀಶರನ್ನು ನಾನು ಕಲಾತ್ಮಕ ಅನ್ನುವುದಕ್ಕಿಂತ ಹೆಚ್ಚಾಗಿ ಸಿನಿಮಾ ಭಾಷೆಯ ವ್ಯಾಕರಣಶಾಸ್ತ್ರದ ಬಹು ನಿಷ್ಠಾವಂತ ವಿದ್ಯಾರ್ಥಿಯೆಂದು ಕರೆಯಬಯಸುವೆ. 'ಘಟಶ್ರಾದ್ಧ' ಸೇರಿದಂತೆ ಅವರ ಸಿನಿಮಾಗಳು ಪರಿಣಾಮದಲ್ಲಿ ನಿಜವಾದ ಅರ್ಥದಲ್ಲಿ ಕಲೆ ಎನ್ನಿಸಿಕೊಂಡವು ಕಡಿಮೆ ಎಂದೇ ನನ್ನ ಅನ್ನಿಸಿಕೆ. ಏಕೆಂದರೆ ಅವರ ಯಾವ ಸಿನಿಮಾಗಳಲ್ಲಿಯೂ ಅಂತಿಮ ಪರಿಣಾಮದಲ್ಲಿ 'ದರ್ಶನ'ದ ಮಿಂಚು ಹೊಳೆಯುವುದಿಲ್ಲ. ಇದಕ್ಕೆ ಕಾರಣ ಅವರು ಸಿನಿಮಾ ಭಾಷೆಯ ವ್ಯಾಕರಣದ ಬಗ್ಗೆ ಹೊಂದಿರುವ ಅತಿ ಬದ್ಧತೆ ಮತ್ತು ಕೆಲವು 'ನುಡಿಗಟ್ಟು'ಗಳ ಅತಿ ಬಳಕೆ. ನಾನು ನೋಡಿರುವ ಅವರ ಸಿನಿಮಾಹಗಳ ಪೈಕಿ ನನಗೆ ನಿಜವಾಗಿ ಇಷ್ಟವಾದ ಚಿತ್ರಗಳೆಂದರೆ 'ಮೂರು ದಾರಿಗಳು', (ಇದನ್ನು ಮೆಚ್ಚಿ ನಾನು 'ಲಂಕೇಶ್ ಪತ್ರಿಕೆ'ಗಾಗಿ ಬರೆದ ವಿಮರ್ಶೆಯನ್ನು ಲಂಕೇಶ್ ಬದಲಿಸಿ ನನ್ನ ಹೆಸರಲ್ಲೇ ಪ್ರಕಟಸಿದರು!) 'ಮನೆ', 'ತಾಯಿ ಸಾಹೇಬ' ಮತ್ತು 'ಬಣ್ಣದ ವೇಷ'. 'ತಬರನ ಕತೆ', 'ನಾಯಿ ನೆರಳು;,'ಕೂರ್ಮಾವತಾರ' ಇವರ ಸಂವೇದನೆಗಳ ಸ್ಥೂಲತೆಗೆ ಸಾಕ್ಷಿಯಂತಿವೆ.. ಇನ್ನು ಇವರು ಕೆಟ್ಟ ಕಥೆಯೊಂದನ್ನು ಒಳ್ಳೆಯ ಸಿನಿಮಾ ಮಾಡುವ ಮತ್ತು ಒಳ್ಳೆಯ ಕಥೆಯನ್ನು ಕೆಟ್ಟ ಸಿನಿಮಾ ಮಾಡುವ ಪ್ರತಿಭೆಯನ್ನೂ ಹೊಂದಿದ್ದಾರೆ ಎಂಬುದು ಕ್ರಮವಾಗಿ 'ಆಕ್ರಮಣ' ಮತ್ತು 'ಗುಲಾಬಿ ಟಾಕೀಸ್' ಸಿನಿಮಾಗಳಿಂದ ತಿಳಿಯಬಹುದು. ರಾಯ್ ನಂತರದ ಭಾರತೀಯ ಸಿನಿಮಾದ ಕೆಲವೇ ಅತ್ಯುತ್ತಮ ನಿರ್ದೇಶಕರೆಂದು ಗುರುತಿಸಲ್ಪಡುವ ಕಾಸರವಳ್ಳಿ ಇಂತಹ ನಿಷ್ಠುರ ವಿಮರ್ಶೆಯನ್ನು ಹಾದೇ ತಮ್ಮ ಹಿಂದೆ ರಾಯ್ ಜೊತೆಯಲ್ಲಿ ಘಟಕ್ ಅವರೂ, ಹೆಗಲೆಣೆಯಾಗಿ ಅಡೂರು ಮತ್ತು ದಿ. ಅರವಂದ್ ಇದ್ದಾರೆಂಬ ಅರಿವಿನಲ್ಲಿ ನೆಟ್ಟಗೆ ನಿಲ್ಲಬಲ್ಲರು. ಗಿರೀಶರಿಂದ ಅವರ 'ಶ್ರೇಷ್ಠ' ಎನ್ನುವುದು ಇನ್ನೂ ಹೊರಬರಬೇಕಿದೆ; ಬರುತ್ತದೆ ಎಂಬ ನಿರೀಕ್ಷೆ ನನ್ನದು.

## ಮೋಹನರಾಮರ ಗಿರೀಶ್ ಕಾರ್ನಾಡ್ ಪುರಾಣ



ಎನ್.ಕೆ. ಮೋಹನರಾಂ ನನ್ನ ಹಾಗೆಯೇ ೬೦–೭೦ರ ದಶಕದ ಕನ್ನಡ ಸಾಂಸ್ಕೃತಿಕ ಲೋಕದ ಅಟಕ್ಕುಂಟು ಲೆಕ್ಕಕ್ಕಿಲ್ಲದ ಪಳಯುಳಿಕೆಗಳಲ್ಲೊಬ್ಬರು. ನಾನಾದರೋ ಆ ಲೋಕದ ಪಾರ್ಶ್ವರಂಗದಲ್ಲಷ್ಟೇ ನಿಂತು ಅಲ್ಲಿನ ಘಟನಾವಳಿಯನ್ನು ಕುತೂಹಲದಿಂದ ನೋಡುವ ಪ್ರೇಕ್ಷಕ ಮಾತ್ರನಾಗಿದ್ದರೆ, ಮೋಹನರಾಂ ಅದರ ಮಧ್ಯೆಯೇ, ವಿಶೇಷವಾಗಿ ಬೆಂಗಳೂರಿನ ಹವ್ಯಾಸಿ ರಂಗಭೂಮಿಯ ತೆರೆಯ ಮರೆಯಲ್ಲಿ ಕ್ರಿಯಾಶೀಲರಾಗಿದ್ದ ವ್ಯಕ್ತಿ. ಅದು ಬೆಂಗಳೂರಿನ, ಹಾಗಾಗಿ ಕನ್ನಡದ ಹವ್ಯಾಸಿ ರಂಗಭೂಮಿ ತನ್ನೆಲ್ಲ ಸೃಜನಶೀಲ ಪ್ರಯೋಗಗಳೊಂದಿಗೆ ಸ್ಫೋಟಗೊಳ್ಳುತ್ತಿದ್ದ ಕಾಲ. ಹಾಗಾಗಿ ಈ ಪ್ರಯೋಗಶೀಲತೆಯ ಎಲ್ಲ ವೇಷಗಳನ್ನು, ವೇಷಧಾರಿಗಳನ್ನು ಹತ್ತಿರದಿಂದ ಬಲ್ಲ ಇವರು ಅರೆ ಕ್ರಿಯಾಶೀಲ ಮತ್ತು ಅರೆ ಪ್ರೇಕ್ಷಕನಾಗಿ ದ್ವಂದ್ವ ಪಾತ್ರದಲ್ಲಿ ತಾವು ಕಂಡ ಈ ಚರಿತ್ರೆಯನ್ನು ತಮ್ಮದೇ 'ಇದ್ದುದನ್ನು ಇದ್ದಂಗೆ' ಹೇಳುವ ಶೈಲಿಯಲ್ಲಿ ದಾಖಲಿಸಿರುವ 'ಕರ್ಟನ್ ಕಾಲ್‌ಗೆ ಲೈಟೇ ಬರಲಿಲ್ಲ' ಎಂಬ ಪುಸ್ತಕವನ್ನು ಓದುತ್ತಿರುವಾಗಲೇ ಇಷ್ಟೇ ಉದ್ದಧ ಶೀರ್ಷಿಕೆಯ 'ಖರೆ ನಾಟಕಕಾರ ಆಗಲೇ ಇಲ್ಲ; ಗಿರೀಶ್ ಕಾರ್ನಾಡ್' ಎಂಬ ಅವರ ಹೊಸ ಪುಸ್ತಕ ನನ್ನನ್ನು ತಲುಪಿ ಇನ್ನಷ್ಟು ಕುತೂಹಲ ಕೆರಳಿಸಿತು.

ಹೆಸರೇ ಸೂಚಿಸುವಂತೆ ಇದು ಗಿರೀಶ್ ಕಾರ್ನಾಡರ ರಂಗಭೂಮಿ ಜೀವನ ಕುರಿತ ಪುಸ್ತಕ. ಮುಖ್ಯವಾಗಿ ಇದು ಕಾರ್ನಾಡರು ನಿಧನರಾದಾಗ ಮಾಧ್ಯಮಗಳಲ್ಲಿ ಬಿಂಬಿತವಾದ ಅವರ 'ಸಾಧನೆ', ನಿರ್ದಿಷ್ಟವಾಗಿ ಅವರ ಬಗೆಗಿನ ವಿವೇಕ ಶಾನಭಾಗರ 'ಬಹುರೂಪಿ' ಕೃತಿಯಲ್ಲಿನ ಬರಹಗಳನ್ನು ನೆಪವಾಗಿಟ್ಟುಕೊಂಡು ಅವರ ರಂಗ ಸಾಧನೆಗಳನ್ನು ಕುರಿತ ಮೋಹನರಾಂ ಮಾಡಿರುವ ಒಂದು ನಿಷ್ಠುರ ಮೌಲ್ಯಮಾಪನವಾಗಿದೆ. ಇದರಲ್ಲಿ ಕಾರ್ನಾಡರ ನಾಟಕಗಳ ಪಠ್ಯ ಮತ್ತು ಪ್ರದರ್ಶನಗಳನ್ನು ತಮ್ಮ ಅಭಿಪ್ರಾಯಗಳಲ್ಲದೆ ಲಂಕೇಶ್, ಅನಂತಮೂರ್ತಿಯವರೂ ಸೇರಿದಂತೆ ಅವರ ಸಮಕಾಲೀನರ ಅಭಿಪ್ರಾಯಗಳ ಬೆಂಬಲದೊಂದಿಗೆ, ಅವು ಹೇಗೆ ದುರ್ಬಲವಾಗಿವೆ ಎಂದು ವಾದಿಸುತ್ತಾ ಕಾರ್ನಾಡರು ಹೇಗೆ ತಮ್ಮ ಅಖಿಲ ಭಾರತ ರಾಜಕಾರಣದ ಮೂಲಕ ಕೀರ್ತಿ–ಪ್ರಶಸ್ತಿ–ಅಧಿಕಾರ–ಸ್ಥಾನ–ಮಾನಗಳನ್ನು ಚಂಪಾ ಭಾಷೆಯಲ್ಲಿ ಹೇಳುವುದಾದರೆ 'ಹೊಡಕೊಂಡರು' ಎಂದು ಸಾಬೀತು ಮಾಡುವ ಪ್ರಯತ್ನ ಮಾಡಲಾಗಿದೆ. ಹೀಗೆ ಮಾಡುವಲ್ಲಿ ಸ್ವತಃ ಕಾರ್ನಾಡರ ಆತ್ಮಕತೆ ಮತ್ತು ಬಿಡಿ ಲೇಖನಗಳೂ ಸೇರಿದಂತೆ ಲೇಖಕರು ಬಳಸಿರುವ ಆಕರಗಳ ವೈವಿಧ್ಯ ಮತ್ತು ಅವರ ನೆನಪಿನ ಶಕ್ತಿಯ ಅಗಾಧತೆ ಯಾರಿಗಾದರೂ ಬೆರಗು ಹುಟ್ಟಿಸುವಂತಿದೆ.

ಕಾರ್ನಾಡರನ್ನು 'ಸ್ವಾರ್ಥ, ಆತ್ಮರತಿ, ದ್ವೇಷ, ಮತ್ಸರ, ಸಣ್ಣತನಗಳ ಹೆಮ್ಮರ'ವೆಂದು ಉದಾಹರಣೆಗಳ ಸಹಿತವಾಗಿ ಇವರು ಮಂಡಿಸುವ ವಾದದಲ್ಲಿ ಹುರುಳಿಲ್ಲ ಎಂದು ಹೇಳಲಾಗದಾದರೂ ಇಡೀ ಪುಸ್ತಕ ಈ ಪುಸ್ತಕದಲ್ಲೇ ಪರೋಕ್ಷವಾಗಿ ಸೂಚಿತವಾಗಿರುವ ಕಾರಣವೊಂದಕ್ಕಾಗಿ ಅವರ ಮೇಲೆ ಸೇಡು ತೀರಿಸಿಕೊಳ್ಳುವ ಶೈಲಿಯಲ್ಲಿ ರಚಿತವಾಗಿದ್ದು ಕಾರ್ನಾಡರು ಮಾಡಿದರೆಂದು ಲೇಖಕರು ಹೇಳುವ ರಾಜಕಾರಣಕ್ಕೆ ಇದು ಪ್ರತಿ ರಾಜಕಾರಣವಾಗಷ್ಟೇ ಕಾಣುವಷ್ಟು ಏಕಪಕ್ಷೀಯವಾಗಿದೆ ಎಂದು ಹೇಳಲೇಬೇಕು. ಹಲವು ಕಡೆ ಇವರ ವಾದ ವಿರೋಧಾಭಾಸಗಳಿಂದ ಕೂಡಿದ್ದು ಇವರ ಮೌಲ್ಯಮಾಪನ ವಿಶ್ವಾಸಾರ್ಹತೆ ಪ್ರಶ್ನಾರ್ಹವೆನಿಸಿಕೊಳ್ಳುತ್ತದೆ.. 'ಹಯವದನ' ನಾಟಕದ ದೌರ್ಬಲ್ಯವನ್ನು ಸೂಚಿಸಲು ಆ ನಾಟಕದ ಬಗ್ಗೆ ಲಂಕೇಶ್ ಬರೆದ ವಿಮರ್ಶೆಯಲ್ಲಿನ 'ಸಾಮಾಜಿಕ ತಲ್ಲಣ'ಗಳ ಗೈರು ಹಾಜರಿಯ ಮಾತನ್ನು ಸ್ವತಃ ಲಂಕೇಶರ ಆವರೆಗಿನ ನಾಟಕಗಳಿಗೂ ಅನ್ವಯಿಸಿ ಹೇಳಿ ಅವನ್ನು ತಳ್ಳಿಹಾಕಬಹುದಲ್ಲವೆ? ಅದು 'ಲೇಖಕ ಮತ್ತು ಕಲಾವಿದರ ಒಕ್ಕೂಟ' ರಚನೆಯ ಕಾಲವಾಗಿದ್ದು, ಅದರಿಂದ ಪ್ರಭಾವಿತರಾದ ನಂತರವಷ್ಟೇ ಲಂಕೇಶರೂ 'ಸಾಮಾಜಿಕ ತಲ್ಲಣ'ಗಳ ಕಡೆ ಗಮನ ಹರಿಸಿದ್ದಲ್ಲವೆ? ಹಾಗೆ ನೋಡಿದರೆ ಸಾಮಾಜಿಕ ತಲ್ಲಣಗಳನ್ನು ಒಳಗೊಳ್ಳದ ಸಾಹಿತ್ಯ ಒಳ್ಳೆಯದಾಗಿರಲಿಕ್ಕೆ ಸಾಧ್ಯವೇ ಇಲ್ಲ ಎಂದು ಸಾರಾಸಗಟಾಗಿ ಹೇಳಲಾಗದಲ್ಲವೆ?

ಹಾಗೇ ಕಾರ್ನಾಡರ ನಾಟಕಗಳಲ್ಲಿನ ಹಲವು ಕೊರತೆಗಳ ನಡುವೆಯೂ ಅವುಗಳಲ್ಲಿ ಒಂದು ಅನನ್ಯ ಶಕ್ತಿ ಇದೆ ಎಂಬ ಲಂಕೇಶರ ಮಾತುಗಳನ್ನು ಉಲ್ಲೇಖಿಸಿಯೂ ಮೋಹನರಾಂ ಅದು ಮುಖ್ಯವಲ್ಲವೆಂಬಂತೆ ತಮ್ಮ ಏಕಪಕ್ಷೀಯ ವಾದವನ್ನು ಮುಂದುವರೆಸಿಕೊಂಡು ಹೋಗುತ್ತಾರೆ. ಇದಕ್ಕೆ ಇನ್ನೊಂದು ಉದಾಹರಣೆ, ಕಾರ್ನಾಡರ ಎಲ್ಲ ನಾಟಕಗಳ ಅಂಗಛೇದ ಮಾಡಿ ಅವುಗಳ ವೈಫಲ್ಯವನ್ನು ಹೇಳುತ್ತಾ ಹೋಗುವ ಇವರು 'ತುಘಲಕ್' ವಿಷಯ ಬಂದಾಗ ತಮ್ಮ ವಾದವನ್ನು ಹಾರಿಸಿಕೊಂಡು ಹೋಗಿ ಬಿಡುತ್ತಾರೆ! ಇನ್ನು 'ತಲೆದಂಡ' 'ಒಂದಿಷ್ಟು ಗುಣಗಳನ್ನಾದರೂ ಪಡೆದಿದ್ದರೆ ಅದು ವಸ್ತುವಿನಿಂದ' ಎಂಬ ಚೌಕಾಶಿ ತುಂಬಿದ ವಾದವನ್ನು ಮಂಡಿಸುತ್ತಾ ಲೇಖಕರು ಇಲ್ಲಿ ಈ ನಾಟಕವನ್ನು ತಮ್ಮ ಪ್ರಿಯ ನಾಟಕಕಾರ ಲಂಕೇಶರ 'ಸಂಕ್ರಾಂತಿ'ಗೆ ಹೋಲಿಸುವ ಚೌಕಾಶಿಯಲ್ಲಿ ತಮ್ಮ ಆ ವಾದವನ್ನು ಕಳೆದುಕೊಂಡಿದ್ದಾರೆ. ನಿಜ, ಗಿರೀಶ್ ಕಾರ್ನಾಡರ ಸಾರ್ವಜನಿಕ ಬಿಂಬ ಅರ್ಧ ಮಾತ್ರ ಅವರ ನಾಟಕಕಾರ ಪ್ರತಿಭೆಯಿಂದ ನಿರ್ಮಾಣವಾಗಿದ್ದರೆ, ಇನ್ನರ್ಧ ಈ ಪುಸ್ತಕದ ಲೇಖಕರೇ ಉದಾಹರಣೆಗಳ ಸಹಿತ ವಿವರಿಸಿರುವಂತೆ ಕಾರ್ನಾಡರಂತೆಯೇ ಬೇರು ಭದ್ರವಿಲ್ಲದ ಅಖಿಲ ಭಾರತ ಮಟ್ಟದ ಪ್ರತಿಷ್ಠಿತ ವರ್ಗದ ಹಿತಾಸಕ್ತಿಗಳು ನಿರ್ಮಿಸಿದ್ದು. ಅಂದ ಮಾತ್ರಕ್ಕೆ 'ತುಘಲಕ್' ಮತ್ತು ತಲೆದಂಡ'ದಂತಹ ಕನ್ನಡಕ್ಕೇ ಅನನ್ಯವೆನಿಸುವ ನಾಟಕಗಳನ್ನು ನೀಡಿದ ನಾಟಕಕಾರನನ್ನು ಹೀಗೆ ಹೊಸ ಹೊಸ ವಾದಗಳನ್ನು ಕಟ್ಟಿಕೊಂಡು ತಿರಸ್ಕರಿಸುತ್ತಾ ಹೋಗುವುದು ತೀರಾ ಅನುಚಿತ

ಮೋಹನರಾಂ ಬೆಂಗಳೂರಿನ ಹವ್ಯಾಸಿ ರಂಗಭೂಮಿ ಕುರಿತ ಮೇಲೆ ಉಲ್ಲೇಖಿಸಿದ ಪುಸ್ತಕದಂತೆಯೇ ಈ ಪುಸ್ತಕ ಕಾರ್ನಾಡರ ಕಥೆ ಹೇಳುವುದರ ಜೊತೆಗೇ ಆ ಕಾಲದ ಸಾಹಿತ್ಯಿಕ–ಸಾಂಸ್ಕೃತಿಕ ಚರಿತ್ರೆಯನ್ನು ಸದರಿ ಲೇಖಕರ ವಾರೆಗಣ್ಣಿನ ನೋಟದಲ್ಲಿ ಹಿಡಿದುಕೊಡುವ ಪ್ರಯತ್ನವನ್ನೂ ಮಾಡುತ್ತದೆ. ಆದರೆ ಹಾಗೆ ನೋಡುವಾಗ ಕೆಲವು ಸತ್ಯಗಳು ವಾರೆಯಾಗಿರುವುದು ಸಹಜವೇ ಆಗಿದೆ. ಉದಾಹರಣೆಗೆ ಭೈರಪ್ಪನವರ ಕಾದಂಬರಿಗಳ ಹುಸಿತನ ಗೊತ್ತಾಗತೊಡಗಿದ್ದು ಬಂಡಾಯ ಸಾಹಿತ್ಯ ವಿಮರ್ಶೆಯಿಂದ ಎಂಬ ಅವರ ನಂಬಿಕೆ. ಮೋಹನರಾಂ ಮೊದಲಿಗೇ ಹೇಳಿದ ಹಾಗೆ ಆ ಕಾಲದ ಹವ್ಯಾಸಿ ರಂಗಭೂಮಿಯಲ್ಲಿ ಎಲ್ಲವನ್ನೂ ನೋಡಿದ ಮನುಷ್ಯ. ಆದರೆ ಎಲ್ಲವನ್ನೂ ನೋಡಿದ್ದೇನೆಂದಾಕ್ಷಣ ಅದೆಲ್ಲವನ್ನೂ ಅರ್ಥ ಮಾಡಿಕೊಂಡಿದ್ದೇನೆ ಎಂದಲ್ಲವಲ್ಲ? ಅದು ಗೊತ್ತಿದ್ದರೆ ಈ ಬರಹದ ರಭಸ ಮತ್ತು ವಿಮರ್ಶೆಯ ಎಲ್ಲೆ ಮೀರಿದ ತೀರ್ಪುಗಾರಿಕೆಯ ಮಾತುಗಳು ಕಡಿಮೆಯಾಗುತ್ತಿದ್ದವು. ಮೋಹನರಾಂ ಅಂತವರು ತಾವು ಕಂಡ ಕಾಲದ ಸಮಾನಾಂತರ ಚರಿತ್ರೆ ಬರೆಯಬಹುದು; ಬರೆಯಬೇಕು ಕೂಡ. ಏಕೆಂದರೆ ಬಿ.ವಿ. ಕಾರಂತ, ಕಾರ್ನಾಡ, ಲಂಕೇಶ್ ಅಥವಾ ಸಿಜಿಕೆಯಂತಹವರು ಬರೆದ 'ಆಧಿಕೃತ' ಚರಿತ್ರೆಗಳು ಯಜಮಾನಿಕೆಯ ಕುರುಡುಗಳನ್ನು ಒಳಗೊಂಡಿರುವ ಚರಿತ್ರೆಗಳಾಗಿರಬಹುದು. ಆದರೆ ಮೋಹನರಾಂರಂತಹ ಕಾರ್ಯಕರ್ತರೂ ಹಾಗೇ ಬರೆದರೆ ಹೇಗೆ? ಈ ಪುಸ್ತಕ ಬೇಕಿದ್ದರೆ ಸಂಪರ್ಕಿಸಿ: ೦೮೦೨೩೩೪೯೫೫

**–ಡಿ.ಎಸ್. ನಾಗಭೂಷಣ**

ಧರ್ಮವಿಚಾರ ಪುಟ

# ವಿವೇಕವಾಣಿ



**ಹಿಂದೂ ಧರ್ಮವನ್ನು ಆದಿ ಅಂತ್ಯಗಳಿಲ್ಲದ ನಿತ್ಯನೂತನವಾದದ್ದು ಎಂಬರ್ಥದಲ್ಲಿ ಸನಾತನ ಧರ್ಮವೆಂದು ಕರೆದು ಅದನ್ನು ನಿರ್ದಿಷ್ಟ ಮತಾಚಾರಗಳಿಂದ ಮುಕ್ತಗೊಳಿಸಿ ಆಧುನಿಕಗೊಳಿಸಿದ ವಿವೇಕಾನಂದರನ್ನು ಇಂತಹ ಹಿಂದೂ ಧರ್ಮವನ್ನು ಇತರ ಮತಗಳಂತೆ ಏಕರೂಪಿ ನಂಬಿಕೆ ಮತ್ತು ಇಕ್ಕಟ್ಟಾದ ಮತಾಚಾರಗಳೊಂದಿಗೆ ಬಂಧಿಸುವ ರಾಜಕಾರಣ ಮೇಲುಗೈ ಪಡೆಯುತ್ತಿರುವ ಸಂದರ್ಭಧಲ್ಲಿ ಮತ್ತೆ ಓದುವುದು ಅವಶ್ಯಕ. ಅವರ ಶಿಕಾಗೋ ಭಾಷಣವನ್ನು ಎತ್ತರದ ದನಿಯಲ್ಲಿ ಉದ್ಘೋಷಿಸುವ ಹಿಂದೂ ಮತಾಭಿಮಾನಿಗಳು ಆ ಭಾಷಣದಲ್ಲಿ ಅವರು ಹಿಂದೂ ಎಂಬುದು ಇತರ ಮತಗಳ ಪರಿಪ್ರೇಕ್ಷ್ಯದಲ್ಲಿಟ್ಟು ಮಿಕ್ಕೆಲ್ಲ ಮತಗಳಾದರೆ ಇದು ಹೇಗೆ ಸರ್ವಾವೃತವಾದ ಸಹಿಷ್ಣುತೆಯ ಚಿರಂತನ ಧರ್ಮವೆನಿಸಿಕೊಳುತ್ತದೆ ಎಂಬುದನ್ನು ವಿವರಿಸಿರುವುದನ್ನು ಗಮನಿಸುವುದಿಲ್ಲ. ಈ ದೃಷ್ಟಿಯಿಂದ ಹಿಂದೂ ಧರ್ಮದ ಇಂತಹ ಒಂದು ನಿರ್ಣಾಯಕ ಲಕ್ಷಣವನ್ನು ವಿವರಿಸುವ ಒಂದು ಭಾಗವನ್ನು ಇಲ್ಲಿ ವಿವೇಕಾನಂದರ 'ಭಕ್ತಿ' ಎಂಬ ಭಾಷಣವೊಂದರಿಂದ ಆಯ್ದ ಭಾಗವನ್ನು ಇಲ್ಲಿ ನೀಡುತ್ತಿದ್ದೇವೆ. ಜನವರಿ ೧೨, ವಿವೇಕಾನಂದರ ಜನ್ಮ ದಿನ.**–ಸಂ.

ಪ್ರಪಂಚದಲ್ಲಿರುವ ಧರ್ಮಗಳೆಲ್ಲ ಉಪಾಸನಾ ದೃಷ್ಟಿಯಿಂದ ವಿಭಿನ್ನವಾದರೂ ಅವುಗಳ ಮೂಲರೂಪ ಒಂದೇ ಆಗಿದೆ. ಕೆಲವು ಕಡೆ ಜನರು ಗುಡಿಗಳನ್ನು ಕಟ್ಟಿ ಅಲ್ಲಿ ಪೂಜಿಸುವರು. ಕೆಲವು ಕಡೆ ಬೆಂಕಿಯನ್ನು ಪೂಜಿಸುವರು. ಕೆಲವು ಕಡೆ ವಿಗ್ರಹಕ್ಕೆ ಅಡ್ಡ ಬೀಳುವರು, ಮತ್ತೆ ಕೆಲವರು ದೇವರನ್ನು ನಂಬುವುದೇ ಇಲ್ಲ. ಅವರೆಲ್ಲರೂ ಸತ್ಯ. ಅವುಗಳ ಮೂಲ ಉದ್ದೇಶ ತತ್ತ್ವ ಮತ್ತು ಸತ್ಯ. ಅವುಗಳ ಮೂಲ ತತ್ತ್ವ ಮತ್ತು ಸತ್ಯ ಎಲ್ಲಾ ಒಂದೇ ಆಗಿರುವುದು. ಕೆಲವು ಧರ್ಮಗಳಲ್ಲಿ ದೇವರನ್ನು ಪೂಜಿಸುವುದಿಲ್ಲ. ಅವನಲ್ಲಿ ನಂಬಿಕೆಯೂ ಇಲ್ಲ. ಆದರೆ ಸತ್ಪುರುಷರನ್ನು ದೇವರಂತೆ ಪೂಜಿಸುವರು. ಭಕ್ತಿರೂಪವನ್ನು ತಾಳಿದ ಉಪಾಸನೆ ಎಲ್ಲಾ ಕಡೆಗಳಲ್ಲಿಯೂ ಪ್ರಬಲವಾಗಿದೆ. ಜ್ಞಾನಕ್ಕಿಂತ ಭಕ್ತಿಯನ್ನು ಪಡೆಯುವುದು ಸುಲಭ. ಜ್ಞಾನಕ್ಕೆ ಯೋಗ್ಯಕಾಲ ಬೇಕು. ಕಠಿಣ ಅಭ್ಯಾಸ ಮಾಡಬೇಕು. ಯೋಗವನ್ನು ಅಭ್ಯಾಸ ಮಾಡಬೇಕಾದರೆ ಒಬ್ಬ ಆರೋಗ್ಯವಾಗಿರಬೇಕು. ಸಂಸಾರದ ಆಸಕ್ತಿಯಿಂದ ದೂರವಿರಬೇಕು. ಯಾವಸ್ಥಿತಿಯಲ್ಲಿದ್ದರೂ ಭಕ್ತಿಯನ್ನು ಬಹಳ ಸುಲಭವಾಗಿ ಎಲ್ಲರೂ ಅಭ್ಯಾಸ ಮಾಡಬಹುದು. ಭಕ್ತಿಶಾಸ್ತ್ರವನ್ನು ಬರೆದ ಶಾಂಡಿಲ್ಯರು ಪರಮಪ್ರೇಮಸ್ವರೂಪನೇ ಭಕ್ತಿ ಎನ್ನುವರು. ಪ್ರಹ್ಲಾದನೂ ಹೀಗೆಯೇ ಹೇಳುವನು. ಒಬ್ಬನಿಗೆ ಒಪ್ಪತ್ತು ಊಟ ಸಿಕ್ಕದೆ ಇದ್ದರೆ ವ್ಯಾಕುಲ ಪಡುವನು. ಅವನ ಮಗ ಸತ್ತರೆ ಎಷ್ಟು ದಾರುಣ ದುಃಖಪಡುವನು! ನಿಜವಾದ ಭಕ್ತ ಭಗವಂತನಿಗೆ ಹಂಬಲಿಸುವಾಗ ಹೀಗೆಯೇ ವ್ಯಥೆಪಡುವನು, ಭಕ್ತಿಯ ಒಂದು ಗುಣವೇ ಮನಸ್ಸನ್ನು ಶುದ್ಧ ಮಾಡುವುದು. ಪರಮಾತ್ಮನ ಮೇಲೆ ಇಡುವ ದೃಢಭಕ್ತಿಯೊಂದೇ ಸಾಕು ಮನಸ್ಸನ್ನು ಶುದ್ಧ ಮಾಡುವುದಕ್ಕೆ "ಹೇ ದೇವರೆ, ಅನಂತ ನಾಮಗಳು ನಿನಗಿವೆ. ಪ್ರತಿಯೊಂದು ಹೆಸರಿನಲ್ಲಿಯೂ ನಿನ್ನ ಶಕ್ತಿ ತುಂಬಿದೆ. ಪ್ರತಿಯೊಂದು ಹೆಸರು ಯಾವುದೊ ವಿಭೂತಿಗೆ ಚಿಹ್ನೆಯಾಗಿದೆ." ಭಗವಂತನನ್ನು ನಾವು ಸದಾ ಚಿಂತಿಸಬೇಕು. ಹಾಗೆ ಮಾಡುವುದಕ್ಕೆ ಕಾಲದೇಶವನ್ನು ಪರಿಗಣಿಸಬೇಕಾಗಿಲ್ಲ.

ಸಾಧಕ ಬೇರೆ ಬೇರೆ ಹೆಸರುಗಳಿಂದ ಪೂಜಿಸುವ ದೇವರುಗಳೆಲ್ಲ ತೋರಿಕೆಗೆ ಭಿನ್ನ ವಿಭಿನ್ನವಾಗಿವೆ. ಒಬ್ಬ ತಾನು ದೇವರನ್ನು ಪೂಜಿಸುವ ರೀತಿಯೇ ಬಹಳ ಪ್ರಯೋಜನಕಾರಿ ಎಂದು ಭಾವಿಸುವನು. ಮತ್ತೊಬ್ಬ ಮುಕ್ತಿಗಳಿಸುವುದಕ್ಕೆ ತನ್ನ ಮಾರ್ಗವೇ ಅತಿ ಶ್ರೇಷ್ಟವೆಂದು ಭಾವಿಸುವನು. ಮೂಲ ತತ್ತ್ವದ ದೃಷ್ಟಿಯಿಂದ ಎಲ್ಲರೂ ಒಂದೆ. ಶೈವರು ಶಿವನನ್ನು ಅಮಿತ ಶಕ್ತಿಶಾಲಿ ಎನ್ನುವರು, ವೈಷ್ಣವರು ತಮ್ಮ ಪ್ರಚಂಡ ಪರಾಕ್ರಮಶಾಲಿ ವಿಷ್ಣುವನ್ನು ನಂಬುವರು. ದೇವಿಯ ಉಪಾಸಕರು ತಮ್ಮ ದೇವಿಯೇ ಪ್ರಪಂಚದಲ್ಲೆಲ್ಲಾ ಸರ್ವಶಕ್ತಳು ಎಂಬ ತಮ್ಮ ಭಾವನೆಯಲ್ಲಿ ಯಾರಿಗೂ ಸೋಲುವ ಹಾಗಿಲ್ಲ. ನಿಮಗೆ ಶಾಶ್ವತ ಭಕ್ತಿ ಬೇಕಾದರೆ ದ್ವೇಷ ಭಾವನೆಯನ್ನು ತ್ಯಜಿಸಿ. ಭಕ್ತಿಮಾರ್ಗಕ್ಕೆ ದ್ವೇಷ ದೊಡ್ಡ ಆತಂಕ. ಯಾವ ಭಕ್ತ ಯಾರನ್ನೂ ದ್ವೇಷಿಸುವುದಿಲ್ಲವೋ ಅವನು ದೇವರನ್ನು ಸೇರುತ್ತಾನೆ. ಆದರೂ ತನ್ನ ಇಷ್ಟದ ಮೇಲೆ ಭಕ್ತಿ ಅವಶ್ಯಕ "ವಿಷ್ಣು ರಾಮ ಇಬ್ಬರೂ ಒಂದೇ ಎನ್ನುವುದು ನನಗೆ ಗೊತ್ತಿದೆ. ಆದರೂ ಕಮಲಲೋಚನನಾದ ರಾಮನೇ ನನ್ನ ಸರ್ವಸ್ವ" ಎನ್ನುವನು ಹನುಮಂತ.

ಪ್ರತಿಯೊಬ್ಬರೂ ವಿವಿಧ ಸ್ವಭಾವದವರು. ಈ ಸ್ವಭಾವದ ವೈವಿಧ್ಯ ಅವರಲ್ಲಿರಬೇಕು. ಆದಕಾರಣ ಪ್ರಪಂಚದಲ್ಲಿ ಒಂದೇ ಧರ್ಮ ಇರಲಾರದು. ಸಧ್ಯಕ್ಕೆ ದೇವರ ದಯೆಯಿಂದ ಒಂದೇ ಧರ್ಮವಿಲ್ಲದಿರಲಿ. ಒಂದೇ ಧರ್ಮವಿದ್ದರೆ ಸಾಮರಸ್ಯ, ವಿಶ್ರೃಂಖಲತೆ ಪ್ರಾಪ್ತವಾಗುವುದು. ಒಬ್ಬನು ತನ್ನ ಸ್ವಭಾವದಂತೆ ವರ್ತಿಸಬೇಕು. ತನ್ನ ದಾರಿಯಲ್ಲೇ ಮುಂದುವರಿಸಲು ಪ್ರೋತ್ಸಾಹಿಸುವಂತಹ ಗುರು ಸಿಕ್ಕಿದರೆ ಅವನಿಗೆ ಅನುಕೂಲ. ಅವನು ಮುಂದೆ ಸಾಗುವನು. ಪ್ರತಿಯೊಬ್ಬರೂ ಅವರ ಸ್ವಭಾವಕ್ಕೆ ತಕ್ಕಂತೆ ವರ್ತಿಸಲು ಅವಕಾಶ ಕೊಡೋಣ. ಅವನನ್ನು ಬೇರೆ ಮಾರ್ಗದಲ್ಲಿ ಹೋಗುವಂತೆ ಬಲಾತ್ಕರಿಸಿದರೆ ಆಗಲೆ ಏನನ್ನು ಅವನು ಪಡೆದಿರುವನೋ ಅದನ್ನು ಕಳೆದುಕೊಂಡು ಕೆಲಸಕ್ಕೆ ಬಾರದವನಾಗುವನು. ಒಬ್ಬನ ಮುಖ ಮತ್ತೊಬ್ಬನ ಮುಖದಂತೆ ಹೇಗೆ ಇಲ್ಲವೊ ಹಾಗೆಯೆ ಒಬ್ಬನ ಸ್ವಭಾವ ಮತ್ತೊಬ್ಬನ ಸ್ವಭಾವದಂತೆ ಇಲ್ಲ. ತನ್ನ ವೈವಿಧ್ಯಕ್ಕೆ ತಕ್ಕಂತೆ ಅವನ ಪ್ರಗತಿಗೆ ಅವಕಾಶವನ್ನೇಕೆ ಕೊಡಬಾರದು? ಒಂದೊಂದು ಮನಸ್ಸು ಒಂದೊಂದು ಕಡೆಗೆ ಹರಿಯುತ್ತಿದೆ. ಅದನ್ನು ಒಂದೇ ಕಡೆಗೆ ಹರಿಯುವಂತೆ ಮಾಡಿದರೆ ಅದರ ವೇಗ ಮತ್ತು ಶಕ್ತಿ ಹೆಚ್ಚುವುವು. ಅದನ್ನು ಬೇರೊಂದು ಕಡೆಗೆ ತಿರುಗಿಸಲು ಪ್ರಯತ್ನಪಟ್ಟರೆ ಪರಿಣಾಮ ಬೇರೆ ಆಗುವುದು. ಅದರ ಗಾತ್ರ, ವೇಗ ಎರಡೂ ಕಡಿಮೆಯಾಗುವುವು. ಈ ಜೀವನ ಅತಿಮುಖ್ಯವಾದುದು. ಒಬ್ಬನ ಪ್ರಕೃತಿಗೆ ತಕ್ಕಂತೆ ಅದನ್ನು ವೃದ್ಧಿಗೊಳಿಸಬೇಕು. ಭರತಖಂಡದಲ್ಲಿ ಧರ್ಮದ ಹೆಸರಿನಲ್ಲಿ ದ್ವೇಷವಿರಲಿಲ್ಲ, ಪ್ರತಿಯೊಂದೂ ಧರ್ಮವೂ ಸುರಕ್ಷಿತವಾಗಿತ್ತು. ಅದಕ್ಕೆಯೇ ಧರ್ಮ ಈಗಲೂ ಜೀವಂತವಾಗಿದೆ. ಧರ್ಮದ ವ್ಯಾಜ್ಯಕ್ಕೆ ಮೂಲಕಾರಣ ಒಂದು ಮಾತ್ರ ಸತ್ಯವಾಗಿರಬೇಕು, ಯಾರು ಅದನ್ನು ನಂಬುವುದಿಲ್ಲವೋ ಅವರು ಮೂರ್ಖರಾಗಬೇಕು, ಇಲ್ಲವೇ ಮಿಥ್ಯಾಚಾರಿಗಳಾಗಿರಬೇಕು, ಹಾಗೆ ಆಗಿಲ್ಲದೆ ಇದ್ದರೆ ಅವರು ತನ್ನನ್ನು ಅನುಸರಿಸುತ್ತಿದ್ದರು ಎಂಬ ಭಾವನೆ.

ದೇವರು, ಮನುಷ್ಯ ಒಂದೇ ಧರ್ಮವನ್ನು ಅನುಸರಿಸಬೇಕೆಂದು ಯೋಚಿಸಿದ್ದರೆ ಇಷ್ಟೊಂದು ಧರ್ಮಗಳು ಏಕೆ ಹುಟ್ಟಿದುವು? ಒಂದೇ ಧರ್ಮವನ್ನು ಎಲ್ಲರ ಮೇಲೂ ಬಲಾತ್ಕರಿಸುವುದಕ್ಕೆ ಬೇಕಾದಷ್ಟು ಪ್ರಯತ್ನ ನಡೆದಿದೆ. ಕತ್ತಿಯ ಬಲದಿಂದ ಎಲ್ಲರೂ ಒಂದೇ ಧರ್ಮವನ್ನು ಅನುಸರಿಸಬೇಕೆಂದು ಬಲಾತ್ಕಾರ ಮಾಡಿದರೂ ಅಲ್ಲೇ ಹತ್ತಾರು ಧರ್ಮಗಳು ಹುಟ್ಟಿವೆ ಎಂದು ಇತಿಹಾಸ ಸಾರುವುದು. ಒಂದೇ ಧರ್ಮ ಎಲ್ಲರಿಗೂ ಸರಿಹೋಗುವುದಿಲ್ಲ. ಮನುಷ್ಯನು ಕ್ರಿಯೆ ಪ್ರತಿಕ್ರಿಯೆ ಇವೆರಡರ ಪರಿಣಾಮ. ಇದರಿಂದಲೇ ಅವನು ಆಲೋಚಿಸುವುದಕ್ಕೆ ಸಾಧ್ಯ. ಇಂತಹ ಶಕ್ತಿ ಮನುಷ್ಯನ ಬುದ್ಧಿಶಕ್ತಿಯನ್ನು ಪ್ರಚೋದಿಸದೆ ಇದ್ದರೆ ಅವನಿಗೆ ಆಲೋಚಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಮನುಷ್ಯ ಆಲೋಚನಾ ಜೀವಿ. ಮನಸ್ಸು ಇರುವವನೇ ಮನುಷ್ಯ. ಆಲೋಚನಾಶಕ್ತಿಯನ್ನು ಕಳೆದುಕೊಂಡೊಡನೆಯೇ ಅವನು ಪ್ರಾಣಿಗಿಂತ ಮೇಲಾಗಲಾರ. ಯಾರಿಗೆ ಅಂತಹ ಮನುಷ್ಯ ಇಷ್ಟ? ಭರತಖಂಡದ ಜನರು ದೇವರ ದಯೆಯಿಂದ ಸದ್ಯಕ್ಕೆ ಹಾಗೆ ಆಗದಿರಲಿ.

ಏಕತ್ವದಲ್ಲಿ ವೈವಿಧ್ಯದ ಜ್ಞಾನ ಮನುಷ್ಯನನ್ನು ಮನುಷ್ಯನಂತೆ ಇಟ್ಟಿರುವುದಕ್ಕೆ ಅವಶ್ಯಕ. ಪ್ರತಿಯೊಂದರಲ್ಲಯೂ ವೈವಿಧ್ಯವನ್ನು ನಾವು ಕಾಪಾಡಬೇಕು. ವೈವಿಧ್ಯ ಇರುವವರೆಗೆ ಸೃಷ್ಟಿ ಇರುವುದು, ವೈವಿಧ್ಯ ಎಂದರೆ ಒಂದು ಸಣ್ಣದು ಮತ್ತೊಂದು ದೊಡ್ಡದು ಎಂದು ಅರ್ಥವಿಲ್ಲ. ಪ್ರತಿಯೊಬ್ಬನೂ ತನ್ನ ಜೀವನಕಾರ್ಯಕ್ಷೇತ್ರದಲ್ಲಿ ತನ್ನ ಪಾಲಿನ ಪಾತ್ರವನ್ನು ಸರಿಯಾಗಿ ಅಭಿನಯಿಸಿದರೆ ವೈವಿಧ್ಯವನ್ನು ಸುರಕ್ಷಿತವಾಗಿ ಕಾಪಾಡಬಹುದು. ಪ್ರತಿಯೊಂದು ಧರ್ಮದಲ್ಲಿಯೂ ಯೋಗ್ಯರು ಮಹಾಪುರುಷರು ಇರುವರು. ಅವರು ತಮ್ಮ ಧರ್ಮಕ್ಕೆ ಗೌರವವನ್ನು ತರುವರು. ಎಲ್ಲಾ ಧರ್ಮಗಳಲ್ಲಿಯೂ ಇಂತಹವರು ಇರುವುದರಿಂದ ಯಾವ ಧರ್ಮದವರಿಗೂ ಮನಸ್ತಾಪ ಇರಬೇಕಾಗಿಲ್ಲ. ಎಲ್ಲಾ ಧರ್ಮಗಳು ನೀತಿಯ ಮೇಲೆ ನಿಂತಿರಬೇಕು. ವ್ಯಕ್ತಿಯ ಶೀಲಶುದ್ಧಿ ಧರ್ಮಕ್ಕಿಂತ ಮೇಲಾದುದು. ಆಚಾರವೆಂದರೆ ಬಾಹ್ಯ ಮತ್ತು ಆಂತರಿಕ ಪರಿಶುದ್ಧಿ ಎಂಬುದನ್ನು ಗಮನಿಸಬೇಕು. ನಿನಗೆ ನೀನು ಒಳ್ಳೆಯದನ್ನು ಮಾಡಿಕೊಳ್ಳುವಂತೆ ಇತರರಿಗೂ ಒಳ್ಳೆಯದನ್ನು ಮಾಡಬೇಕು.

**(ಸಿಯಾಲ್‌ಕೋಟೆ ಭಾಷಣ: *'ಕೊಲೊಂಬೋಯಿಂದ ಅಲ್ಮೋರಕೆ'*** ಕೃತಿಯಿಂದ : ಮೈಸೂರಿನ ಶ್ರೀರಾಮಕೃಷ್ಣಾಶ್ರಮದ ಪ್ರಕಟಣೆ)

## ಪುಸ್ತಕಾವಲೋಕನ

ಪು: ಇರುವಂತಿಗೆ (ವೈದೇಹಿ ಗೌರವ ಗ್ರಂಥ) ಸಂ: **ಸವಿತಾನಾಗಭೂಷಣ ಮತ್ತು ಆರ್ ತಾರಿಣಿ ಶುಭದಾಯನಿ** ಪ್ರ: **ವೈದೇಹಿ ಗೌರವ ಗ್ರಂಥ ಸಮಿತಿ,** ಶಿವಮೊಗ್ಗ (೯೪೮೧೩೫೧೦೭೯) ಪು: **೫೯೦** **ಬೆಲೆ: ರೂ. ೭೦೦/-**

# ವೈದೇಹಿಯವರಿಗೆ ಸಾರ್ಥಕ ಗೌರವ ಗ್ರಂಥ




ಬದುಕು ಹಾಗೂ ಬರಹಗಳನ್ನು ಹದವರಿತು ಕಟ್ಟಿಕೊಳ್ಳಲು ಬೌದ್ಧಿಕ ಪ್ರಖರತೆ, ಸೃಜನಶೀಲ ಸೂಕ್ಷ್ಮತೆ, ಜೀವದ ಒಳಸೊಲ್ಲುಗಳನ್ನು ಆಲಿಸಬಲ್ಲ ಅಪಾರ ಸಂವೇದನಾಶೀಲತೆಗಳು ಒಂದರೊಳಗೊಂದು ಏಕವಾಗಿ ಬೆಸೆದಿರಬೇಕಗುತ್ತದೆ. ಹಾಲು ಹೆಪ್ಪಾಗಲು ಎಂಥ ಬಿಸಿ ಬೇಕು, ಎಷ್ಟು ಹನಿ ಮಜ್ಜಿಗೆ ಬೇಕು, ಸಾರು ರುಚಿಗೊಳ್ಳಲು ಎಷ್ಟು ಕುದಿ ಸಾಕು ಎಂಬೆಲ್ಲ ದೈನಂದಿನ ಬದುಕಿನ ಹದವರಿತ ಹೆಣ್ಣುಲೋಕವು ಕಥನದಲೂ ಅದನ್ನು ಸಿದ್ಧಿಸಿಕೊಂಡ ವಿದ್ಯಮಾನವು ವೈದೇಹಿಯುವರ 'ಒಟ್ಟೂ ಬರವಣಿಗೆಯಲ್ಲಿ ಸಂಭವಿಸಿದೆ. ಸುಮಾರು ನಾಲ್ಕು ದಶಕಗಳ ಕಾಲ ನಿರಂತರವಾಗಿ ಹೆಣ್ಣು ಮನಸಿನ ಬೆಂಕಿ ಬೆಳಕು ನೆರಳು ಎಲ್ಲವನ್ನೂ ಸೂಕ್ಷವಾಗಿ ಅಕ್ಷರಗಳಲ್ಲಿ ಪ್ರತಿಫಲಿಸಿದ ವೈದೇಹಿಯವರಿಗೆ ೭೫ ವರ್ಷಗಳು ತುಂಬಿದ ವಿಶಿಷ್ಟ ಸಂದರ್ಭದಲ್ಲಿ 'ಇರುವಂತಿಗೆ' ಹೆಸರಿನ ಗೌರವಗ್ರಂಥವನ್ನು ಅರ್ಪಿಸಲಾಯಿತು. ಕನ್ನಡದ ಸೂಕ್ಷ್ಮಸಂವೇದನೆಯ ಕಥೆಗಾರ್ತಿ ವೈದೇಹಿಯವರಿಗೆ ಅಷ್ಟೇ ಸೂಕ್ಷ್ಮಸಂವೇದನೆಯ ಕವಯತ್ರಿ ಸವಿತಾ ನಾಗಭೂಷಣರು ಇನ್ನೋರ್ವ ಗಮನಾರ್ಹ ಲೇಖಕಿ ತಾರಿಣಿ ಶುಭದಾಯಿನಿಯವರೊಂದಿಗೆ ಅಭಿನಂದನಾಪೂರ್ವಕವಾಗಿ ಕಟ್ಟಿಕೊಟ್ಟ ಕೃತಿಯಿದು. ವೈದೇಹಿಯವರ ಬದುಕು ಬರಹಗಳನ್ನು ಅದರೆಲ್ಲ ಆಯಾಮದೊಂದಿಗೆ ಒಡಲುಗೊಂಡು ಕಟ್ಟಿದ ಶ್ರದ್ಧೆಯ ಕಾಯಕವಿದು .ಕನ್ನಡದ ಪ್ರಮುಖ ವಿಮರ್ಶಕರು, ಸೃಜನಶೀಲ ಬರಹಗಾರರು, ವೈದೇಹಿಯವರಕುಟುಂಬಸ್ಥರು, ಒಡನಾಡಿಗಳು ಎಲ್ಲ ಸೇರಿ ಕಟ್ಟಿದ ಇಲ್ಲಿನ ಬರಹಗಳನ್ನು ಸಂಪಾದಕೀಯ ಬಳಗವು ಬಂಧ ಸಡಿಲಾಗದಂತೆ ಅಂದಗೆಡದರೆ ಒಟ್ಟಿಗೆ ಕಟ್ಟಿದ ಬಗೆ ವಿಶಿಷ್ಟವಾಗಿದೆ. ವೈದೇಹಿ ಅಧ್ಯಯನಕ್ಕೆ'ಇರುವಂತಿಗೆ'ಯು ಸಮಗ್ರಆಕರಗ್ರಂಥವಾಗಿರೂಪುಗೊಂಡಿದ್ದು, ಅವರ ಬರಹದ ಬನಿಯನ್ನು ಮುಂದಿನ ಪೀಳಿಗೆಗೂ ಕಾಪಿಡುವದ್ರವ್ಯಇಲ್ಲಿದೆ.

ಕನ್ನಡ ಸಾಹಿತ್ಯದ ಸಂದರ್ಭಗಲ್ಲಿ ಸ್ತ್ರೀಸಂವೇದನೆಗೆ ವಿಶಿಷ್ಟ ಮೊನಚು ಹಾಗೂ ಹೊಳಪನ್ನು ತಂದಿತ್ತವರು ವೈದೇಹಿ.ಎಪ್ಪತ್ತರ ದಶಕದಲ್ಲಿ ಮೂಡಿದ ಮಹಿಳಾಪರ ಚಿಂತನೆಯು ರಾಜಕೀಯು ದೃಷ್ಟಿಕೋನಕ್ಕೆ, ಹೆಣ್ಣು ದೇಹ ಹಾಗೂ ಮನಸ್ಸುಗಳನ್ನೊಳಗೊಂಡ ಅಖಂಡ ಸಂವೇದನೆಯ ಕೇಂದ್ರವೊಂದನ್ನು ಅವರ ಬರಹಗಳು ಜೋಡಿಸಿದವು. "ಅರೆ ಇದೇನಿದು? ಇವರು ಮಹಿಳಾ ಮಾನಸಲೋಕವನ್ನರಿಯಲು-ಬರೆಯಲು ಹುಟ್ಟಿಬಂದ ಇತಿಹಾಸಕಾರ್ತಿಯೇ? ಸಂಶೋಧಕಿಯೇ? ಅಥವಾ ಕೇವಲ ಸಾಕ್ಷಿಪ್ರಜ್ಞೆಯೆ?" ಎಂಬ ಪ್ರಶ್ನೆಯನ್ನು ಕೃತಿಯ ಪ್ರಸ್ತಾವನೆಯಲ್ಲಿ ಸವಿತಾ ನಾಗಭೂಷಣ ಅವರು ಎತ್ತುತ್ತಾರೆ. ಕೃತಿಯ ಒಡಲ್ಲಿರುವ ಅಷ್ಟೂ ಲೇಖನಗಳು ಈ ಮೂಲ ಪ್ರಶ್ನೆಗಳನ್ನು ಹಲವು ನೆಲೆಗಳಿಂದ ಉತ್ತರಿಸುತ್ತ ಹೋಗಿವೆ. ಪ್ರತಿಚಿಂತನೆಯೊಂದನ್ನು ನಿರ್ಮಿಸಬಲ್ಲ ಸ್ವಾಯತ್ತತೆಯನ್ನು ವೈದೇಹಿಯವರ ಬರಹಗಳಲ್ಲಿ ಗುರುತಿಸುವ ಕೆಲಸವನ್ನು ಕೃತಿಯು ಸಮರ್ಪಕವಾಗಿ ನಿಭಾಯಿಸಿದೆ.

'ಇರುವಂತಿಗೆ'ಯ ವಿಶೇಷತೆ ಇರುವುದು ವೈದೇಹಿಯವರ ಸಾಹಿತ್ಯದ ಕುರಿತ ವಿಮರ್ಶೆಯ ಸಮತೋಲಿತ ಖಚಿತತೆ ಹಾಗೂ ಅವರ ಬಾಂಧವ್ಯ ಲೋಕದ ಆರ್ದ್ರತೆಗಳೆರಡನ್ನೂ ಬೆಸೆಯುವ ಬಗೆಯಲ್ಲಿ. ಗೌರವಗ್ರಂಥಗಳಲ್ಲಿರುವ ಅತಿಪ್ರಶಂಸೆಯ ಗೀಳಿನಿಂದ ಇದು ಪಾರಾಗಿದೆ!. ವೈದೇಹಿಯವರು ಕಾವ್ಯ, ಕತೆ, ಕಾದಂಬರಿ, ಪ್ರಬಂಧ, ಮಕ್ಕಳ ನಾಟಕ, ಜೀವನಚರಿತ್ರೆ, ಅನುವಾದ ಹೀಗೆ ಹಲವು ಪ್ರಕಾರಗಳಲ್ಲಿ ತಮ್ಮ ಸೃಜನಶಿಲತೆಯನ್ನು ವಿಸ್ತರಿಸಿಕೊಂಡವರು. ಆದರೆ ಈ ಎಲ್ಲ ಬರವಣಿಗೆಯ ಮೂಲದಲ್ಲಿರುವುದು ಅವರ ಕಥನಗಾರಿಕೆಯ ಪ್ರತಿಭೆ. ಅವರ ಪ್ರಬಂಧಗಳಲ್ಲಿನ ತಣ್ಣನೆಯ ಧ್ಯಾನ, ಕತೆಗಳಲ್ಲಿನ ಮಾತುಗಳ ಮೊನಚು, ಪ್ರದೇಶಿಕ ನುಡಿಗಳ ಜೀವಂತ ಆವರಣ ಇವೆಲ್ಲ ಅವರ ಕಥನವನ್ನು ಅನನ್ಯಗೊಳಿಸಿದ ನೆಲೆಗಳು. ರಾಜೇಂದ್ರಚೆನ್ನಿಯವರು ವೈದೇಹಿಯವರ ಕಥಾಪಾತ್ರಗಳ ಮಾತುಗಳಿಗಿರುವ ಧ್ವನಿಶಕ್ತಿಯ ಸೂಕ್ಷ್ಮ ಸ್ತರಗಳನ್ನು 'ಶ್ರಾವಣ ಪ್ರತಿಭೆ'ಯಾಗಿ ಗ್ರಹಿಸಿದರೆ, ಡಿ.ಎಸ್. ನಾಗಭೂಷಣರು ಅದೇ ಮಾತುಗಳು ಕೆಲವು ಕತೆಗಳಲ್ಲಿ ಗೌಜು, ಗದ್ದಲಗಳಾಗಿ ಉಳಿದುಬಿಡುವ ಮಿತಿಯನ್ನೂ ಗುರುತಿಸುತ್ತಾರೆ. ಕೆ.ವಿ. ತಿರುಮಲೇಶರು "ಗುಣಾಢ್ಯನ ಆಕಾಶಕ್ಕೆ ನಿಮ್ಮದೊಂದು ಪರತ್ಯಾಕಾಶ" ಎನ್ನುವ ಮೂಲಕ ಅನುಕ್ತವಾಗಿ ಉಳಿದು ಬಿಡಬಹುದಾಗಿದ್ದ ಅಂಚಿನಲೋಕದ ಕಥೆಗಳನ್ನು ಉಜ್ವಲವಾಗಿಸಿದ ವೈದೆಹಿತನವನ್ನು ಬೆರಗಲ್ಲಿ ನಿರೂಪಿಸುತ್ತಾರೆ. 'ಮಲ್ಲಿನಾಥನಧ್ಯಾನ' ಪ್ರಬಂಧ ಸಂಕಲನವು ಅತ್ಯಂತ ಸಮರ್ಥವಾದ ಸಾಂಸ್ಕೃತಿಕ ಪಠ್ಯವೂ ಹೌದೆಂಬುದನ್ನು ಎಂ.ಎಸ್. ಆಶಾದೇವಿಯವರು ಪ್ರತಿಪಾದಿಸಿದರೆ, ವೈದೇಹಿಯವರ ಮಕ್ಕಳ ಸಾಹಿತ್ಯವನ್ನು ಕೆ.ವಿ. ಅಕ್ಷರಅವರು 'ವಿತರ್ಕ'ವೆಂಬ ಪರಿಕಲ್ಪನೆಯಲ್ಲಿ ಹಿಡಿದಿಡುತ್ತಾರೆ. ತರ್ಕತಾರತಮ್ಯವನ್ನು ಮೀರಿದ ರಾಜಕೀಯ ನಿಲುವೊಂದರ ಪ್ರತಿಪಾದನೆಯುಗಿಯೂ ಅವರು ಇದನ್ನು ಗುರುತಿಸಿಕೊಳ್ಳಿತ್ತಾರೆ

ಸ್ತ್ರೀವಾದದ ಸೈದ್ಧಾಂತಿಕ ಹತಾರುಗಳನ್ನು ಬಾಟ್ಲಿಂಗ್ ಪೇಪರಿನಂತೆ ಹೀರಿಕೊಂಡು ಅದನ್ನು ವಿಸ್ತರಿಸಿದ ಬಗೆಯನ್ನು ಬಿ.ಎನ್. ಸುಮಿತ್ರಾಬಾಯಿಯವರು ವಿವರಿಸುವ 'ಬಗೆ 'ಭಿನ್ನವಾದುದು.. ಚಾವಡಿಯಷ್ಟೇ ಹಿತ್ತಲೂ ಉಜ್ವಲವಾದುದೆಂದು ತೋರಿಸಿಕೊಟ್ಟವರು ವೈದೇಹಿ.ಈ ಸತ್ಯವನ್ನು ಪ್ರಸ್ತುತಗೌರವಗ್ರಂಥವು ಧ್ವನಿಸಿದ ಕಾಳಜಿಯು ಗಮನಾರ್ಹವಾಗಿದೆ. ಇಲ್ಲಿ ವೈದೇಹಿಯವರ ಬದುಕಿನ ಬಾಂಧವ್ಯಗಳ ಬಿಸುಪನ್ನು ಮುಟ್ಟಿಸುವಂಥ ಹೃದ್ಯ ಬರಹಗಳಿವೆ. ವೈದೇಹಿ ತುಂಬು ಕುಟುಂಬದಲ್ಲಿ ಬೆಳೆದ ಕುಟುಂಬವತ್ಸಲೆ. ಅವರ ಬರವಣಿಗೆಯ ಕೇಂದ್ರವೂ ಕುಟುಂಬವೇ. ಅವರ ಪತಿ, ಇಬ್ಬರು ಹೆಣ್ಣುಮಕ್ಕಳು, ಮೊಮ್ಮಕ್ಕಳು, ಅಕ್ಕತಂಗಿಯರು, ಓರಗಿತ್ತಿಯರು ಬರೆದ ಆರ್ದ್ರ ಬರಹಗಳು ಕೌಟುಂಬಿಕ ಮಹಾಕಾವ್ಯದಂತಿವೆ. 'ಒಡನಾಟ' ಎಂಬ ಭಾಗದಲ್ಲಿ ಅವರ ಸಮಕಾಲೀನ ಹಾಗೂ ಹಿರಿಕಿರಿಯ ಲೇಖಕ-ಲೇಖಕಿಯರ ಕಣ್ಣಲ್ಲಿ ವೈದೇಹಿಯವರ ಪ್ರತಿಭೆ ವಿಶಿಷ್ಟವಾಗಿ ಮೂಡಿದೆ. ಅವರ ಕಥಾಪಾತ್ರಗಳ ಜತೆಗಿನ ಒಡನಾಟವೂ ಇಲ್ಲಿ ಸೇರಿದೆ!. ಕೃತಿಯ ಕೊನೆಯಲ್ಲಿ ಗಡಿಯಾಚೆಗಿನ ನಂಟು ಎಂಬ ಭಾಗವಿದೆ. ಬಂಗಾಳಿ ಲೇಖಕಿ ನಬನೀತಾದೇವಸೇನ್, ತೆಲುಗು ಲೇಖಕಿ ಓಲ್ಗಾ, ತೇಜಸ್ವಿನಿ ನಿರಂಜನ ಮುಂತಾದವರ ಒಡನಾಟದ ಬರಹಗಳಿವೆ. ವೈದೇಹಿಯವರ ಬರಹಗಳ ಪ್ರಖರತೆಯ ಉಲ್ಲೇಖವಿರುವಂತೆ, ಅವರು ಮಾಡುವ ತಂಬುಳಿ, ಗೊಜ್ಜು, ಹಪ್ಪಳ-ಸಂಡಿಗೆಗಳು, ಉಣಬಡಿಸಿ ಸಂಭ್ರಮಿಸುವ ಅವರ ಅಪ್ಪಟ ತಾಯ್ತನದ ಚಿತ್ರಗಳೂ ಇಲ್ಲಿವೆ. 'ತಿಳಿಸಾರು' ಕವಿತೆಯ ಮೂಲಕ ಜ್ಞಾನದ ಪುರುಷಾಧಿಕಾರವನ್ನು ಪ್ರಶ್ನಿಸುವ ಉಜ್ವಲ ಮಾದರಿಯೊಂದನ್ನು ಕಾಣಿಸಿದ ವೈದೇಹಿ, ಹೆಣ್ತನದ ಸಕಲ ಸಂಭ್ರಮಗಳಿಗೂ ಘನತೆ ತಂದುಕೊಟ್ಟವರು. ಸಂಸಾರದೊಳಗಿನಿಂದಲೇ ಅರಿವಿನ ಹೊಸ ಲಯವನ್ನು ಆತ್ಮವಿಶ್ವಾಸದಿಂದ ಸ್ಥಾಪಿಸಿದ ವೈದೇಹಿಯವರನ್ನು ಅಪರೂಪದ ಬೆಳಕಿನಲ್ಲಿ ಕೃತಿಯು ಕಾಣಿಸಿದೆ.

ಮಹಿಳಾ ಸಾಹಿತ್ಯವೆಂಬ ರಿಯಾಯತಿಯನ್ನು ಎಂದೂ ಬೇಡದ ವೈದೇಹಿಯವರ ಬರಹದ ಕಸುವನ್ನು ಭಾರತೀಯ ಹಾಗೂ ಕನ್ನಡ ಸಾಹಿತ್ಯ ಸಂದರ್ಬದಲ್ಲಿಟ್ಟು ನೋಡುವ ಭಿನ್ನ ಪ್ರಯತ್ನಗಳು ಇಲ್ಲಿವೆ. ಮರಳಿಮಣ್ಣಿಗೆ, ಮಲೆಗಳಲ್ಲಿ ಮದುಮಗಳು, ಡಾಂಬರುಬಂದುದು ಇಂತಹ ಕಥನಗಳು ಆಧುನಿಕತೆಯೊಂದಿಗೆ ನಡೆಸಿದ ಮುಖಾಮುಖಿಯನ್ನು ವೈದೇಹಿ ಕಥನವು ಹೆಣ್ಣುಲೋಕದ ಕಿಂಡಿಯಿಂದ ನಿಭಾಯಿಸಿದರೀತಿಯನ್ನು ಟಿ.ಅವಿನಾಶ್ ಉಲ್ಲೇಖಿಸಿದ್ದಾರೆ. ಇದೆಲ್ಲದರೊಂದಿಗೆ, ಆಧುನಿಕ ಮಹಿಳಾ ಸಾಹಿತ್ಯ ಕುರಿತ ಟಿಪ್ಪಣಿಗಳನ್ನು ಸೇರಿಸಿ 'ಇರುವಂತಿಗೆ'ಯನ್ನು ವಿಶಿಷ್ಟ ಆಕರ'ಗ್ರಂಥವನ್ನಾಗಿ ರೂಪಿಸಲು ಸಂಪಾದಕಿಯರು ಶ್ರಮಿಸಿದ್ದಾರೆ. ಮಹಿಳಾ ಕಾವ್ಯ, ಕಥಾಸಾಹಿತ್ಯ, ಕಾದಂಬರಿಗಳು, ಮಹಿಳಾ ಆತ್ಮಕತೆಗಳನ್ನು ಕುರಿತ ಲೇಖನಗಳು ಇಲ್ಲಿ ಸೇರಿವೆ. ಒಟ್ಟೂ ಹೆಣ್ಣುನೋಟದ ಹೆಣಿಗೆಗೆ ಈ ಲೇಖನಗಳು ಸಾಣೆ ಹಿಡಿಯುವಂತಿವೆ. ಕೊನೆಯಲ್ಲಿ ವೈದೇಹಿಯವರ ಪತ್ರ ಹಾಗೂ ಚಿತ್ರಗಳ ಸಂಗ್ರಹ ಕೃತಿಗೆ ಕಳೆಕಟ್ಟುತ್ತ ತಾವೇ ಮಾತನಾಡುತ್ತವೆ.

ವೈದೇಹಿಯವರೆಡೆಗಿನ ಅಪಾರ ಅಭಿಮಾನ ಹಾಗೂ ಪ್ರೀತಿಯಿಂದ ಕಟ್ಟಿದ 'ಇರುವಂತಿಗೆ'ಯ ಸಂಪಾದಕೀಯದಲ್ಲಿ ಸವಿತಾ ನಾಗಭೂಷಣರ ಮಾತೊಂದಿದೆ. ಅವರು ಈ ಗ್ರಂಥಾರ್ಪಣೆಯ ಬಗ್ಗೆ ಪ್ರಸ್ತಾಪಿಸಿದಾಗ, "ಗೌರವ-ಗಿವ್ರವಎಲ್ಲಾ ಪುರುಷಲೋಕದ್ದು, ಅದೆಲ್ಲ ಬೇಡಕಣೆ" ಅಂದರಂತೆ ವೈದೇಹಿ. ಇದೊಂದು ಬರಿಯ ವಾಗಾಡಂಭರವಾಗದ ಅಚ್ಚ ಪ್ರಾಮಾಣಿಕ ಪ್ರಯತ್ನ ಎಂದರಿವಾದಾಗ ಅವರು ಒಪ್ಪಿಕೊಂಡರು. ಸವಿತಾ ನಾಗಭೂಷಣ ಹಾಗೂ ತಾರಿಣಿ ಶುಭದಾಯಿನಿಯವರ ಸಂಪಾದಕತ್ವದಲ್ಲಿ ಪ್ರಕಟವಾದ ಈ ಹೊತ್ತಗೆ ಯನ್ನು ಅರ್ಥಪೂರ್ಣಗೊಳಿಸುವಲ್ಲಿ ರೇಖಾಂಬಾ ಟಿ.ಎಲ್ ಹಾಗೂ ಪದ್ಮಾಕ್ಷಿ. ಕೆ. ಅವರ ಶ್ರಮವಿದೆ. ಹೆಣ್ಣು ಲಯವೊಂದನ್ನು ಭಾಷೆಯಲ್ಲಿ ಕಟ್ಟುವ ಕಾಯಕವೊಂದು ಹೀಗೆ ಸಂಪನ್ನಗೊಂಡಿದೆ.

**-ಗೀತಾ ವಸಂತ**

ಪು: ನಾನು...ಕಸ್ತೂರ್ (ಕಸ್ತೂರಬಾ ಜೀವನ ಕಥನ) ಲೇ: ಎಸ್.ಎಸ್. ಅನುಪಮಾ ಪ್ರ: ಲಡಾಯಿ ಪ್ರಕಾಶನ, ಗದಗ(೯೪೮೦೨೮೬೮೪೪) ಪು: ೨೧೮ ಬೆಲೆ: ರೂ. ೨೨೦/-

## ಕಸ್ತೂರಬಾ ಬಾಯಲ್ಲಿ ಗಾಂಧಿ ಕಥೆ ಹೇಳಿಸಿದಾಗ...



**ಇ**ದು ಮಹಾತ್ಮ ಗಾಂಧಿಯವರ ೧೫೦ನೇ ಹುಟ್ಟುಹಬ್ಬದ ವರ್ಷ. ಅವರ ಪತ್ನಿ ಕಸ್ತೂರಬಾ ಕೂಡ ಅವರದ್ದೇ ವಯಸ್ಸಿನವರಾದ್ದರಿಂದ (ಹಾಗೆ ನೋಡಿದರೆ ಗಾಂಧಿ ಬಾ ಅವರಿಗಿಂತ ಆರು ತಿಂಗಳು ಕಿರಿಯರು) ಇದು ಅವರ ೧೫೦ನೇ ಹುಟ್ಟುಹಬ್ಬದ ವರ್ಷ ಕೂಡ ಹೌದುಆದರ ಆಚರಣೆಯ ಅಂಗವಾಗಿ ಅವರನ್ನು ಕುರಿತು ಎಂದು ಹೇಳಲಾಗುವ ಹಲವು ಪುಸ್ತಕಗಳು ಹೊರಬರುತ್ತಿವೆ. ಅಂತಹ ಪುಸ್ತಕಗಳಲ್ಲಿ ಇದೂ ಒಂದು.

ಗಾಂಧಿಯುವರ ಪ್ರಯುತ್ನಗಳ ಹೊರತಾಗಿಯೂ ಅನಕ್ಷರಸ್ಥೆಯಾಗಿಯೇ ಉಳಿಯ ಬಯಸಿದ ಕಸ್ತೂರಬಾ ಬಗ್ಗೆ ನಮಗೆ ಅಷ್ಟಿಷ್ಟು ತಿಳಿದಿರುವುದೆಲ್ಲ ಗಾಂಧಿ ಮತ್ತು ಅವರ ಸಹಚರರ ಬರಹಗಳ ಮೂಲಕವೇ. ಹಾಗಾಗಿ ಬಾ ಬಗ್ಗೆ ಹೇಗೆ ಬರೆಯ ಹೊರಟರೂ ಅದರಲ್ಲಿ ಗಾಂಧಿಯೇ ಕೇಂದ್ರವಾಗಿಬಿಡುತ್ತಾರೆ. ಅನುಪಮಾ ಅವರ ಈ ಪುಸ್ತಕವೂ ಇದಕ್ಕೆ ಹೊರತಾಗಿಲ್ಲ. ಆದರೆ ಈ ಪುಸ್ತಕ ಗಾಂಧಿ ಕಥೆಯನ್ನು ಬಾ ಅವರ ಬಾಯಲ್ಲಿ ಹೇಳಿಸುವ ಮೂಲಕ ಪರೋಕ್ಷವಾಗಿ ಬಾ ಅವರ ವ್ಯಕ್ತಿತ್ವವನ್ನೂ ಕಟ್ಟಿಕೊಡುವ ಒಂದು ಪ್ರಯತ್ನ ಮಾಡುತ್ತದೆ. ಈ ಪ್ರಯತ್ನದಲ್ಲಿ ಅದು ತನ್ನ ಮಿತಿಯನ್ನು ಮೀರಲು ಹೋಗಿ ಎಡವುತ್ತದೆ ಎಂಬುದನ್ನೂ ಇಲ್ಲಿ ಹೇಳಿಬಿಡಬೇಕು

ಕಸ್ತೂರಬಾ ಬಾಯಲ್ಲಿ ಗಾಂಧಿ ಕತೆ ಹೇಳಿಸಿದರೆ ಅದೇನೂ ತಪ್ಪಲ್ಲ. ಯಾರ ಬಾಯಲ್ಲೇ ಹೇಳಿಸಿದರೂ ಅದು ಒಳ್ಳೆಯದೇ. ಅದನ್ನು ನಮ್ಮ ಮಧ್ಯಮ ವರ್ಗದ ಕನ್ನಡದ ವಿಶಿಷ್ಟ ಸೊಗಡಿನ ಸು-ಲಲಿತ ಭಾಷಾ ಶೈಲಿಯಲ್ಲಿ, ತಾಯಿ ಮಗಳಿಗೆ ಕಥೆ ಹೇಳುವ ತಂತ್ರವನ್ನು ಬಳಸಿ ಆತ್ಮೀಯವಾಗಿ ಹೇಳುವ ಮೂಲಕ ಈ ಕೃತಿ ಅದನ್ನು ಸಾಧಿಸಿದೆ. ಲೇಖಕಿ ಬಾ ಅವರು ಹುಟ್ಟಿ ಬೆಳೆದು ಬಾಳಿದ ಪೋರ್‌ಬಂದರ್, ರಾಜಕೋಟೆಗಳಿಗೆ ಹೋಗಿ ಸಂಗ್ರಹಿಸಿದ ಮಾಹಿತಿಯಿಂದ ಕಳೆಗಟ್ಟಿರುವ ಪೀಠಿಕೆ, ಅಧ್ಯಾಯಗಳ ವಿಂಗಡಣೆ ಮತ್ತು ಅವುಗಳಿಗೆ ನೀಡಲಾಗಿರುವ ಶೀರ್ಷಿಕೆಗಳು ಲೇಖಕಿ ಗಾಂಧಿ ದಂಪತಿ ಕುರಿತು ಪ್ರೀತಿಯಿಂದಲೇ ಬರೆಯಹೊರಟಿರುವುದನ್ನು ಸೂಚಿಸುತ್ತದೆ. ಆದರೆ ಕೆಲವೆಡೆ ನಿರೂಪಣೆ ಸಂಭಾಷಣೆಗಳ ರೂಪದಲ್ಲಿ ಅತಿ ನಾಟಕೀಯತೆಯನ್ನೂ ಸೃಷ್ಟಿಸಲು ಹೋಗಿ ಗೊಂದಲವನ್ನೂ ಮಾಡಿಕೊಳ್ಳಲಾಗಿದೆ. ಉದಾ: ಗಾಂಧಿ ಕಸ್ತೂರಬಾ ಅವರನ್ನು ತಮ್ಮ ಬ್ರಹ್ಮಚರ್ಯ ಪ್ರತಿಜ್ಞೆಯೊಂದಿಗೆ ಸಹಕರಿಸಲು 'ಕೈಮುಗಿದು' (!) ಕೇಳಿಕೊಳ್ಳುವಾಗ ಮುಂದೆ ಬಾ ತ್ಯಜಿಸಬೇಕಾಗಿ ಬರುವ ಉಪ್ಪು, ಬೇಳೆಗಳ ಪ್ರಸ್ತಾಪ ಈಗಲೇ ಬಂದುಬಿಡುತ್ತದೆ. ಹಾಗೇ ಇನ್ನೊಂದು ಮಾತು: ಈ ಪುಸ್ತಕದಲ್ಲಿ ಸೂಚಿಸಲಾಗಿವಂತೆ ಗಾಂಧಿ ಕಾಮವನ್ನು ಶತ್ರು ಎಂದು ಪರಿಗಣಿಸಿರಲಿಲ್ಲ ಮತ್ತು ಎಲ್ಲರಿಗೂ ಬ್ರಹ್ಮಚರ್ಯ ಬೋಧನೆ ಮಾಡಲಿಲ್ಲ

ಅದಿರಲಿ, ಈ ಮೊದಲೇ ಹೇಳಿದಂತೆ ತಾನು ಅಳವಡಿಸಿಕೊಂಡಿರುವ ತಂತ್ರದ ಮಿತಿಯನ್ನು ಮೀರಲು ಇಡೀ ಪುಸ್ತಕದಲ್ಲಿ ಮಾಡಲಾಗದ ಬಾ ಅವರ ಸ್ವತಂತ್ರ ವ್ಯಕ್ತಿತ್ವವನ್ನು ಕಟ್ಟಿಕೊಡುವ ಪ್ರಯತ್ನವನ್ನು 'ಮಹಾತ್ಮ' ಎಂಬ ಅಧ್ಯಾಯದಲ್ಲಿ,'ಆವರೆಗಿನ ಬರವಣಿಗೆಯ ಓಘಕ್ಕೆ ವ್ಯತಿರಿಕ್ತವಾಗಿ ಮಾಡಲು ಹೋಗಿ, ಈ ತಂತ್ರದ ಉದ್ದೇಶದ ಬಗ್ಗೆಯೇ ಸಂಶಯ ಮೂಡುವಂತಾಗುತ್ತದೆ. ಉದಾ: ಹರಿಲಾಲ್ ಮತ್ತು ಅಂಬೇಡ್ಕರ್ ವಿಷಯ ಬಂದಾಗ (ಜಿನ್ನಾ ಏಕಿಲ್ಲ? ಎಂಬ ಪ್ರಶ್ನೆಯೂ ಇದೆ!) ಸಮಕಾಲೀನ ರಾಜಕಾರಣಕ್ಕೆ ಹಿತವೆನಿಸುವ ಅಭಿಪ್ರಾಯಗಳನ್ನು ಬಾ ಅವರ ಬಾಯಲ್ಲಿ ಹೇಳಿಸುವ ಮೂಲಕ ಸಣ್ಣ ರಾಜಕೀಯದ ಪ್ರಯತ್ನವೂ ಇಲ್ಲಿ ನಡೆದಂತೆ ತೋರುತ್ತದೆ. ಇದರ ಮುಂದುವರೆದ ಭಾಗವಾಗಿಯೇ ಅವರ ಬಾಯಿಂದ ಗಾಂಧಿ ಏನು ಮಾಡಿದರೂ ಅವುಗಳ ನಡುವೆ 'ನಾನು' ಎಂಬುದು ಕೇಂದ್ರದಲ್ಲಿರುತ್ತಿತ್ತು ಎಂದು ಹೇಳಿಸುತ್ತಾ ಅದರ ವಿವರಣೆಗಾಗಿ ತನ್ನ ವೀರ್ಯನಾಶವಾದರೆ ದೇಶವೇ ನಾಶವಾದಂತೆ ಎಂದು ಗಾಂಧಿ ವರ್ತಿಸುತ್ತಿದ್ದರೆಂದು ಬಾ ಅವರ ಬಾಯಲ್ಲಿ ಹೇಳಿಸುವುದು ಗಾಂಧಿ ಮತ್ತು ಬಾ ಇಬ್ಬರಿಗೂ ಮಾಡುವ ಅಪಚಾರವಾಗುತ್ತದೆ. ಇದು ತನ್ನಲ್ಲಿ ಲೈಂಗಿಕತೆಯ ಪಸೆ ಪೂರ್ಣ ಆರುವವರೆಗೂ ತಾನು ಜಗತ್ತಿನೊಂದಿಗೆ ಪರಿಣಾಮಕಾರಿಯಾಗಿ ಸಂವಾದಿಸಲಾರೆ ಎಂಬ ತನ್ನ ವ್ಯಕ್ತಿತ್ವದ ಪರಿಶುದ್ಧತೆಯನ್ನು ಕುರಿತು ಗಾಂಧಿ ಪಟ್ಟ ತಳಮಳದ ಪ್ರತೀಕವಾಗಿತ್ತೇ ಹೊರತು ಸ್ವಕೇಂದ್ರಿತ ಲೋಕ ಚಿಂತನೆಯಲ್ಲ.

ಗಾಂಧಿಯನ್ನು ಅರ್ಥ ಮಾಡಿಕೊಳ್ಳುವ ಇಂತಹ ದೋಷಗಳಿಂದಾಗೆ ಈ ಪುಸ್ತಕ ಒಟ್ಟು ಪರಿಣಾಮದಲ್ಲಿ ಬಾ ಹೇಳಿದ ಗಾಂಧಿ ಕಥೆಯಾಗಿ ಪರಿಣಮಿಸದೆ, ಲೇಖಕಿಯ ಕಣ್ಣಿನ ಗಾಂಧಿ ಕಥೆಯಾಗಿ ಮೂಡಿದೆ. ಈಗಾಗಲೇ ಇಂಗ್ಲಿಷ್‌ನಲ್ಲಿ ಬಂದಿರುವ' 'ದ ಸೀಕ್ರೆಟ್ ಡೈರಿ ಆಫ್ ಕಸ್ತೂರಬಾ', 'ಕಸ್ತೂರ ಬಾ: ಎ ಬಯೋ ಫಿಕ್ಶನ್' ಮತ್ತು ಕಸ್ತೂರಬಾ: ಎ ಸೈಲೆಂಟ್ ಸಫರರ್ ಮುಂತಾದ ಕಲ್ಪಿತ ಮತ್ತು ಗಾಂಧಿ ಕುರಿತು ಷರಾ ಬರೆಯುವ ಶೈಲಿಯ ಕೃತಿಗಳು ಇಂತಹ ವಿವಾದವನ್ನೇ ಎಬ್ಬಿಸಿವೆ. ಕಸ್ತೂರಬಾ ಅವರ ಮುಖವಾಡ ಧರಿಸಿಕೊಂಡ' ಇಂದಿನ ಸ್ತ್ರೀವಾದಿಗಳು ಮತ್ತು ಗಾಂಧಿ ವಿಮರ್ಶೆಯ ಹೆಸರಿನ ಟೀಕಕಾರರು ತಮ್ಮ 'ಕಾರ್ಯಕ್ರಮ'ವನ್ನು ಪ್ರಚುರಪಡಿಸುವ ಪ್ರಯತ್ನ ಇವುಗಳಲ್ಲಿ ಕಂಡಿದೆ. ಆದರೆ ಈ ಕನ್ನಡ ಪುಸ್ತಕ ಈ ಪುಸ್ತಕಗಳಂತೆ ಕಲ್ಪಿತ ಪುಸ್ತಕವೆಂದೂ ಹೇಳಿಕೊಳ್ಳಲಾಗದಷ್ಟು ಚರಿತ್ರೆಯ ವಿವರಗಳಿಗೆ ಬದ್ಧವಾಗಿದ್ದು, ಈ ಅರೆ ಬದ್ಧತೆಯೇ ಇದರ ಸಮಸ್ಯೆಯಾಗಿದೆ.

**-ಡಿಎಸ್ಸೆನ್**

ಪು: ಜಾರ್ಜ್ ಫರ್ನಾಂಡೀಸ್ ಲೇ: ಅಮ್ಮೆಂಬಳ ಆನಂದ ಪ್ರ: ಕನ್ನಡ ಸಂಘ, ಕಾಂತಾವರ(೯೦೭೦೧೬೬೬) ಪು: ೫೬ ಬೆಲೆಳ ರೂ. ೪೫/-

## ಆರಾಧನಾ ಭಾವಕ್ಕೆ ಸೀಮಿತವಾದ ವ್ಯಕ್ತಿಚಿತ್ರ



**ಭಾ**ರತದ ರಾಜಕೀಯ ಸಂದರ್ಭದಲ್ಲಿ ಜಾರ್ಜ್ ಫರ್ನಾಂಡಿಸ್ ಹೆಸರು ಕೇಳಿದಾಕ್ಷಣ ರೋಮಾಂಚನಗೊಳ್ಳದೆ ಇರಲು ಸಾಧ್ಯವಿಲ್ಲ. ದೀರ್ಘ ರೈಲ್ವೇ ಮುಷ್ಕರದ ಸಂಘಟನೆಯ ಮೂಲಕ ದೇಶದ ಆಡಳಿತ ವ್ಯವಸ್ಥೆಯನ್ನೇ ಅಲುಗಾಡಿಸಿದ ಪರಿಣಮಕಾರಿ ಕಾರ್ಮಿಕ ನಾಯಕನಾಗಿ, ಸರ್ವಾಧಿಕಾರದ ತುರ್ತುಪರಿಸ್ಥಿತಿಯ ವಿರುದ್ಧ ಭೂಗತ ಹೋರಾಟ ನಡೆಸಿದ ಧೀಮಂತ ಜನನಾಯಕನಾಗಿ, ಕೊಂಕಣ ರೈಲ್ವೇಯ ರೂವಾರಿಯಾಗಿ, ಸಂಸತ್ ಸದಸ್ಯನಾಗಿ ಮತ್ತು ಕೇಂದ್ರ ಸಚಿವನಾಗಿ ನಿಜ ಸಮಾಜವಾದಿ ರಾಜಕಾರಣವನ್ನುವನ್ನು ಮೆರೆದ ಜಾರ್ಜ್ ಕನ್ನಡದವರು ಎಂಬುದು ನಮಹೆ ಹೆಚ್ಚಿನ ಹೆಮ್ಮೆಯ ಸಂಗತಿಯಾಗಿದೆ.

ಇಂತಹ ಬಹುಮುಖಿ ಆಯಾಮದ ವ್ಯಕ್ತಿತ್ವ ಕುರಿತು ಅವರ ಒಡನಾಡಿಯಾಗಿದ್ದ ಅಮ್ಮೆಂಬಳ ಆನಂದ ಅವರು ರಚಿಸಿರುವ ಈ ಕಿರುಕೃತಿ ಅವರ ಹುಟ್ಟು, ಬಾಲ್ಯ, ವಿದ್ಯಾಭ್ಯಾಸದ ಕುರಿತ ವಿವರಗಳಿವೆ. ನಂತರ ಕುಟುಂಬದ ಒತ್ತಾಯದ ಮೇರೆಗೆ ಪಾದ್ರಿಯಾಗಲು ಹೊರಟು ನಂತರ ದ.ಕ.ದ ಈ ಯುವಕ ಆ ಜಾಯಮಾನಕ್ಕೆ ಒಗ್ಗದೆ ಅಲ್ಲಿಂದ \ಹೊರಬಂದು ಸಮಾಜವಾದಿಗಳ ಆಶ್ರಯ ಪಡೆದು ನಂತರ ಮುಂಬೈಗೆ ತೆರಳಿ ಕಾರ್ಮಿಕ ನಾಯಕರಾಗಿ ಬೆಳೆದು ಮುಂದೆ ದೇಶದ ರಕ್ಷಣಾ ಸಚಿವರಾಗುವವರೆಗೂ ಬೆಳೆದ ಬಗೆಯನ್ನು ಕೃತಿ ಚುಟುಕಾಗಿ ವಿವರಿಸುತ್ತ ಹೋಗುತ್ತದೆ.

ಆಯಾ ಸಂದರ್ಭಗಳಲ್ಲಿ ಜಾರ್ಜ್ ಕುರಿತು ಪ್ರಕಟವಾದ ಪತ್ರಿಕಾ ವರದಿಗಳ ತುಣುಕು, ಜಾರ್ಜ್ ಪತ್ನಿ ಬರೆದ ಲೇಖನ, ಜಾರ್ಜ್ ಸಹೋದರ ಲಾರೆನ್ಸ್ ಫರ್ನಾಂಡಿಸ್ ತುರ್ತು ಪರಿಸ್ಥಿತಿಯಲ್ಲಿ ಅನುಭವಿಸಿದ ಹಿಂಸೆ ಇವೇ ಮೊದಲಾದ ಲೇಖನಗಳನ್ನೂ ಕೃತಿ ಒಳಗೊಂಡಿದೆ. ಆದರೆ ಈ ವ್ಯಕ್ತಿ ಚಿತ್ರ ನಿರೂಪಣೆಯಲ್ಲಿ ' ಲೇಖಕರಲ್ಲಿ ಅವರ ಬಗ್ಗೆ ಇರುವ ಆರಾಧನಾ ಭಾವ ಹೆಚ್ಚು ಪ್ರಭಾವಿಸಿರುವುದು ಎದ್ದುಕಾಣುತ್ತದೆ. ಈ ಕಾರಣಕ್ಕೆ ಕೇವಲ ವಿವರಗಳಿಗೆ ಸೀಮಿತವಾಗಿ ಯಾವುದೇ ಸಂದರ್ಭದ ಕುರಿತ ವಿಶ್ಲೇಷಣೆ, ಸಂವಾದ ಹುಟ್ಟುಹಾಕುವತ್ತ ಲೇಖಕರು ಆಸಕ್ತಿ ತೋರಿಸಿಲ್ಲ. ಉದಾ: ಜನತಾದಳ ತ್ಯಜಿಸಿ ಸಮತಾ ಪಕ್ಷ ಸ್ಥಾಪಿಸಿದ ನಂತರ ಜಾರ್ಜ್ ಎನ್ ಡಿಎ ಜೊತೆ ಕೈಜೋಡಿಸಿದ್ದು ಅವರ ರಾಜಕೀಯ ಜೀವನದ ಪ್ರಮುಖ ಸೈದ್ಧಾಂತಿಕ ಪಲ್ಲಟ. ಇಲ್ಲಿ ಇದರ ಉಲ್ಲೇಖವಿದೆಯೇ ಹೊರತು ಚರ್ಚೆ ಇಲ್ಲ.

ಸರಿಯಾದ ಅನುಕ್ರಮಣಿಕೆ ಇಲ್ಲದ ಕಾರಣ ವಿವರಗಳು ಅಲ್ಲಲ್ಲಿ ಪುನರಾವರ್ತನೆಗೊಂಡಿವೆ. ಕೆಲವು ಲೇಖನಗಳನ್ನು ಇಂಗ್ಲೀಷ್ ಹಾಗೂ ಕನ್ನಡ ಎರಡರಲ್ಲೂ ಪ್ರಕಟಿಸಿರುವ ಔಚಿತ್ಯ ಗೊತ್ತಾಗದು. ಭಾಷೆ ಸರಳವಾಗಿದೆಯಾದರೂ ಹಲವೆಡೆ ಪತ್ರಿಕಾ ವರದಿಗಳ ಸ್ವರೂಪ ಪಡೆದಿರುವುದರಿಂದ ನಿರೂಪಣೆ ಗಾಢವಾಗಿ ತಟ್ಟುವುದಿಲ್ಲ. ಅದೇನೇ ಇದ್ದರೂ, ಜಾರ್ಜ್ ಎಂದರೆ ಯಾರು ಎಂದು ಕೇಳುವ ಹೊಸ ತಲೆಮಾರಿನವರಿಗಾದರೂ ಈ ಕೃತಿ ಉಪಯುಕ್ತವಾಗುವಂತಿದೆ.

**-ಎಂ.ರಾಘವೇಂದ್ರ**

‘ಹೊಸ ಮನುಷ್ಯ; ಓದುಗರೆಲ್ಲರಿಗೂ
ಹೊಸ ವರ್ಷದ ಶುಭಾಶಯಗಳು



**ನಂ ಟಿPಂ**

**ನಂ. ೧೫೯, ‘ಅಂಬರ’, ೧೨ನೇ ತಿರುವು**
**೩ನೇ ಮುಖ್ಯ ರಸ್ತೆ, ಲಾಲ್ ಬಹದ್ದೂರ್ ಶಾಸ್ತ್ರಿ ನಗರ**
**ಶಿವಮೊಗ್ಗ**
**ಸಂಪರ್ಕ: ೯೮೪೪೫೧೮೮೬೬**

‘ಹೊಸ ಮನುಷ್ಯ: ಓದುಗರೆಲ್ಲರಿಗೂ
ಹೊಸ ವರ್ಷದ ಶುಭಾಶಯಗಳು



**ಜಯವಂತ ಕಾಮತ್**
ಮತ್ತು **ಕುಟುಂಬ**
**ಬೆಂಗಳೂರು**

'ಹೊಸ ಮನುಷ್ಯ' ಓದುಗರೆಲ್ಲರಿಗೂ
ಹೊಸ ವರ್ಷದ ಶುಭಾಶಯಗಳು



**ಎಸ್.ಎನ್. ತಿಮ್ಮನಗೌಡ್ರ**
ಮತ್ತು **ಗೆಳೆಯರು**
**ಕೊಪ್ಪಳ**

## ತಿಂಗಳ ಸಾಲುಗಳು



ಧಾರಣ ಸಾಮರ್ಥ್ಯ ಉಳ್ಳದ್ದೇ ಧರ್ಮ. ಜನಕೋಟಿಯ ಯೋಗಕ್ಷೇಮವನ್ನು ವಹಿಸಿಕೊಳ್ಳತಕ್ಕದ್ದು ಮಾತ್ರ ಧರ್ಮವೆನಿಸಿಕೊಳ್ಳುವುದು.

**–ಮಹಾಭಾರತ**

**ಶುಭಾಶಯಗಳೊಂದಿಗೆ**
**ಎಚ್.ಎಮ್. ಶಿವಾನಂದ**
ಮತ್ತು **ಕುಟುಂಬ**
**ಹಂಸಗಾರು**

HOSA MANUSHYA, a kannada Socialist monthly solely owned, edited, published and printed by D.S. Nagabhushana, at HIG-5,Kallahally Extn.,Vinoba Nagara, SHIVAMOGGA-577204. Printed at Replica Offset Printers, No.14/1, 1st Main, Industrial Town, Rajaji Nagara, Bengaluru-560 044 Ph: 08023357963

**Regd. News Paper RNI No. KARKAN/2012/47568**
**Rgd No. KA/SK/SMG-1209/2019-21**

ಇವರಿಗೆ \ To

If undelivered, please return to D.S. Nagabhushana, Editor, 'Hosa Manushya', 'HIG-5, 'Nudi', Kallahalli Extension, Vinoba Nagara, Shivamogga -577204( Karnataka)